# ಉಪನಯನ ಚಂದ್ರಿಕಾ

ಲೇಖಕರು :

ಶ್ರೀ ಶ್ರೀಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳವರು




ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥

'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

## ಶ್ರೀ ಶ್ರೀಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳವರು ಅನುವಾದಿಸಿರುವ ಶ್ರೀ ಶ್ರೀಗಳವರ ಗ್ರಂಥಗಳು

**ಸುಗಮಾ:-** ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು ಸಂಸ್ಕೃತದಲ್ಲಿ ರಚಿಸಿರುವ ಅಧ್ಯಾಸಭಾಷ್ಯದ ವ್ಯಾಖ್ಯಾನ. ಶಂಕರಭಾಷ್ಯಕ್ಕೆ ಅನೇಕ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ಆದರೆ ಅವು ಬೇರೆಬೇರೆ ಪ್ರಸ್ಥಾನಗಳನ್ನು ಅವಲಂಬಿಸುವದರಿಂದ ಶುದ್ಧಶಾಂಕರದರ್ಶನ ಯಾವುದು, ಅದು ಹೇಗೆ ವಿವಾದವಿಲ್ಲದಿರುವದೂ, ವಿರುದ್ಧವಲ್ಲದಿರುವದೂ ಆಗುತ್ತದೆ?- ಎಂಬ ಸಂಶಯಗಳಿಗೆಲ್ಲ ಪ್ರಸ್ಥಾನತ್ರಯಭಾಷ್ಯಗಳನ್ನೇ ಪ್ರಧಾನವಾಗಿ ಹಿಡಿದು, ಕೇವಲ ಶುಷ್ಕತರ್ಕವನ್ನು ಉಪಯೋಗಿಸುವ ವ್ಯಾಖ್ಯಾನಗಳನ್ನು ತಿರಸ್ಕರಿಸಿ, ಸಾರ್ವತ್ರಿಕಾನುಭವದ ಒರೆಗಲ್ಲಿನಲ್ಲಿ ತಿಕ್ಕಿನೋಡಲು ಸಹಾಯಮಾಡುವ ವ್ಯಾಖ್ಯಾನವಿದು. **(ಪುಟ: 292, ಬೆಲೆ: 100ರೂ.)**

**ಶುದ್ಧಶಾಂಕರಪ್ರಕ್ರಿಯಾಭಾಸ್ಕರ:-** 1. ವೇದಾಂತಸಿದ್ಧಾಂತನಿರ್ಣಯ, 2. ಶಾಂಕರ ಸಂಪ್ರದಾಯನಿರ್ಣಯ, 3. ಶಾಂಕರಸಿದ್ಧಾಂತನಿರ್ಣಯ, 4. ಶಾಂಕರವೇದಾಂತ ಪ್ರಕ್ರಿಯಾಸ್ವರೂಪ, 5. ಅಧ್ಯಾರೋಪಾಪವಾದ ಪ್ರಕ್ರಿಯಾಸ್ವರೂಪ, 6. ಶಾಂಕರ ಪ್ರಸ್ಥಾನಕ್ಕೂ ಬೇರೆ ಪ್ರಸ್ಥಾನಗಳಿಗೂ ವ್ಯತ್ಯಾಸ, 7. ಬೌದ್ಧಮತಸಾಮ್ಯ ಶಂಕಾಪರಿಹಾರ- ಎಂದು ಏಳು ಕಿರಣಗಳಿಂದ ಕೂಡಿದೆ. ಒಂದೊಂದು ವಿಷಯವನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕೆಂದು ಬಯಕೆಯುಳ್ಳ ಕೋಮಲಮನಸ್ಸಿನವರನ್ನೂ, ಸಂಕ್ಷೇಪವಾಗಿ ವೇದಾಂತಸಿದ್ಧಾಂತವನ್ನು ತಿಳಿಯಬೇಕೆಂದು ಅಭಿರುಚಿಯುಳ್ಳವರನ್ನು ಉದ್ದೇಶಿಸಿ ಶ್ರೀ ಶ್ರೀಗಳವರು ಸಂಸ್ಕೃತದಲ್ಲಿ ರಚಿಸಿರುವ ಗ್ರಂಥವು. ವೇದಾಂತಸಿದ್ಧಾಂತವನ್ನು ಕೈವಶಮಾಡಿಕೊಳ್ಳಬೇಕೆಂಬುವರಿಗೆ ಅತ್ಯಂತ ಉಪಯುಕ್ತವಾದ ಗ್ರಂಥವು. **(ಪುಟ: 286, ಬೆಲೆ: 120ರೂ.)**

**ತೈತ್ತಿರೀಯಭಾಷ್ಯಾರ್ಥವಿಮರ್ಶಿನೀ:-** ತೈತ್ತಿರೀಯೋಪನಿಷತ್ತಿನ ಆನಂದವಲ್ಲೀ ಮತ್ತು ಭೃಗುವಲ್ಲಿಯನ್ನು ಅಧಿಕರಿಸಿ ರಚಿಸಿರುವ ಶ್ರೀ ಶ್ರೀಗಳವರು ಸಂಸ್ಕೃತದಲ್ಲಿ ವ್ಯಾಖ್ಯಾನವು. ಇವಕ್ಕೆ ಪ್ರಸನ್ನಗಂಭೀರವಾದ ಭಾಷ್ಯವಿದ್ದರೂ ಕೆಲವುಕಡೆಯಲ್ಲಿ ಅತಿಸಂಕ್ಷೇಪವಾಗಿದ್ದು, ಗ್ರಂಥ ಗ್ರಂಥಿಯನ್ನು ಬಿಡಿಸುವದು ಕಷ್ಟಸಾಧ್ಯವಾಗಿದೆ ಹಾಗೂ ವಿಶದವಾಗಿ ಪರಿಶೀಲನೆ ಮಾಡಬೇಕೆಂಬವರಿಗೆ ಬೇರೆ ವ್ಯಾಖ್ಯಾನಗಳೂ ಸರಿಯಾಗಿಲ್ಲದಿರುವದನ್ನು ಗಮನಿಸಿ, ಭಾಷ್ಯಾಕ್ಷರವನ್ನು ಅನುಸರಿಸಿ ಅತಿಸಂಕ್ಷೇಪವೂ ಅತಿವಿಸ್ತಾರವೂ ಅಲ್ಲದ- ಜಿಜ್ಞಾಸುಗಳ ಎಲ್ಲ ಸಂಶಯಗಳನ್ನೂ ನಿವಾರಿಸಲು- ಭಾಷ್ಯಾರ್ಥವಿಮರ್ಶಿನಿಯನ್ನು ಅನುಗ್ರಹಿಸಿರುತ್ತಾರೆ. ಹಾಗೆಯೇ ಅರ್ವಾಚೀನ ವೇದಾಂತಿಗಳು ಹುಟ್ಟುಹಾಕಿದ್ದ ಶಂಕೆಗಳ ಪರಿಹಾರ,ಭಾಷ್ಯಕ್ಕೆ ವಿರುದ್ಧವಾದ ವ್ಯಾಖ್ಯಾನಗಳ ನಿರಾಸ, ವಿಶುದ್ಧಶಂಕರಪ್ರಕ್ರಿಯೆಯ ಶ್ರೇಷ್ಠತೆಯನ್ನು ಚೆನ್ನಾಗಿ ತೋರಿಸಿದ್ದಾರೆ. **(ಪುಟ: 504, ಬೆಲೆ: 250ರೂ.)**

**ಶ್ರೀಮದ್ಭಗವದ್ಗೀತಾಭಾಷ್ಯ:-** ಭಗವದ್ಗೀತಾ-ಶಂಕರಭಾಷ್ಯಸಹಿತವಾದ ಈ ಗ್ರಂಥವನ್ನು ಶ್ರೀ ಶ್ರೀಗಳವರು ಚೆನ್ನಾಗಿ ಪರಿಷ್ಕರಿಸಿ, ಮುಖ್ಯ ವಿಷಯಗಳನ್ನು ವಿಶದೀಕರಿಸುವ ಟಿಪ್ಪಣಿಗಳು, ಆಚಾರ್ಯರ ಮಿಕ್ಕ ಗ್ರಂಥಗಳಲ್ಲಿನ ವಿಷಯವಿವೇಚನೆಯ ಹೋಲಿಕೆಯನ್ನು ಸುಲಭಗೊಳಿಸುವ ಗ್ರಂಥಪರಾಮರ್ಶಿಕೆಗಳು, ಆಯಾ ಗ್ರಂಥದ ಸಾರ, ಶ್ಲೋಕಗಳ ಅಕ್ಷರಾನುಕ್ರಮಣಿಕೆ, ಶಬ್ದಾನುಕ್ರಮಣಿಕೆಗಳನ್ನು ಸೇರಿಸಿ ಕನ್ನಡದಲ್ಲಿ ಪ್ರಕಟಿಸಿದ್ದರು. ಅವುಗಳನ್ನೆಲ್ಲ ಸಂಸ್ಕೃತಕ್ಕೆ ಅನುವಾದಿಸಿರುವ ಗ್ರಂಥವು. **(ಪುಟ: 552, ಬೆಲೆ: 300ರೂ.)**

ಪುರುಷಾರ್ಥಗ್ರಂಥಾವಳಿಃ

# ಉಪನಯನ ಚಂದ್ರಿಕಾ

(ಪ್ರಯೋಗ, ಮಂತ್ರ-ಮಂತ್ರಾರ್ಥ ಸಹಿತ)

ಲೇಖಕರು :
ಶ್ರೀಶ್ರೀಅದ್ವಯಾನಂದೇಂದ್ರಸರಸ್ವತೀಸ್ವಾಮಿಗಳವರು
ಅದ್ವೈತಾಶ್ರಮ, ಬೆಂಗಳೂರು

ಕ್ರಮಾಂಕ : 270

Price List Catalog Sl.No. 191

**ಅಧ್ಯಾತ್ಮಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211
ದೂರವಾಣಿ: 08175-273820
www.adhyatmaprakasha.org.
email: secretary@adhyatmaprakasha.org

ಬೆಂಗಳೂರು ಶಾಖೆ :
ನಂ. 68, (ಹೊಸ ನಂ. 6), ಎ.ಪಿ.ಕೆ. ರಸ್ತೆ, 2ನೇ ಬ್ಲಾಕ್,
ತ್ಯಾಗರಾಜನಗರ, ಬೆಂಗಳೂರು - 28 ದೂರವಾಣಿ : 2676 5548
email: shankara.bhaskara@gmail.com

**2016**

UPANAYANA CHANDRIKA
Written by Sri Sri Adwayanandendra Saraswathi Swamigalu,
No. 111, 4th Cross, 19th Main 1st Block,
Rajajinagar, Bangalore 560 010. Mobile : 94499 76401

*Published by*
Adhyatma Prakasha Karyalaya, Holenarasipur-573211, India.

ಒಂದನೆಯ ಮುದ್ರಣ : 2006 - 1000 ಪ್ರತಿಗಳು
ಎರಡನೆಯ ಮುದ್ರಣ : 2016 - 1000 ಪ್ರತಿಗಳು

ಮುದ್ರಣ ಕಾಗದ : 70 GSM NS Maplitho

ಪುಟಗಳು : 108

ಬೆಲೆ : ರೂ. 50/-

© ಅಧ್ಯಾತ್ಮಪ್ರಕಾಶಕಾರ್ಯಾಲಯದವು

*ಪ್ರತಿಗಳು ದೊರೆಯುವ ಸ್ಥಳ :*
ಅಧ್ಯಾತ್ಮಪ್ರಕಾಶಕಾರ್ಯಾಲಯ
ಹೊಳೆನರಸೀಪುರ - 573 211, ದೂರವಾಣಿ: 08175-273820
www.adhyatmaprakasha.org.
email: secretary@adhyatmaprakasha.org

ಬೆಂಗಳೂರು ಶಾಖೆ :
ಅಧ್ಯಾತ್ಮಪ್ರಕಾಶಕಾರ್ಯಾಲಯ
ತ್ಯಾಗರಾಜನಗರ, ಬೆಂಗಳೂರು - 560 028.
ದೂ : 080-26765548
email: shankara.bhaskara@gmail.com

ಮುದ್ರಣ ಸ್ಥಾನ:
ಶ್ರೀರಾಮ ಪ್ರಿಂಟರ್ಸ್
ನಂ.25, 15ನೇ ಕ್ರಾಸ್, ಶ್ರೀನಿಧಿಲೇಔಟ್,
ಬೆಂಗಳೂರು - 560 062. ಮೊಬೈಲ್: 98453 46197

# ಮುನ್ನುಡಿ

ಕನ್ನಡ ಭಾಷೆಯಲ್ಲಿ ಷೋಡಶಸಂಸ್ಕಾರಗಳ ಆಚರಣೆಯ ಬಗ್ಗೆ ಈಗಾಗಲೇ ಸಾಕಷ್ಟು ಗ್ರಂಥಗಳು ಲಭ್ಯವಿರುವುದು ವಾಚಕರಿಗೆ ತಿಳಿದಿರುವ ವಿಚಾರವಷ್ಟೆ. ಹೀಗಿರುವಾಗ ಉಪನಯನಸಂಸ್ಕಾರದ ವಿಚಾರಕ್ಕೆ ಮತ್ತೊಂದು ಪುಸ್ತಕದ ಆವಶ್ಯಕತೆಯಾದರೂ ಏನು? ಎಂದು ಯಾರಾದರೂ ಪ್ರಶ್ನಿಸಿದರೆ ಅದಕ್ಕೆ ನಾವು ಕೊಡಬಹುದಾದ ಉತ್ತರವೇ ಈ ಪುಟ್ಟಗ್ರಂಥ. ಇದರಲ್ಲಿ ನಾವು ಸಾಮಾನ್ಯ ಗೃಹಸ್ಥರಿಗೂ, ವಟುವಿಗೂ ಹಾಗೂ ಪುರೋಹಿತರುಗಳಿಗೂ ಸಂಬಂಧಪಟ್ಟಂತೆ ಉಪನಯನ ಸಂಸ್ಕಾರದ ವಿವಿಧ ಕಲಾಪಗಳೂ, ಅವುಗಳ ಅರ್ಥವೂ, ವಟುವಿನ ಧರ್ಮನಿಯಮಗಳೂ ಮತ್ತು ಪ್ರತಿಯೊಂದು ಕಲಾಪಕ್ಕೂ ಬೇಕಾದ ಮಂತ್ರ ಮತ್ತು ಮಂತ್ರಾರ್ಥಗಳನ್ನು ಪ್ರಯೋಗವನ್ನೂ ಒಂದೇ ಗ್ರಂಥದಲ್ಲಿ ಒದಗಿಸುವ ಪ್ರಯತ್ನವನ್ನು ಮಾಡಿದ್ದೇವೆ. ಇಂತಹ ಒಂದು ಗ್ರಂಥ ರಚನೆ ಆಗಬೇಕೆಂದು ಒಬ್ಬ ವಟುವಿನ ತಂದೆಯ ಹಿರಿಯಾಸೆಯೇ ಕಾರಣವಾಗಿದೆ.

ಉಪನಯನದ ಶುಭಸಂದರ್ಭದಲ್ಲಿ ಈ ಪುಸ್ತಕವನ್ನು ಉಡುಗೊರೆಯಾಗಿ ಕೊಟ್ಟರೆ ಕರ್ಮದ ಸ್ವರೂಪ ತಿಳಿದು ಇಂತಹ ಕರ್ಮಗಳನ್ನು ಮಾಡುವ ಆಸ್ತಿಕರಿಗೆ ಅನುಕೂಲ ಆಗುವುದೆಂದು ಸಿದ್ಧಗೊಳಿಸಿದೆ. ಇಲ್ಲಿ ಉಪನಯನದ ಸ್ವರೂಪ, ಅದಕ್ಕೆ ಕಾಲ ಅಧಿಕಾರಿಗಳು, ಕಲಾಪಗಳು, ವಟುಧರ್ಮ ಮುಂತಾದ ವಿಷಯಗಳನ್ನು ಅಳವಡಿಸಿದೆ. ಅಲ್ಲದೇ ಹಳೇ ಮೈಸೂರು ಪ್ರಾಂತ್ಯದ ಆಚರಣೆಯಂತೆ ವಿಷಯಗಳು ನಿರೂಪಿಸಲ್ಪಟ್ಟಿವೆ.

ಈಗ ತಮ್ಮ ಕೈಯಲ್ಲಿರುವ ಗ್ರಂಥ ನಮ್ಮ ಉದ್ದೇಶದಂತೆ ಗೃಹಸ್ಥರಿಗೂ, ವಟುಗಳಿಗೂ ಸ್ವಲ್ಪಮಟ್ಟಿಗಾದರೂ ಉಪನಯನ ಸಂಸ್ಕಾರದ ಮಹತ್ತ್ವದ ಅರಿವನ್ನುಂಟುಮಾಡಿ, ಅದರ ಆವಶ್ಯಕತೆಯನ್ನು ಮನಗಾಣುವಂತೆ ಮಾಡಿದರೆ ನನ್ನ ಪ್ರಯತ್ನ ಸಾರ್ಥಕವೆಂದು ಭಾವಿಸುವೆ. ಈ ಗ್ರಂಥವನ್ನು ಸಿದ್ಧಪಡಿಸಲು ಸಹಕರಿಸಿದ ಎಲ್ಲರಿಗೂ ಹಾಗೂ ಮತ್ತೆ ಎರಡನೇ ಮುದ್ರಣವನ್ನು ಹೊರತರುತ್ತಿರುವ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದವರಿಗೂ ನಾರಾಯಣ ಸ್ಮರಣೆಗಳು.

''ಹೇಮ್ನಃ ಸಂಲಕ್ಷ್ಯತೇ ಹ್ಯಗ್ನೌ ವಿಶುದ್ಧಿಃ ಶ್ಯಾಮಿಕಾಪಿ ವಾ''

ಬೆಂಗಳೂರು
18.5.2016

ನಾರಾಯಣ ಸ್ಮರಣೆ
**ಅದ್ವಯಾನಂದೇಂದ್ರಸರಸ್ವತೀ ಸ್ವಾಮೀ**

# ಪ್ರಕಾಶಕರ ನುಡಿ

ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಅತಿಮುಖ್ಯ ಚಟುವಟಿಕೆಯಾದ ಗ್ರಂಥಪ್ರಕಾಶನ ಕಾರ್ಯದಲ್ಲಿ ಈವರೆಗೆ ಹೊರತಂದಿರುವ ನೂರಾರು ಅಧ್ಯಾತ್ಮ ಗ್ರಂಥಗಳ ಸಾಲಿನಲ್ಲಿ ಈ 'ಉಪನಯನ ಚಂದ್ರಿಕಾ' ಎಂಬ ಕರ್ಮಪ್ರಧಾನವಾದ ಗ್ರಂಥವನ್ನು ಅರ್ಪಿಸಲು ಸಂತೋಷ ವಾಗಿದೆ. 'ಅಥಾತೋ ಬ್ರಹ್ಮಜಿಜ್ಞಾಸಾ' ಎಂಬ ಸೂತ್ರಾರ್ಥವನ್ನು ಬರೆಯುವಾಗ ಆಚಾರ್ಯ ಶಂಕರಭಗವತ್ಪಾದರು "ಅಧಿಕಾರಿಗಳು ಸಾಧನಚತುಷ್ಟಯವನ್ನು ಅಳವಡಿಸಿಕೊಂಡ ನಂತರವೇ ಬ್ರಹ್ಮಜಿಜ್ಞಾಸೆಯನ್ನು ನಡೆಸತಕ್ಕದ್ದು" ಎಂದು ಅಪ್ಪಣೆ ಕೊಡಿಸಿರುತ್ತಾರೆ. ಈ ಅಧಿಕಾರಿಗಳಲ್ಲಿ ಶಮ, ದಮ, ತಿತಿಕ್ಷಾದಿ ಸಾಧನಗಳಿಗೆ ಸೋಪಾನವಾಗಿರುವುದೇ 'ಉಪನಯನ ಸಂಸ್ಕಾರ'. ಈ ಸಂಸ್ಕಾರವು ಬ್ರಹ್ಮಜ್ಞಾನಕ್ಕೆ ನೇರವಾದ ಸಾಧನೆಯನ್ನು ತಿಳಿಸಿ ಕೊಡುವ ಕರ್ಮವಾಗಿದೆ. ವಟುವಿಗೆ ಬ್ರಹ್ಮೋಪದೇಶವಾದನಂತರ ಆಚಾರ್ಯನ ಪ್ರಶ್ನೆ "ಕಸ್ಯ ಬ್ರಹ್ಮಚಾರ್ಯಸಿ?" ("ಏತಕ್ಕೆ ಬ್ರಹ್ಮಚರ್ಯವ್ರತಸ್ಥನಾಗಿದ್ದೀಯೆ?") ಎಂದಿದೆ. ಇದಕ್ಕೆ ವಟುವು "ಪ್ರಾಣಸ್ಯ ಬ್ರಹ್ಮಚಾರ್ಯಸ್ಮಿ" (ನಾನು ಪ್ರಾಣದ ಬ್ರಹ್ಮಚಾರಿಯಾಗಿದ್ದೇನೆ) ಎಂದು ಉತ್ತರಿಸುತ್ತಾನೆ. ಹೀಗೆ ಬ್ರಹ್ಮಜ್ಞಾನಕ್ಕೆ ನೇರವಾಗಿ ಸಂಬಂಧಪಟ್ಟ ಕರ್ಮದ ಮಂತ್ರ, ಅರ್ಥ ಮತ್ತು ಶಿಷ್ಟಾಚಾರ ವಿಷಯಗಳನ್ನೊಳಗೊಂಡ ಈ ಗ್ರಂಥವನ್ನು ಪ್ರಕಾಶಪಡಿಸಲು ನಮಗೆ ಹೆಮ್ಮೆ ಎನಿಸುತ್ತದೆ.

ಪೂರ್ವಾಶ್ರಮದಲ್ಲಿ ಸ್ವಯಂವೇದಾಧ್ಯಯನ ಸಂಪನ್ನರೂ, ವೇದಾಂತ ಸಾಧಕರೂ ಹಾಗೂ ನೈಷ್ಠಿಕ ಬ್ರಹ್ಮಚಾರಿಗಳೂ ಆಗಿದ್ದ ಮತ್ತೂರಿನ ವೇ॥ ಬ್ರ॥ ಶ್ರೀ॥ ಚಂದ್ರಮೌಳಿ ಅವಧಾನಿಗಳು, (ಈಗ ಶ್ರೀ ಅದ್ವಯಾನಂದೇಂದ್ರ ಸ್ವರಸ್ವತೀ ಸ್ವಾಮಿಗಳು) ಬಹಳ ಹೆಚ್ಚಿನ ಶ್ರಮವಹಿಸಿ ವಟುಗಳು, ತಂದೆತಾಯಿಗಳು ಮತ್ತು ಪುರೋಹಿತರುಗಳು ಎಲ್ಲರಿಗೂ ಬೇಕೆನಿಸುವ ರೀತಿಯಲ್ಲಿ ಈ ಗ್ರಂಥವನ್ನು ಸಿದ್ಧಪಡಿಸಿದ್ದಾರೆ. ಇವರು ಸಚ್ಚಿದಾನಂದ ಅದ್ವೈತಾಶ್ರಮದಲ್ಲಿ ನಿರಂತರ ಸ್ವಾಧ್ಯಾಯ ಪ್ರವಚನಗಳನ್ನು ನಡೆಸುತ್ತಿದ್ದಾರೆ.

ಈ ಗ್ರಂಥ ಪ್ರಕಟನೆಗೆ ಮೈಸೂರಿನಲ್ಲಿರುವ ಶ್ರೀ ಎ. ವೆಂಕಟೇಶ್‌ಪ್ರಸಾದ್‌ರವರು ಉದಾರವಾಗಿ 10,000/-ರೂಪಾಯಿಗಳನ್ನು ತಮ್ಮ ದೊಡ್ಡಪ್ಪ ದೊಡ್ಡಮ್ಮ ಕೀರ್ತಿಶೇಷ ರಾದ ಛಾಯಾಲಕ್ಷ್ಮೀ ಮತ್ತು ಬಿ.ಎಲ್. ಶಂಕರನಾರಾಯಣರಾವ್ ಇವರ ಸ್ಮರಣಾರ್ಥ ಸಹಾಯ ಮಾಡಿರುತ್ತಾರೆ, ಇವರಿಗೂ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಪುಸ್ತಕವು ಎರಡನೇ ಬಾರಿಗೆ ಹೊರಬರಲು ಸಹಕರಿಸಿದ ಎಲ್ಲ ಭಕ್ತವೃಂದಕ್ಕೂ ಕಾರ್ಯಾಲಯದ ಪರವಾಗಿ ಧನ್ಯವಾದಗಳು.

ಎಂದಿನಂತೆ ವಾಚಕರು ಈ ಗ್ರಂಥವನ್ನೂ ಬರಮಾಡಿಕೊಂಡು ನಮ್ಮ ಪ್ರಯತ್ನದಲ್ಲಿ ಸಹಕರಿಸಿ, ಗ್ರಂಥ ಪ್ರಕಟನೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಹೊಳೆನರಸೀಪುರ

ವೇದಾಂತ ಶಿಬಿರ, 21-10-2016 ಪ್ರಕಾಶಕರು

## ವಿಷಯಾನುಕ್ರಮಣಿಕೆ


| ವಿಷಯ | ಪುಟ |
|---|---|
| 1. ಪ್ರಸ್ತಾವನೆ | 7 |
| 2. ಭಾಗ - 1 : ಉಪನಯನ ಸಂಸ್ಕಾರದ ಕಲಾಪಗಳು | 11 |
| 3. ಭಾಗ - 2 : ಉಪನಯನ ಸಂಸ್ಕಾರ ಮಂತ್ರಗಳು ಮತ್ತು ಅರ್ಥವಿವರಣೆ | 29 |
| 4. ಭಾಗ - 3 : ತ್ರಿಕಾಲ ಸಂಧ್ಯಾವಂದನ ಮಂತ್ರಾಃ | 66 |
| 5. ಭಾಗ - 4 : ಸಮಿದಾಧಾನ ಮಂತ್ರಾಃ | 86 |
| 6. ಭಾಗ - 5 : ಬ್ರಹ್ಮಯಜ್ಞ ಮಂತ್ರಾಃ | 91 |
| 7. ಭಾಗ - 6 : ಪರಿಶಿಷ್ಟ | 100 |
| 8. ಭಾಗ - 7 : ಉಪನಯನ ಪ್ರಯೋಗಃ | 103 |


---

## ಗ್ರಂಥಋಣ


1. **ಯಾಜುಷ ಪೂರ್ವ ಪ್ರಯೋಗ** (ಭಾಗ-1 ಮತ್ತು ಭಾಗ-2)
   ಬನವತಿ ಪ್ರಕಾಶನ, ಬೆಂಗಳೂರು - 560 003

2. **ಯಾಜುಷ ಪ್ರಯೋಗ ರತ್ನಮಾಲಾ**
   ಶಿಬಿರಂಗ ಪ್ರಕಾಶನ, ಬೆಂಗಳೂರು - 560 085

3. **ಸ್ನಾನ ಸಂಧ್ಯಾದಿ ನಿತ್ಯಾಹ್ನಿಕಗಳು**
   ಶ್ರುತಿಶಂಕರ ಸಂಶೋಧನ ಪ್ರತಿಷ್ಠಾಪನಮ್, ಮತ್ತೂರು

4. **ಸಸ್ವರ ಯಜುರ್ವೇದ ಸಂಧ್ಯಾವಂದನಮ್**
   ಶ್ರೀರಾಮಕೃಷ್ಣ ಆಶ್ರಮ, ಮೈಸೂರು

## “ವಟುಗಳೇ! ನಿಮಗೆ ಗೊತ್ತೇ 'ಅಭಿವಾದನ' ಎಂದರೇನು?”

ಗೌರವದಿಂದ ವಿನಯಪೂರ್ವಕವಾಗಿ ತನ್ನ ಹೆಸರನ್ನು ಹೇಳಿ ನಮಸ್ಕಾರ ಮಾಡುವುದಕ್ಕೆ 'ಅಭಿವಾದನ'ವೆನ್ನುತ್ತಾರೆ. 'ಅಭಿವಾದ್ಯತೇ ಆ ಶರೀರೇಣ' — ಅಭಿ + ವದ (ವ್ಯಕ್ತಾಯಾಂ ವಾಚಿ) + 'ಣಿಚ್' ಬಂದು ಭಾವಾರ್ಥದಲ್ಲಿ 'ಲ್ಯುಟ್' — ಎಂಬ ಪ್ರತ್ಯಯದ ನಿಷ್ಪತ್ತಿಯಂತೆ ಈ ಪದ ಬಳಕೆಯಲ್ಲಿದೆ. 'ಅಭಿ' ಎಂಬ ಉಪಸರ್ಗಕ್ಕೆ 'ಮುಂದೆ' ಅಥವಾ ಎದುರಾಗಿ ಎಂತಲೂ, 'ವಾದ್ಯತೇ' ಎಂದರೆ 'ಧ್ವನ್ಯತೇ' — ಶಬ್ದ ಮಾಡುತ್ತಾನೆ ಎಂದೂ ಅರ್ಥವಿರುತ್ತದೆ. ಎಂದರೆ ಅಭಿಮುಖವಾಗಿ ನಿಂತು ತನ್ನ ಗೋತ್ರನಾಮಗಳನ್ನು ಗಟ್ಟಿಯಾಗಿ ಉಚ್ಚರಿಸಿ ನಮಸ್ಕಾರ ಮಾಡುವುದೇ 'ಅಭಿವಾದನ'. ಉಳಿದಂತೆ ನಮಸ್ಕಾರ ಮಾಡುವಾಗ ಹೆಸರು ಹೇಳಿಕೊಂಡು ಮಾಡುವುದಿಲ್ಲ.

(i) ಸಂಧ್ಯಾವಂದನ ಮತ್ತು ಅಗ್ನಿಕಾರ್ಯದಲ್ಲಿ ಗೋತ್ರ, ಹೆಸರು ಹೇಳಿಕೊಂಡು ಅಭಿವಾದನ ಮಾಡಬೇಕು. ಆಚಾರ್ಯ, ತಂದೆ / ತಾಯಿ ಮತ್ತು ಹಿರಿಯರಿಗೆ ಹೀಗೆ ಪ್ರವರಪೂರ್ವಕ ನಮಸ್ಕಾರ ಮಾಡಬೇಕು. ಮೊದಲು 'ಅಭಿವಾದಯೇ' ಎಂದು ಗಟ್ಟಿಯಾಗಿ ಹೇಳಿ ತನ್ನ ಪ್ರವರ, ನಾಮ ಹೇಳಿಕೊಂಡು ತನ್ನ ಬಲಗೈಯಿಂದ ಅವರ ಬಲಪಾದವನ್ನೂ ಎಡಗೈಯಿಂದ ಎಡಪಾದವನ್ನೂ ಸ್ಪರ್ಶಿಸಿ ಕಣ್ಣಿಗೆ ಒತ್ತಿಕೊಳ್ಳಬೇಕು. ಅಭಿವಾದನ ಮಾಡಿಸಿಕೊಂಡವರು “ಆಯುಷ್ಮಾನ್ ಭವ ಸೌಮ್ಯ (ನಾರಾಯಣ) ಶರ್ಮ(3)ನ್” ಎಂದು ಪ್ರತ್ಯಭಿವಾದನ ಮಾಡಬೇಕು.

(ii) ಸಂಧ್ಯಾವಂದನೆ ಮತ್ತು ಅಗ್ನಿಕಾರ್ಯಗಳಲ್ಲಿ ಪ್ರವರನಾಮ ಹೇಳಿಕೊಂಡು 'ಅಭಿವಾದಯೇ' ಎಂದು ನಮಸ್ಕರಿಸುವಾಗ ತನ್ನ ಪಾದವನ್ನು ಮೊದಲು ಮುಟ್ಟಿಕೊಂಡು ನಂತರ ಭೂಸ್ಪರ್ಶಮಾಡಬೇಕು.

**ಆತ್ಮಪಾದೌ ತಥಾಭೂಮಿಂ ಸಂಧ್ಯಾಕಾಲೇಽಭಿವಾದಯೇತ್।**
**ಆಯುರ್ವಿದ್ಯಾಂ ಧನಾರೋಗ್ಯೇ ಪ್ರಾಪ್ನೋತಿ ಪುರುಷಃ ಸದಾ॥** (ಚಂದ್ರಿಕೆ)

(iii) ದೇವರು, ನದೀ, ಸಭೆ, ವೃಕ್ಷ, ಯತಿಗಳು — ಇವರುಗಳಿಗೆ ದೀರ್ಘದಂಡ ನಮಸ್ಕಾರ ಮಾಡಬೇಕು (ಇಲ್ಲಿ ಪ್ರವರಾದಿಗಳು ಬೇಕಿಲ್ಲ).

(iv) ಪ್ರತಿವಚನ / ಪ್ರತ್ಯಭಿವಾದನ ಹೇಳಲು ಬರದವರಿಗೆ ಕೈಜೋಡಿಸಿ ನಮಸ್ಕಾರ ಮಾಡಿದರೆ ಸಾಕು. ಮೂರ್ತಿ, ವಿಗ್ರಹರೂಪದ ದೇವತೆಗಳಿಗೆ ಕೈಗಳನ್ನು ತಲೆಯಮೇಲೂ, ಗುರುಗಳಿಗೆ ಮುಖಭಾಗದಲ್ಲಿಯೂ, ಸ್ನೇಹಿತರುಗಳಿಗೆ ಎದೆಯ ಭಾಗದಲ್ಲೂ ಇಟ್ಟುಕೊಂಡು ನಮಸ್ಕಾರ ಸಲ್ಲಿಸಬೇಕು.

(v) ಹೀಗೆ ಅಭಿವಾದನಾದಿಗಳನ್ನು ಮಾಡಿದರೆ ಆಯುಸ್ಸು, ವಿದ್ಯೆ, ಕೀರ್ತಿ ಮತ್ತು ಬಲ — ಇವು ಅಭಿವೃದ್ಧಿಯಾಗುತ್ತವೆ.

**ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ।**
**ಚತ್ವಾರಿ ಸಂಪ್ರವರ್ಧನ್ತೇ ಆಯುರ್ವಿದ್ಯಾ ಯಶೋಬಲಮ್॥**

॥ ಶ್ರೀರಾಮ ಜಯರಾಮ ಜಯ ಜಯ ರಾಮ ॥

॥ ಶ್ರೀಶಾರದಾ ಗಣೇಶ ಗುರುಭ್ಯೋ ನಮಃ ॥

# ॥ ಉಪನಯನ ಚಂದ್ರಿಕಾ ॥

## ಪ್ರಸ್ತಾವನೆ

ನಮ್ಮ ಭಾರತೀಯ ವೈದಿಕ ಸಂಸ್ಕೃತಿಯು ಸರ್ವಜನಾದರಣೀಯವಾಗಿ ಸರ್ವರಿಗೂ ಸುಖವನ್ನು ಬಯಸುವುದಾಗಿ ವೇದಗಳ ಕಾಲದಿಂದಲೂ ಇಂದಿನವರೆಗೆ ಆಚರಣೆಯಲ್ಲಿ ಒಪ್ಪಿಗೆಯಾಗಿದೆಯೆಂದರೆ ಇದಕ್ಕೆ ಸುಭದ್ರ ತಳಹದಿ ಇರಲೇಬೇಕು. ಅದೇ ಚಾತುರ್ವರ್ಣ್ಯ ಮತ್ತು ವರ್ಣಾಶ್ರಮ ಪದ್ಧತಿ. ಎಲ್ಲಿಯವರೆಗೆ ಈ ವರ್ಣಾಶ್ರಮ ಧರ್ಮಗಳು ಪಾಲಿಸಲ್ಪಡುತ್ತವೋ ಅಲ್ಲಿಯವರೆಗೆ ಸರ್ವರಿಗೂ ಸುಖ ಸಂತೋಷಗಳು ನೆಮ್ಮದಿ ಉಪಶಾಂತತೆಗಳು ದೊರೆಯುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ನಮ್ಮ ಪೂರ್ವಸೂರಿಗಳು ಮುಖ್ಯವಾದ ಬ್ರಾಹ್ಮಣವರ್ಣಕ್ಕೆ ವಿಧಿಸಿರುವ ನಿಬಂಧನೆಗಳೇ ಗರ್ಭಾದಾನಾದಿ ಷೋಡಶ ಸಂಸ್ಕಾರಗಳು. ಸಂಸ್ಕಾರವೆಂದರೆ ಗುಣಾಧಾನ ಮತ್ತು ದೋಷಾಪನಯನ. 'ಸಮ್' ಎಂಬ ಉಪಸರ್ಗಪೂರ್ವಕ 'ಕೃಞ' ಧಾತುವಿನಿಂದ 'ಘಞ್' ಪ್ರತ್ಯಯಾಂತವಾಗಿ ನಿಷ್ಪನ್ನವಾದ ಪದ 'ಸಂಸ್ಕಾರ'. ಯಾವ ಕೆಲಸಕ್ಕಾದರೂ ಅದು ವೈದಿಕವಾಗಿರಲಿ ಅಥವಾ ಲೌಕಿಕವಾಗಿರಲಿ, ಅದನ್ನು ಮಾಡಲು ಯೋಗ್ಯನಾದ ಅಧಿಕಾರಿ ಮತ್ತು ಉತ್ತಮವಾದ ಸಲಕರಣೆ, ಸಂಭಾರ ಗಳು ಬೇಕೇ ಬೇಕು. ಹಾಗೆ ಉತ್ತಮ ಅಧಿಕಾರಿಗಳನ್ನು ತಯಾರುಮಾಡಲು ಮೊದಲು ಅವರಲ್ಲಿರುವ ದೋಷಗಳನ್ನು ಕಳೆದು ನಂತರ ಬೇಕಾದ ಸದ್ಗುಣಗಳನ್ನು ತುಂಬ ಬೇಕು. ಬ್ರಾಹ್ಮಣ ವರ್ಣದವರಲ್ಲಿ ಇಂತಹ ಉತ್ತಮ ಅಧಿಕಾರಿಗಳನ್ನು ಉಂಟು ಮಾಡಿ ಅವರು ತಮ್ಮ ವರ್ಣವಿಹಿತವಾದ ವೇದಾಧ್ಯಯನ ಬ್ರಹ್ಮಚರ್ಯಾದಿಗಳಿಂದ ತಮ್ಮ ಮತ್ತು ಮತ್ತೊಬ್ಬರ ಶ್ರೇಯಸ್ಸಿಗೆ ಕಾರಣವಾಗುವುದಕ್ಕೆ ನಡೆಸುವ ಸಂಸ್ಕಾರವೇ 'ಉಪನಯನ'. ಇದು ಮೇಲೆ ತಿಳಿಸಿದ ಹದಿನಾರು ಸಂಸ್ಕಾರಗಳಲ್ಲಿ ಚೌಲ ಮತ್ತು ವಿವಾಹಕ್ಕೆ ಮಧ್ಯೆ ನಡೆಯುವ ಅತ್ಯಂತ ಮುಖ್ಯವಾದ ಸಂಸ್ಕಾರವಾಗಿದೆ.

'ಉಪನಯನ' ಎಂಬ ಪದಕ್ಕೆ ಸಾಮಾನ್ಯವಾದ ಎರಡು ಅರ್ಥಗಳನ್ನು ಹೇಳ ಬಹುದು. (1) 'ಉಪ' ಎಂದರೆ ಸಮೀಪಕ್ಕೆ, 'ನಯನ' ಕರೆದುಕೊಂಡು ಹೋಗುವುದು, ಸೆಳೆದುಕೊಳ್ಳುವುದು ('ಣೀಞ'-ಪ್ರಾಪಣೆ-ಲ್ಯುಟ್) ಒಯ್ಯುವುದು ಎಂದಾಗ ಆಚಾರ್ಯನು ಈ ಸಂಸ್ಕಾರದಿಂದ ಕುಮಾರನನ್ನು ತನ್ನ ಬಳಿಗೆ ವಿದ್ಯಾಭ್ಯಾಸ

ಕ್ಕಾಗಿ ಕರೆದುಕೊಳ್ಳುತ್ತಾನೆ ಎಂದು ಅರ್ಥ. "ಉಪನಯನಂ ವಿದ್ಯಾರ್ಥಃ ಶ್ರುತಿತಃ ಸಗ್‌ಸ್ಕಾರಃ" ಎಂದು ಆಪಸ್ತಂಬಧರ್ಮಸೂತ್ರ. (2) ಎರಡನೆಯದಾಗಿ 'ಉಪ' ಎಂದರೆ ಎರಡನೆಯ ಅಥವಾ ಸಹಾಯಕವಾದ 'ನಯನ' — ಕಣ್ಣುಗಳು ಎಂದೂ ಹೇಳಬಹುದು. ನಮಗೆ ನೈಸರ್ಗಿಕವಾಗಿ ಇರುವ ಎರಡು ಕಣ್ಣುಗಳು ತಮ್ಮ ಇಂದ್ರಿಯ ಶಕ್ತಿಯಿಂದ ಭೌತಿಕ ವಸ್ತುಗಳನ್ನು ನೋಡಿ ಅರಿಯಬಲ್ಲವು. ಆದರೆ ಅತೀಂದ್ರಿಯ ವಾದ ಈಶ್ವರ (ಬ್ರಹ್ಮ) ದರ್ಶನಕ್ಕೆ ಬೇರೆ ಕಣ್ಣೇ ಬೇಕು. ಅದೇ 'ಜ್ಞಾನ' ಅಥವಾ ಶಾಸ್ತ್ರದೃಷ್ಟಿ. ಇದನ್ನು ಆಚಾರ್ಯಮುಖೇನ ಮಾತ್ರ ಉಪದೇಶವಾಗಿ ಪಡೆಯಲು ಸಾಧ್ಯ. ಈ ಉಪದೇಶಕ್ಕೆ ಕುಮಾರನು ಮೊದಲು ಉಪನೀತನಾಗಿರಬೇಕು. ಈ ಉಪನಯನ ಸಂಸ್ಕಾರದಿಂದ ಮುಂದೆ ನಾವು ಪರಂಪರಾಸಾಧನೆಗಳ ಮೂಲಕ ಪರಮ ಪುರುಷಾರ್ಥವಾದ ಮುಕ್ತಿಯನ್ನೇ ಪಡೆಯಬಹುದು. ಅಂತಹ ಯೋಗ್ಯತೆ ಯನ್ನು ಸಂಪಾದಿಸಿಕೊಡುವುದೇ ಈ ಉಪನಯನ ಸಂಸ್ಕಾರದ ಗುರಿ. ಸಮಸ್ತ ಜ್ಞಾನದ ಆಕರ 'ವೇದ'. ಇದನ್ನು ಉಪನಯನ ಸಂಸ್ಕಾರವಿಲ್ಲದೇ ಕಲಿಯಲಾಗದು. ಅದಕ್ಕೆ ಈ ಸಂಸ್ಕಾರಕ್ಕೆ ಅಷ್ಟು ಮಹತ್ತ್ವ.

**ಉಪನಯನದ ಸ್ವರೂಪ:** ಉಪನಯನ ಸಂಸ್ಕಾರವು ಈ ವಿಚಿತ್ರ ಜಗತ್ತಿನ ಸೃಷ್ಟಿ ಎಂದಾಯಿತೋ ಅಂದಿನಿಂದಲೂ ನಡೆದು ಬಂದ ವಿಧಿಯಾಗಿದೆ. ಬ್ರಾಹ್ಮಣನು ಈ ಸಂಸ್ಕಾರದಿಂದಲೇ 'ದ್ವಿಜ' ಎನಿಸಿಕೊಳ್ಳುತ್ತಾನೆ. (ದ್ವಿಃ ಜಾಯತೇ ಇತಿ ದ್ವಿಜಃ) 'ಜನ್ಮನಾ ಜಾಯತೇ ಶೂದ್ರಃ ಸಂಸ್ಕಾರಾತ್ ದ್ವಿಜ ಉಚ್ಯತೇ' ಎಂಬ ನುಡಿಯೂ ಇದೆ. ಈ ಸಂಸ್ಕಾರಜನಿತವಾದ ಎರಡನೇ ಜನ್ಮದಲ್ಲಿ ಆಚಾರ್ಯನೇ ತಂದೆ ಮತ್ತು ಗಾಯತ್ರಿ (ಸಾವಿತ್ರಿ)ಯೇ ತಾಯಿ. ಈ ಎರಡನೇ ಜನ್ಮದಲ್ಲಿ — ತಾಯಿತಂದೆಯರ ಸಂಬಂಧ ದಿಂದ ಮೊದಲು ಹುಟ್ಟಿದಾಗ ಇದ್ದಿರಬಹುದಾದ ದೋಷಗಳನ್ನೂ ಜನನ ಕಾಲದಲ್ಲಿ ಗ್ರಹಾದಿಗಳ ಸ್ಥಾನಗಳಿಂದುಂಟಾದ ದೋಷಗಳನ್ನೂ — ಒಳ್ಳೆಯ ಮುಹೂರ್ತದಲ್ಲಿ ಗಾಯತ್ರಿ ಉಪದೇಶ ಮಾಡುವುದರಿಂದ ಪರಿಹರಿಸಿಕೊಳ್ಳಲು ಸಾಧ್ಯ ಎಂದು ಮನುಸ್ಮೃತಿ ಇದೆ. 'ಗಾರ್ಭಿಕಂ ಬೈಜಿಕಂ ಚೈನೋ ದ್ವಿಜಾನಾಮಪಮೃಜ್ಯತೇ.' ಹೀಗೆ ಎಲ್ಲಾ ದೋಷಗಳನ್ನೂ ಉಪನಯನದ ಮೂಲಕ ಸರಿಪಡಿಸಿಕೊಂಡು ನಂತರ ಗುರುಗಳಲ್ಲಿ ಸ್ವಶಾಖಾಧ್ಯಯನ ಮಾಡಬೇಕು. ಋಗ್ವೇದಾದಿ ನಾಲ್ಕು ವೇದಗಳ ಅನುಯಾಯಿಗಳಿಗೆ ಅವರವರ ಶಾಖಾವಿಹಿತವಿಧಿಯಂತೆ ಉಪನಯನವಾಗಬೇಕು. ಆದರೆ ಗಾಯತ್ರಿ ಉಪದೇಶ ಮಾತ್ರ ಎಲ್ಲರಿಗೂ ಒಂದೇ ಮಂತ್ರವಾಗಿದೆ. ಇದೇ ಈ ಸಂಸ್ಕಾರದ ವಿಶೇಷಸ್ವರೂಪ.

**ಉಪನಯನದ ಕಾಲ:** "ಗರ್ಭಾಷ್ಟಮೇಷು ಬ್ರಾಹ್ಮಣಮುಪನಯೀತ ದ್ವಾದಶೇ ರಾಜನ್ಯಂ ಷೋಡಶೇ ವೈಶ್ಯಮ್." ಎಂದರೆ ಬ್ರಾಹ್ಮಣವರ್ಣದವರಲ್ಲಿ ಎಂಟನೆಯ ವಯಸ್ಸಿನಲ್ಲೂ, ಕ್ಷತ್ರಿಯರಲ್ಲಿ ಹನ್ನೆರಡನೆಯ ವಯಸ್ಸಿನಲ್ಲೂ ಮತ್ತು ವೈಶ್ಯರಲ್ಲಿ ಹದಿನಾರನೆಯ ವಯಸ್ಸಿನಲ್ಲೂ ಕುಮಾರನಿಗೆ ಉಪನಯನ ಮಾಡತಕ್ಕದ್ದೆಂದು ಶಾಸ್ತ್ರ ವಾಕ್ಯವಿದೆ. ಹೀಗೆ ವಿಹಿತ ಕಾಲದಲ್ಲೇ ಉಪನಯನವಾದರೆ ಮುಖ್ಯವಾದ ಫಲ ಉಂಟಾಗುತ್ತದೆ. ಮೊದಲೇ ತಿಳಿಸಿದಂತೆ ಇದು ಸಂಸ್ಕಾರಕರ್ಮವಾದ್ದರಿಂದ ಆ ಸಂಸ್ಕಾರ ಫಲಗಳು ಯಥಾವಿಧಿಯಾಗಿ ಕರ್ಮಾಚರಣೆಯಿಂದಲೇ ಸಿದ್ಧಿಸುವವು. ಇದನ್ನು ಎಲ್ಲರೂ ಗಮನಿಸತಕ್ಕದ್ದು. "ವಸಂತೇ ಬ್ರಾಹ್ಮಣಮುಪನಯೀತ ಗ್ರೀಷ್ಮೇ ರಾಜನ್ಯಂ ಶರದಿ ವೈಶ್ಯಂ" ಎಂದು ಋತುಗಳನ್ನೂ ಕೂಡ ಈ ಸಂಸ್ಕಾರಕಾರ್ಯಕ್ಕೆ ಫಲದ ದೃಷ್ಟಿಯಿಂದ ಗೊತ್ತುಮಾಡಿದ್ದಾರೆ.

ಬ್ರಾಹ್ಮಣವರ್ಗದವರಿಗೆ ಆಪಸ್ತಂಬರು, ಗೌತಮರು, ಯಾಜ್ಞವಲ್ಕ್ಯರು ಬೌಧಾಯನರು, ಆಶ್ವಲಾಯನರು, ದ್ರಾಹ್ಯಾಯಣರೇ ಮುಂತಾದ ಅನೇಕ ಸ್ಮೃತಿಕಾರರು 'ಗರ್ಭಾಷ್ಟಮ' ಪಕ್ಷವನ್ನೇ ಪ್ರಶಸ್ತವೆಂದಿದ್ದಾರೆ. ಗರ್ಭಾಷ್ಟಮ ಎಂದರೆ ಶಿಶುವು ಹುಟ್ಟಿ ಆರು ವರ್ಷ, ಮೂರು ತಿಂಗಳು ಕಳೆದ ನಂತರ ಅದರ ಗರ್ಭವಾಸದ ಒಂಬತ್ತು ತಿಂಗಳನ್ನೂ ಸೇರಿಸಿದರೆ ಏಳು ವರ್ಷ ತುಂಬುತ್ತದೆ. ಹೀಗೆ ಗರ್ಭಾವಾಸ ಪೂರ್ವಕ ಏಳುವರ್ಷಗಳು ತುಂಬಿ ಎಂಟನೆಯ ವರ್ಷವನ್ನು 'ಗರ್ಭಾಷ್ಟಮ' ಎನ್ನುತ್ತಾರೆ. ವ್ಯವಹಾರದಲ್ಲಿ ಕುಮಾರ ಹುಟ್ಟಿ ಆರು ವರ್ಷ ಮೂರು ತಿಂಗಳು ಆದನಂತರ ಉಪನಯನಕ್ಕೆ ಪ್ರಶಸ್ತಕಾಲ ಎಂದು ತಿಳಿದುಕೊಳ್ಳಬೇಕು. ಈ ವಯಸ್ಸಿಗೇ ಹುಡುಗನು ಚುರುಕಾಗಿದ್ದರೆ ಉಪನಯನ ಮಾಡತಕ್ಕದ್ದು. ಹಾಗೆ ಇಲ್ಲದಿದ್ದರೆ ಮುಂದೆ ಹನ್ನೆರಡು ವಯಸ್ಸು ತುಂಬುವವರೆಗೂ ಮಧ್ಯದಲ್ಲಿ ಯಾವಾಗ ಲಾದರೂ ಮಾಡಬಹುದು. ಅಲ್ಲಿಯವರೆಗೂ ಮುಖ್ಯಕಾಲವೇ ಆಗಿದೆ. ಒಂದು ವೇಳೆ ಕುಮಾರನು ತುಂಬ ಪ್ರಜ್ಞಾವಂತನಾಗಿ ಸೂಕ್ಷ್ಮಗ್ರಾಹಿಯಾಗಿದ್ದರೆ ಅವನ ಐದನೆಯ ವಯಸ್ಸಿನಲ್ಲೇ ಮಾಡಬಹುದು. 'ಪಂಚಮೇ ಬ್ರಹ್ಮವರ್ಚಸಕಾಮಸ್ಯ' ಹುಟ್ಟಿ ನಾಲ್ಕು ತುಂಬಿದ ನಂತರ ಐದನೆಯ ವರ್ಷದಲ್ಲಿ ಎಂದರ್ಥ. ಇಲ್ಲಿ ಗರ್ಭ ವಾಸದ ಎಣಿಕೆ ಇಲ್ಲ; ಶ್ರೀಮತ್ ಶಂಕರ ಭಗವತ್ಪಾದರಿಗೆ ಐದನೆಯ ವಯಸ್ಸಿನಲ್ಲೇ ಉಪನಯನವಾಯಿತೆಂದು ಶ್ರೀಶಂಕರ ಚರಿತಾಮೃತದಲ್ಲಿದೆ. 'ಕೃತೋಪನಯನೋ ವರ್ಷೇ ಪಂಚಮೇ ಶಂಕರೋ ವಟುಃ'. ಈಗ ಇಂತಹ ಉಪನಯಗಳು ತೀರ ವಿರಳವಾಗಿವೆ. ಹೀಗೆ ಹನ್ನೆರಡನೆಯ ವಯಸ್ಸಿನವರೆಗಿನ ಮುಖ್ಯಕಾಲದಲ್ಲಿ ಉಪನಯನವಾಗದಿದ್ದರೆ 12ರಿಂದ 16ನೆಯ ವಯಸ್ಸಿನಲ್ಲಾದರೂ ಮಾಡಬೇಕು.

ಇದಕ್ಕೆ ಗೌಣಕಾಲವೆಂದು ಹೆಸರು. ಈ ಗೌಣಕಾಲವನ್ನೂ ಮೀರಿದರೆ ಆ ಕುಮಾರ ನನ್ನು 'ಸಾವಿತ್ರೀ ಪತಿತ'ನೆಂದು ಶಾಸ್ತ್ರಕಾರರು ನಿಂದಿಸುತ್ತಾರೆ. ಎಂದರೆ ಅವನು ಗಾಯತ್ರೀ ಮಂತ್ರ ಸ್ವೀಕಾರಕ್ಕೆ ಅನರ್ಹನೆಂದು ಹೇಳುತ್ತಾರೆ. ಹದಿನಾರನೆಯ ವಯಸ್ಸಿನ ನಂತರ ಉಪನಯನವನ್ನು ಮಾಡಿಕೊಳ್ಳುವಾಗ ಮುಖ್ಯಕಾಲಾತೀತ ದೋಷಕ್ಕೆ ಪ್ರಾಯಶ್ಚಿತ್ತಾದಿಗಳನ್ನು ಮಾಡಿಕೊಳ್ಳಬೇಕೆಂದಿದ್ದಾರೆ. ಇದರ ವಿವರವನ್ನು ಇಲ್ಲಿ ಬರೆಯಲಾಗುವುದಿಲ್ಲ.

ಇನ್ನೊಂದು ವಿಚಾರ. ಈ ಕಲಿಯುಗದ ಪ್ರಭಾವದಲ್ಲಿ ಅನೇಕರು ಈ ಸಂಸ್ಕಾರವನ್ನು ವಿವಾಹದ ಹಿಂದಿನ ದಿನವೋ ಅಥವಾ ವಿವಾಹದ ದಿನವೋ ಮಾಡಿ ಕೊಂಡು ವಿವಾಹ ಸಂಸ್ಕಾರಕ್ಕೆ 'ರಹದಾರಿ' (Permit) ಆಯಿತು ಎಂದು ತಿಳಿಯುತ್ತಾರೆ. ಈ ಸಕಾಲದ ಸಂಸ್ಕಾರ ಲೋಪವು ಮುಂದಿನ ಪೀಳಿಗೆಯ ಮೇಲೆ ನಮಗೆ ಗೊತ್ತಿಲ್ಲದಂತೆ ಅತ್ಯಂತ ಹೆಚ್ಚಿನ ಪರಿಣಾಮ ಬೀರಿ ಸುಖಶಾಂತಿಗಳಿಗೆ ಅಡ್ಡಿಮಾಡುತ್ತದೆ. ಇನ್ನೂ ಕೆಲವರು ಉಪನಯನವನ್ನು 'ಶಾಸ್ತ್ರಕ್ಕಾದರೂ' ಮಾಡಿ ಕೊಳ್ಳದೆ ವಿವಾಹವನ್ನೂ ಒಂದು ಸಂಸ್ಕಾರ ಎಂದೂ ಎಣಿಸದೆ ಕೇವಲ ಕನ್ಯಾಗ್ರಹಣ ಮಾಡುತ್ತಾರೆ. ಈ ವಿಧಿಲೋಪಗಳು ನಮ್ಮ ಆಧ್ಯಾತ್ಮಿಕ ಸಂಪತ್ತನ್ನು ಎಂತಹ ಹೀನಮಟ್ಟಕ್ಕೆ ಇಳಿಸುತ್ತವೆ ಎಂಬುದನ್ನು ಹೇಳಬೇಕಾದದ್ದೇ ಇಲ್ಲ. ಇಂತಹವರಿಗೆ ಯಾವ ಶಾಸ್ತ್ರೀಯ ಕರ್ಮಗಳಲ್ಲೂ ಅಧಿಕಾರವಿರುವುದಿಲ್ಲ. ಇವರ ಮಕ್ಕಳು, ಮೊಮ್ಮಕ್ಕಳೂ ಹೀಗೆ ಮುಂದುವರಿದರೆ ಅವರಿಗೆ ಸಂಸ್ಕಾರವಿಚ್ಛಿನ್ನ ದೋಷ ವುಂಟಾಗುತ್ತದೆ. ವಂಶಪಾರಂಪರ್ಯವಾಗಿ ಎಲ್ಲರೂ ವಿಹಿತಕಾಲದಲ್ಲಿ ಉಪನೀತ ರಾಗತಕ್ಕದ್ದೆಂದು ಶಾಸ್ತ್ರವು ವಿಧಿಸುತ್ತದೆ. ವಿವಾಹ ಸಂಸ್ಕಾರವನ್ನು ಶಾಸ್ತ್ರವು ಕಡ್ಡಾಯ ವಾಗಿ ವಿಧಿಸದಿದ್ದರೂ ಉಪನಯನವನ್ನು ಅಧಿಕೃತವರ್ಣದವರಿಗೆ ಕಡ್ಡಾಯ ಮಾಡುತ್ತದೆ. ಹಾಗೆ ಉಪನೀತರಾಗದ ಜನಕರಿಂದ ಹುಟ್ಟಿದ ಮಕ್ಕಳು ಮೊಮ್ಮಕ್ಕಳು ಯಾರಾದರೂ ಉಪನೀತರಾಗಬೇಕೆಂದು ಮುಂದೆ ಬಯಸಿದರೆ ಅವರು ಪ್ರಾಯಶ್ಚಿತ್ತ ಪೂರ್ವಕವಾಗಿ ಮಾಡಿಕೊಳ್ಳಬಹುದೆಂದು ಶಾಸ್ತ್ರಕಾರರು ಹೇಳಿದ್ದಾರೆ. "ಯಸ್ಯಪಿತಾ ಅನುಪನೀತಃ ಸ್ಯಾತ್... ಯಸ್ಯಪಿತಾಮಹಃ... ಯಸ್ಯಪ್ರಪಿತಾಮಹಃ... ಅನುಪನೀತಃ ಸ್ಯಾತ್" ಎಂಬುದಾಗಿ ಆಪಸ್ತಂಬರು ಪ್ರಾಯಶ್ಚಿತ್ತವನ್ನು ವಿಧಿಸಿ ನಂತರ ಕ್ರಮಬದ್ಧವಾದ ಉಪನಯನನ್ನು ಮಾಡಬಹುದೆಂದು ಬಹಳ ಕರುಣೆಯಿಂದ ತಿಳಿಸಿರುತ್ತಾರೆ.

**ಉಪನಯನಕ್ಕೆ ಅಧಿಕಾರಿಗಳು:** ಉಪನಯನ ಸಂಸ್ಕಾರವು ವಟುವು ಆಚಾರ್ಯನ ಬಳಿ ವಿದ್ಯಾಭ್ಯಾಸಕ್ಕೆ ತೆರಳಲು ಆಗಬೇಕಾದ ಸಿದ್ಧತೆಯ ಕಾರ್ಯವಾದ್ದರಿಂದ

ವೇದಾಧ್ಯಯನಕ್ಕೆ ಅಧಿಕಾರಿಗಳಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯವರ್ಣದ ವಟುಗಳೆಲ್ಲರೂ ಉಪನಯನಕ್ಕೆ ಅಧಿಕಾರಿಗಳು. ಇವರೆಲ್ಲರೂ ತಮ್ಮ ತಮ್ಮ ಶಾಖಾನುಗುಣವಾಗಿ (ಋಗ್ವೇದಿ, ಯಜುರ್ವೇದಿ...) ಸೂತ್ರಕಾರರ ನಿಯಮಗಳಂತೆ ಉಪನೀತರಾಗತಕ್ಕದ್ದು ಶಾಸ್ತ್ರಸಮ್ಮತವಾಗಿದೆ. ಈ ವರ್ಣದವರು ಸಕಾಲದಲ್ಲಿ ಉಪನೀತರಾಗಿ ಬ್ರಹ್ಮಚರ್ಯದಿಂದ ವಿಹಿತ ಅಧ್ಯಯನಾದಿಗಳನ್ನು ಗುರುಮುಖೇನ ಪಡೆದು ಸ್ವಧರ್ಮಾಚರಣೆ ಮಾಡಲೇಬೇಕು. ಬೇರೆ ಚತುರ್ಥವರ್ಣದವರಿಗೆ ಪ್ರಾಪ್ತ ಕಾಲದಲ್ಲಿ ಗೃಹಸ್ಥಾಶ್ರಮ ಮಾತ್ರ ವಿಹಿತವಾಗಿರುವುದರಿಂದ ಅವರಿಗೆ ಉಪನಯನಾಧಿಕಾರವಾಗಲೀ ವೇದಾಧ್ಯಯನವಾಗಲೀ ಪ್ರಸ್ತುತವಲ್ಲ. ಅವರು ತಮ್ಮ ಜೀವನ ಸಾರ್ಥಕ್ಯವನ್ನು ಭಗವನ್ನಾಮಸಂಕೀರ್ತನೆ, ಪುರಾಣಾದಿಗಳ ಶ್ರವಣ, ದಾನ ಮುಂತಾದ ಸತ್ಕಾರ್ಯಗಳಿಂದ ಖಂಡಿತವಾಗಿ ಪಡೆಯಬಹುದಾಗಿದೆ. ಜ್ಞಾನಕ್ಕೆ (ಆತ್ಮ ಚಿಂತನೆಗೆ) ಯಾವ ವರ್ಣವಾಗಲೀ, ಆಶ್ರಮವಾಗಲೀ ಕಡ್ಡಾಯವಲ್ಲ. ವೇದೋಕ್ತ ಶಾಸ್ತ್ರೀಯವಾದ ಕರ್ಮಗಳಲ್ಲಿ ಮಾತ್ರ ಈ ಅಧಿಕಾರದ ವಿಚಾರ ಇರುತ್ತದೆ. ಇಲ್ಲಿ ಅಧಿಕಾರವೆಂದರೆ ಒಬ್ಬ ವ್ಯಕ್ತಿ ಚಲಾಯಿಸಬಹುದಾದ 'ಹಕ್ಕು' ಎಂಬರ್ಥವಲ್ಲ, 'ಸಾಮರ್ಥ್ಯ' ಎಂಬ ಅರ್ಥದಲ್ಲಿ ಮಾತ್ರ ಹೇಳಿದೆ. ನಮಗೆ ತಿಳಿದಂತೆ ಜಗತ್ತಿನಲ್ಲಿರುವ ಎಲ್ಲ ಜೀವಿಗಳಿಗೂ ಒಂದೇ ಮಟ್ಟದ ಸಾಮರ್ಥ್ಯ ವಿರುವುದಿಲ್ಲ. ಇದು ಸ್ವಯಂವೇದ್ಯವಾದದ್ದರಿಂದ ಹೆಚ್ಚು ವಿವರಣೆ ಬರೆದಿಲ್ಲ. ಆದ್ದರಿಂದ ಯಾರಿಂದ ಯಾವ ಕೆಲಸವು ಚೆನ್ನಾಗಿ ಶಾಸ್ತ್ರಸಮ್ಮತವಾಗಿ ಆಗುತ್ತದೋ ಅವರೇ ಆ ಕಾರ್ಯಕ್ಕೆ 'ಅಧಿಕಾರಿಗಳು, ಸಮರ್ಥರು' ಎಂದು ತಿಳಿಯಬೇಕು.

## ಭಾಗ-1

## ಉಪನಯನ ಸಂಸ್ಕಾರದ ಕಲಾಪಗಳು

ಗ್ರಂಥದ ಈ ಭಾಗದಲ್ಲಿ ಆಪಸ್ತಂಬ ಸೂತ್ರದ ಕೃಷ್ಣಯಜುರ್ವೇದ ಶಾಖೆಯ ಹಳೆಯ ಮೈಸೂರು ಪ್ರಾಂತದ ಸ್ಮಾರ್ತಬ್ರಾಹ್ಮಣರಲ್ಲಿ ಸಾಮಾನ್ಯವಾಗಿ ರೂಢಿ ಯಲ್ಲಿರುವ ಉಪನಯನ (ಮುಂಜಿ) ಕಾರ್ಯಕ್ರಮದ ಆನುಪೂರ್ವಿಯನ್ನೂ ಯಥಾಯೋಗ್ಯ ವಿವರಣೆಯನ್ನೂ ಕೊಡಲಾಗಿದೆ. ಉಪನಯನದ ಉದ್ದೇಶ ಮತ್ತು ವಟುವು ಸ್ವೀಕಾರಮಾಡುವ ಗಾಯತ್ರೀ ಉಪದೇಶ ಎಲ್ಲ ಬ್ರಾಹ್ಮಣರಿಗೂ ಒಂದೇ ಆದರೂ ಅವರವರ ಕುಲಾಚಾರಗಳು, ಶಿಷ್ಟಾಚಾರಗಳು, ಆಯಾಪ್ರಾಂತದವರಿಗೆ ಬೇರೆ ಬೇರೆಯಾಗಿಯೇ ಇರುತ್ತವೆ. ಆದ್ದರಿಂದ ಈ ಗ್ರಂಥದ ವಿಷಯವು ಮೇಲೆ ತಿಳಿಸಿದ ಆಸ್ತಿಕರ ಆಚಾರದಂತೆ ಇದೆ.

ಮೊದಲಿಗೆ ವಟುವಿನ ತಂದೆಯು ಕುಮಾರನ ಜಾತಕವನ್ನು ತಮ್ಮ ಕುಲ ಪುರೋಹಿತರಲ್ಲಿ ತೋರಿಸಿ ವಟುವಿಗೆ ಗುರುಬಲವಿರುವಾಗ ಉಪನಯನಕ್ಕೆ ಒಂದು ಶುಭದಿನ ಮತ್ತು ಮುಹೂರ್ತವನ್ನು ಗೊತ್ತುಪಡಿಸಿಕೊಳ್ಳಬೇಕು. ಗುರುಬಲವಿಲ್ಲ ದಿದ್ದರೂ ಮುಖ್ಯಕಾಲವಾಗಿದ್ದರೆ ಅವಶ್ಯವಾಗಿ ಗುರುವಿಗೆ ಶಾಂತಿಯನ್ನು ಮಾಡಿ ಕೊಂಡು ಉಪನಯನವನ್ನು ಮಾಡಬೇಕು. ಗುರುಬಲವಿಲ್ಲವೆಂದು ಮುಖ್ಯಕಾಲ ವನ್ನು ಮೀರಬಾರದು. ನಂತರ ತಂದೆಯು ಕುಮಾರನಿಗೆ ಗಾಯತ್ರೀ ಉಪದೇಶ ಕೊಡಲು ಯೋಗ್ಯತಾಸಿದ್ಧಿಗಾಗಿ ಹನ್ನೆರಡು ಸಾವಿರ ಗಾಯತ್ರೀ ಮಂತ್ರ ಜಪವನ್ನು ಮಾಡಿ ಅಧಿಕಾರ ಪಡೆದುಕೊಳ್ಳಬೇಕು. ನಂತರ ಉಪನಯನ ಸಂಸ್ಕಾರಕ್ಕೆ ಈ ಕೆಳಗಿನ ಪದಾರ್ಥಗಳನ್ನು ಹೊಂದಿಸಿಕೊಳ್ಳಬೇಕು:

1. ವಟುವಿಗೆ ಎರಡು ಜೊತೆ ಅರಿಶಿನ ವಸ್ತ್ರಗಳು, ಕೌಪೀನ (2 ಜೊತೆ), (ಬೆಳ್ಳಿಯ ಜನಿವಾರ) ನೂಲಿನ ಜನಿವಾರ (15-20 ಜೊತೆ), ಗೋಪಿಚಂದನ, ಮುತ್ತುಗದ ದಂಡ (ಇದು ವಟುವಿನಷ್ಟೇ ಎತ್ತರವಾಗಿದ್ದರೆ ಶ್ರೇಷ್ಠ — ಎರಡು ದಂಡ ಬೇಕು). ಮೌಂಜೀ, ಕೃಷ್ಣಾಜಿನದ ಚೂರು, ಬಾಸಿಂಗ, ಪಂಚಪಾತ್ರೆ, ಉದ್ಧರಣೆ, ಅರ್ಘ್ಯಪಾತ್ರೆ, ಮುತ್ತುಗದ ಸಮಿತ್ತು, ಸಾಣೆಕಲ್ಲು / ಚಪ್ಪಟೆಕಲ್ಲು (ಅಶ್ಮಾರೋಹಣಕ್ಕೆ).

2. ಅರಿಶಿನ, ಕುಂಕುಮ, ಮಂತ್ರಾಕ್ಷತೆ, ಹಸೀಗಂಧ, ಬಿಡಿಹೂವು ಮತ್ತು ಕಟ್ಟಿದ ಹೂವು, ಗಂಧದಕಡ್ಡಿ, ಹಲಗಾರತಿ, ತುಪ್ಪದಬತ್ತಿ, ಮಂಗಲಾರತಿಬತ್ತಿ, ದೀಪಸ್ತಂಭ ಗಳು, ಗಂಟೆ, ಮಾವಿನ ಸೊಪ್ಪು, ತೆಂಗಿನಕಾಯಿ, ಬಾಳೆಹಣ್ಣು (50), ಬಾಳೆಎಲೆ (10), ಅಕ್ಕಿ, ಎತ್ತಿನಸಗಣಿ, ಮೂರು ಮುಳ್ಳುಹಂದಿಯ ಮುಳ್ಳು, ವಿಳ್ಳೇದೆಲೆ ಅಡಿಕೆ, ಚಿಲ್ಲರೆ ದಕ್ಷಿಣೆ, ನಾಂದಿಗೆ ಕೊಬ್ಬರಿಬಟ್ಟಲು, ರವಿಕೆ ಕಣ, ಅಡಿಕೆ ಹೋಳುಗಳು, ಮನೆದೇವರಿಗೆ ಸೀರೆ, ರವಿಕೆಬಟ್ಟೆ, ತಾಳಿ (ಒಂದು ಕೋಲಿಗೆ ಕಟ್ಟಿ ಅಲಂಕರಿಸ ಬೇಕು) ಕನ್ನಡಿ, ಕಲಶ (ಶಿಷ್ಟಾಚಾರದಂತೆ).

3. ಗ್ರಹಯಜ್ಞಕ್ಕೆ ನವಗ್ರಹ ಧಾನ್ಯಗಳು, ಪೂಜಾಸಾಮಾಗ್ರಿ(ಮೇಲಿನಂತೆ) ನವಗ್ರಹ ಸಮಿತ್ತುಗಳು, ತುಪ್ಪ (ಹೋಮಕ್ಕೆ) 1½ ಕೆ.ಜಿ., ಚರು - 1 ಕೆ.ಜಿ. ಅಕ್ಕಿಯದು, ಹೋಮಕುಂಡ, ಬೀಸಣಿಗೆ, ಸೌದೆ ಒಣಗಿರುವುದು 3-4 ಮಣ, ಚಾಪೆಗಳು (ಚಿಕ್ಕದು) ಅಥವಾ ಮಣೆಗಳು (6), ಹಸೆಮಣೆ ಮೂರುಜನ ಕೂಡುವಷ್ಟಿರಬೇಕು. ಹಸೆಮಣೆ ಮೇಲೆ ಹಾಸಲು ಹೊಸವಸ್ತ್ರ. ದರ್ಭೆ, ಇಧ್ಮ, ಹಿತ್ತಾಳೆ ಬಟ್ಟಲುಗಳು, ಸಮಿತ್ತುಗಳು (250).

# ಉಪನಯನ ಕಾರ್ಯಕ್ರಮಗಳು:

## I ಉಪನಯದ ಹಿಂದಿನ ದಿವಸ:

1. ವಟು, ಆಚಾರ್ಯ (ವಟುವಿನ ತಂದೆ), ವಟುವಿನ ತಾಯಿ ಇವರುಗಳಿಗೆ ತೈಲಾಭ್ಯಂಜನ (ಮಂಗಳಸ್ನಾನ). ಕೆಲವರು ಅವರ ಶಿಷ್ಟಾಚಾರದಂತೆ ಮಲೆನೀರು ಶಾಸ್ತ್ರವನ್ನೂ ಮಾಡಿಕೊಳ್ಳುತ್ತಾರೆ.

2. ಕುಲದೇವತಾ, ಮಾತಾಪಿತೃ, ಹಿರಿಯರಿಗೆ ನಮಸ್ಕಾರಮಾಡಿ, ವಟು, ಮಾತಾಪಿತೃ ಇವರು ಸಭಾವಂದನೆ ಮಾಡುವುದು, ಪೂರ್ವಾಭಿಮುಖವಾಗಿ ಹಸೆಮಣೆಯಲ್ಲಿ ಕುಳಿತುಕೊಳ್ಳುವುದು — ಸಂಕಲ್ಪ.

3. ಗಣಪತಿ ಪೂಜಾ, ಪುಣ್ಯಾಹ, ಅಂಕುರಾರ್ಪಣ, ನಾಂದಿ, ಗ್ರಹಯಜ್ಞ, ಇಷ್ಟದೇವತಾಪೂಜಾ, ಮಂಟಪಪೂಜಾ (ಚಪ್ಪರಕ್ಕೆ ಪೂಜೆ).

4. ವಟುವಿಗೆ ನಾಮಕರಣಾದಿಗಳು ಆಗದಿದ್ದರೆ ಈಗ ಅವುಗಳನ್ನೂ ಮಾಡಿಕೊಳ್ಳಬೇಕು (ಸಂಕ್ಷೇಪವಾಗಿ ಮಾಡಬಹುದು).

5. ಆ ದಿನ ಸಂಜೆ 'ಉದಕಶಾಂತಿ' ಪಾರಾಯಣ — (8-10 ಜನ ಋತ್ವಿಕರು). ಇತ್ತೀಚೆಗೆ ಎಲ್ಲ ಕಡೆಯಲ್ಲೂ ಇದನ್ನು ಮಾಡುತ್ತಿದ್ದಾರೆ.

## II ಉಪನಯನದ ದಿನ:

ಮಂಗಳಸ್ನಾನ, ವಟು ಮತ್ತು ಆಚಾರ್ಯ (ತಂದೆ) ಇವರಿಂದ ಪರಿಷತ್ ಪ್ರಾರ್ಥನೆ ಮತ್ತು ಪ್ರಾಯಶ್ಚಿತ್ತ, ಕರ್ಮಣಃ ಪುಣ್ಯಾಹ, ರಕ್ಷಾಬಂಧನ, ವಟುವಿಗೆ ನವತಂತು ಮತ್ತು ಯಜ್ಞೋಪವೀತ ಪೂಜೆ, ಧಾರಣೆ (ಮೊದಲು ದಾನ ನಂತರ ಧಾರಣೆ), ಮಾತ್ರಾ ಸಹ ಭೋಜನ, ದಿಗ್ವಪನ, ವಪನ, ಸ್ನಾನ, ಗೋಪಿಚಂದನ ಧಾರಣೆ, ಅಗ್ನಿಸ್ಥಾಪನೆ, ಪಲಾಶಸಮಿದಾಧಾನ, ಅಶ್ಮಾರೋಪಣ, ವಸ್ತ್ರ/ ಮೌಂಜೀ / ಅಜಿನಧಾರಣ, ಆಚಾರ್ಯಾಭಿಮುಖಗಮನ, ಉದಕಾಂಜಲಿ, ಹಸ್ತಗ್ರಹಣ, ದೇವತಾಪ್ರದಾನ, ಸುಮುಹೂರ್ತದಲ್ಲಿ ಬ್ರಹ್ಮೋಪದೇಶ, ಆಚಾರ್ಯನ ಪ್ರಶ್ನೆಗಳಿಗೆ ಕುಮಾರನ ಉತ್ತರ, ಉಪನಯನ ಪ್ರಧಾನ ಹೋಮ, ಜಯಾದಿ ಉಪಹೋಮ ಗಳು, ಗಣಪತಿ ಮತ್ತು ಆಚಾರ್ಯ ಪೂಜಾಪೂರ್ವಕ ಗಾಯತ್ರೀ ಉಪದೇಶ, ಬ್ರಹ್ಮವಿಸರ್ಜನೆ, ಓಷ್ಠಸ್ಪರ್ಶ, ಕರ್ಣಸ್ಪರ್ಶ, ದಂಡಗ್ರಹಣ, ಸ್ಮೃತಮಿತ್ಯಾದಿ ಬ್ರಹ್ಮಚಾರಿ ಪ್ರತಿಜ್ಞಾ, ಆದಿತ್ಯೋಪಸ್ಥಾನ, ಕಾಮ್ಯವಿಧಿ, ಅಗ್ನಿಕಾರ್ಯ, ಹೋಮ ಸಮಾಪ್ತಿ, ಅನುಶಾಸನ, ಭಿಕ್ಷೆ, ಫಲಪೂಜೆ, ಆರತಿ, ಬ್ರಾಹ್ಮಣಸುವಾಸಿನೀ ಸಮಾರಾಧನೆ, ವಟುವಿಗೆ ಆಶೀರ್ವಾದ, ಸಂಜೆ ಸಂಧ್ಯಾವಂದನೆ ಅಗ್ನಿಕಾರ್ಯ.

ಉಪನಯನಾಗ್ನಿಯನ್ನು ಮೂರುದಿನ ಇಟ್ಟುಕೊಂಡು ವಟುವು ಅದರಲ್ಲೇ ಅಗ್ನಿಕಾರ್ಯಮಾಡುತ್ತ ನಾಲ್ಕನೇ ದಿನ ಮೇಧಾಜನನ ನಂತರ ಆಚಾರ್ಯನಿಗೆ ವಸ್ತ್ರಾದಿಗಳನ್ನು ಕೊಟ್ಟು — ಆಶೀರ್ವಾದ ಪಡೆದು ವಿವಾಹಪರ್ಯಂತ ತ್ರಿಕಾಲಸಂಧ್ಯೆ ಮತ್ತು ದ್ವಿರಗ್ನಿಕಾರ್ಯ ಮಾಡುತ್ತಾ ಬ್ರಹ್ಮಯಜ್ಞ ವೇದಾಧ್ಯಯನಗಳನ್ನು ಮಾಡುತ್ತಾ ಬ್ರಹ್ಮಚರ್ಯವ್ರತಗಳನ್ನು ಪಾಲಿಸುತ್ತಿರಬೇಕು.

ಈಗ ಮೇಲೆ ತಿಳಿಸಿದ ಕರ್ಮಗಳ ವಿವರಣೆಯನ್ನು ಸಂಕ್ಷಿಪ್ತವಾಗಿ ಕೊಡುತ್ತೇವೆ. ಎಷ್ಟೇ ನಾವು ವಿವರವನ್ನು ಕೊಟ್ಟರೂ ಕರ್ಮದ ಆಚರಣೆಯನ್ನು ಚೆನ್ನಾಗಿ ಬಲ್ಲ ವಿದ್ವಾಂಸರಾದ ಪುರೋಹಿತರುಗಳಿಂದಲೇ ತಿಳಿದುಕೊಳ್ಳಬೇಕಾಗುತ್ತದೆ.

1. **ಮಂಗಳಸ್ನಾನ:** ಈ ಕಾರ್ಯಕ್ರಮಕ್ಕೆ ಅಕ್ಷತವೀಳ್ಯ ಅಥವಾ ಎಣ್ಣೆಶಾಸ್ತ್ರ ಎಂದು ಕರೆಯುತ್ತಾರೆ. ಇದನ್ನು ಅವರವರ ಶಿಷ್ಟಾಚಾರದಂತೆ ಆಚರಿಸತಕ್ಕದ್ದು. ತೈಲಾಭ್ಯಂಜನ ದಿಂದ ದೇಹಶುದ್ಧಿ ಚೆನ್ನಾಗಿ ಆಗುತ್ತದೆ. ಎಲ್ಲ ಕರ್ಮಕ್ಕೂ ದೇಹ ಶುದ್ಧಿಯು ಪ್ರಥಮವಾದುದು. ಕೆಲವರಲ್ಲಿ ಮಲೆನೀರಿನ ಶಾಸ್ತ್ರವೂ ಇದೆ.

2. **ಕುಲದೇವತೆ ಮತ್ತು ಮಾತಾಪಿತೃ ಹಿರಿಯರುಗಳಿಗೆ ವಂದನೆ:** ಯಾವ ಪೂಜೆಯನ್ನು ಮಾಡಿದರೂ ಕುಲದೇವತಾ ಸ್ಮರಣಪೂರ್ವಕವಾಗಿಯೇ ಮಾಡ ಬೇಕೆಂಬ ನಿಯಮವಿದೆ. ಶ್ರೀರಾಮಚಂದ್ರನೂ ಕೂಡ ರಾವಣ ವಧೆಗೆ ಮುಂಚೆ ಅಗಸ್ತ್ಯ ಮಹರ್ಷಿಗಳ ಉಪದೇಶದಂತೆ ತನ್ನ ಕುಲದೇವನಾದ ಸೂರ್ಯನನ್ನು ಕುರಿತು 'ಆದಿತ್ಯಹೃದಯ'ವನ್ನು ಭಕ್ತಿಯಿಂದ ಪಠಿಸಿ ರಾವಣನ ಸಂಹಾರಮಾಡಿದನು. ಮಾತಾಪಿತೃಗಳು ಪತ್ಯಕ್ಷದೈವರಾದ್ದರಿಂದ ಅವರ ಆಶೀರ್ವಾದ ಮುಂದಿನ ಕಾರ್ಯಗಳ ಸಿದ್ಧಿಗೆ ಅತ್ಯಗತ್ಯ. ಅದಕ್ಕೆ ಅವರಿಗೆ ವಂದಿಸಬೇಕು. ಹೀಗೆಯೇ ಉಳಿದ ಹಿರಿಯರ ಆಶೀರ್ವಾದವನ್ನೂ ಮೊದಲು ಕರ್ತೃವು ಪಡೆಯಬೇಕು.

3. **ಸಭಾವಂದನೆ — ಪರಿಷತ್ ಪ್ರಾರ್ಥನೆ:** ಕರ್ತೃವು ಮುಂದೆ ಆಚರಿಸಲಿರುವ ಕರ್ಮಕ್ಕೆ ಯೋಗ್ಯತೆಯನ್ನು ಹಿರಿಯರಿಂದ ಅನುಜ್ಞಾಪೂರ್ವಕ ಇಲ್ಲಿ ಪಡೆಯುವು ದಾಗಿದೆ.

4. **ಪುಣ್ಯಾಹ:** ಮೊದಲು ಸರ್ವವಿಘ್ನನಿವಾರಣಾರ್ಥವಾಗಿ ಗಣಪತಿ ಪೂಜೆಯನ್ನು ಮಾಡಿ ಪ್ರಸಾದ ಸ್ವೀಕರಿಸಿ ನಂತರ ಪುಣ್ಯಾಹಕರ್ಮಮಾಡಬೇಕು. 'ಪುಣ್ಯಂ ಚ ತತ್ ಅಹಃ ಚ ಪುಣ್ಯಾಹಃ' ಎಂಬ ವಚನದಂತೆ ಕರ್ತೃವು ಮಾಡುತ್ತಿರುವ ದಿವಸವು ಶುಭದಿವಸವೆಂದೂ ಮುಂದೆ ನಡೆಯುವ ಕಾರ್ಯಗಳಿಗೆ ಸ್ಥಳಶುದ್ಧಿ, ವೃದ್ಧಿ ಮತ್ತು ಅಭ್ಯುದಯಗಳು ಉಂಟಾಗಲೆಂದು ವರುಣ ವಾಸ್ತು ಪೂಜಾಪೂರ್ವಕ

ಬ್ರಾಹ್ಮಣರು ಹಾರೈಸುವುದೇ ಪುಣ್ಯಾಹವಾಚನದ ಉದ್ದೇಶ. ಇದು ಎಲ್ಲ ಶುಭ ಕರ್ಮಗಳಲ್ಲಿ ಅವಶ್ಯವಾಗಿ ಮಾಡಬೇಕಾದ ವಿಧಿ.

5. **ನಾಂದೀ:** ಪುಣ್ಯಾಹದ ನಂತರ ಮಾಡಬೇಕಾದ ಕಾರ್ಯ. 'ನಂದಂತೇ ಪಿತರಃ ಯಸ್ಮಾತ್ ಸ ನಾಂದೀ' ಎಂಬ ಉಕ್ತಿಯಂತೆ ಕರ್ತೃವಿನ ಪಿತ್ರಾದಿದೇವತೆಗಳನ್ನು ತೃಪ್ತಿಪಡಿಸುವುದೇ 'ನಾಂದೀ' ಎಂಬ ಕರ್ಮ. ತಮ್ಮ ವಂಶದಲ್ಲಿ ನಡೆಯುತ್ತಿರುವ ಶುಭ ಕಾರ್ಯಗಳಿಗೆ ಈ ನಾಂದೀ ಕರ್ಮದ ಮೂಲಕ ಪಿತೃಗಳು ಸಂತೋಷಗೊಂಡು ಅನುಮತಿಯನ್ನು ನೀಡಿ ಮಂಗಲವನ್ನು ಹಾರೈಸುತ್ತಾರೆ. 'ತಸ್ಮಾತ್ ಪಿತೃಭ್ಯಃ ಪೂರ್ವೇದ್ಯುಃ ಕ್ರಿಯತೇ' (ತೈ. ಸಂ. 2-5-3-6) — ಅವಿತುಕೊಂಡಿದ್ದ ಇಂದ್ರನನ್ನು ಮೊದಲು ಪಿತೃಗಳು ಕಂಡುಕೊಂಡದ್ದರಿಂದ ಮೊದಲು ಅವರಿಗೆ 'ನಾಂದೀ'ಮೂಲಕ ತೃಪ್ತಿಪಡಿಸಿ ನಂತರ ಉದ್ದೇಶಿತ ದೇವತೆಗಳಿಗೆ ಹವಿರರ್ಪಣೆಮಾಡತಕ್ಕದ್ದು.

6. **ಗ್ರಹಯಜ್ಞ, ನವಗ್ರಹ ಪೂಜೆ ಮತ್ತು ಹೋಮ:** ಈ ಜಗತ್ತಿನ ಸಮಸ್ತ ವ್ಯಾಪಾರಗಳೂ ಸೂರ್ಯಾದಿಗ್ರಹಗಳ ಚಲನೆಯ ಅಧೀನವಾಗಿವೆ ಎಂದು ಜ್ಯೋತಿ ಶ್ಯಾಸ್ತ್ರ ಹೇಳುತ್ತದೆ. ಇದು ವೈಜ್ಞಾನಿಕವಾಗಿಯೂ ಸತ್ಯವಾಗಿದೆ. ಈ ಗ್ರಹಗಳು ಕೆಲವು ಸ್ಥಾನಗಳಲ್ಲಿ ಶುಭಫಲಗಳನ್ನೂ ಮತ್ತೆ ಕೆಲವು ಸ್ಥಾನಗಳಲ್ಲಿ ಅಶುಭ ಫಲದಾಯಕ ರಾಗಿರುತ್ತಾರೆಂದು ಶಾಸ್ತ್ರ ಹೇಳುತ್ತದೆ. ಆದ್ದರಿಂದ ಪ್ರಕೃತ ಉಪನಯನ ಸಮಯದಲ್ಲಿ ಶುಭಸ್ಥಾನದಲ್ಲಿರುವ ಗ್ರಹಗಳು ಹೆಚ್ಚು ಹೆಚ್ಚಿನ ಶುಭಫಲವನ್ನೂ, ಅಶುಭಸ್ಥಾನದಲ್ಲಿ ರುವ ಗ್ರಹಗಳೂ ಶುಭಫಲವನ್ನೇ ಉಂಟುಮಾಡುವಂತಾಗಲೆಂದು ಪ್ರಾರ್ಥಿಸುವ ಕರ್ಮವೇ 'ಗ್ರಹಯಜ್ಞ'. ಇಲ್ಲಿ ಆದಿತ್ಯಾದಿ ನವಗ್ರಹಗಳನ್ನು ಆಯಾಧಾನ್ಯಗಳಲ್ಲಿ ಆವಾಹಿಸಿ ಪೂಜೆಮಾಡಿ ನಂತರ ಆಯಾ ಗ್ರಹದೇವತೆಗಳನ್ನು ಆಯಾ ಗ್ರಹ ದೇವತೆಯ ಸಮಿತ್ತಿನಿಂದಲೂ ಮಂತ್ರಪೂರ್ವಕವಾಗಿ ಹೋಮ ಮಾಡುವುದು ಶಾಸ್ತ್ರವಿಹಿತವಾಗಿದೆ.

7. **ಇಷ್ಟದೇವತಾ ಪೂಜಾ ಮತ್ತು ಮಂಟಪ ಪೂಜಾ:** ಒಂದು ಕೋಲಿಗೆ ಸೀರೆ / ಕಣ / ತಾಳಿ ಮತ್ತು ವನಸ್ಪತಿಯನ್ನು ಕಟ್ಟುವ ಮೂಲಕ ಅಲ್ಲಿ ಯಜಮಾನನ ಕುಲದೇವರನ್ನು ಆವಾಹಿಸಿ, ಪೂಜಿಸಿ ನಂತರ ಬ್ರಹ್ಮಾದಿಗಳನ್ನು ಕುರಿತು ಚಪ್ಪರಕ್ಕೆ ಷೋಡಶೋಪಚಾರ ಪೂಜೆ ಮಾಡತಕ್ಕದ್ದು. ಮಂಟಪವು ದೇವತಾಸ್ವರೂಪವಾಗಿದ್ದು ಶುಭಕಾರ್ಯವಾಗುವವರೆಗೂ ಸುಭದ್ರವಾಗಿರಲೆಂದು ಪ್ರಾರ್ಥಿಸುವುದೇ ಈ ಕಾರ್ಯ. ಇಲ್ಲಿ ಅವರವರ ಶಿಷ್ಟಾಚಾರದಂತೆ ನಡೆಯಬೇಕು. ಕೆಲವರು ನಾಂದಿಗೆ ಮೊದಲೇ ಈ ಪೂಜೆ ಮಾಡುತ್ತಾರೆ. (ಇದಕ್ಕೆ ಮಾತೃಕಾ ಪೂಜೆ ಎನ್ನುತ್ತಾರೆ.)

8. ಕುಮಾರನಿಗೆ ಉಪನಯನ ಸಂಸ್ಕಾರಕ್ಕೆ ಮುಂಚಿನದಾದ ಜಾತಕರ್ಮ, ನಾಮಕರಣ, ಚೌಲಾದಿಗಳು ಆಯಾಕಾಲಗಳಲ್ಲಿ ಆಗಿರದಿದ್ದರೆ ಈಗ ಅವುಗಳನ್ನು ಮಾಡಿಕೊಳ್ಳಬೇಕು. ಷೋಡಶಕರ್ಮಗಳಲ್ಲಿ ಕರ್ಮವಿಕಲ್ಪಕ್ಕೆ ಅವಕಾಶವಿಲ್ಲ. ಮೊದಲಿನದನ್ನು ಮಾಡಿಯೇ ಮುಂದಿನ ಸಂಸ್ಕಾರವನ್ನು ಮಾಡತಕ್ಕದ್ದು. ಇಲ್ಲದಿದ್ದರೆ ಮುಂದಿನ ಕರ್ಮಕ್ಕೆ ಅಧಿಕಾರ ಪ್ರಾಪ್ತಿಯಾಗುವುದಿಲ್ಲ.

9. **ಉದಕಶಾಂತಿ:** ಈ ಕರ್ಮವನ್ನು ಬೋಧಾಯನ ಶಾಖೆಯವರು ಕಡ್ಡಾಯವಾಗಿಯೂ ಬೇರೆ ಶಾಖೆಯವರು ಐಚ್ಛಿಕವಾಗಿಯೂ ಚೌಲೋಪನಯನ ಉಗ್ರ/ಭೀಮರಥಶಾಂತ್ಯಾದಿ ಶುಭಕಾರ್ಯಗಳ ಹಿಂದಿನ ದಿನ ಸಾಯಂಕಾಲ ಮಾಡುವ ರೂಢಿ ಇದೆ. ಉದಕವೆಂದರೆ ನೀರು, ಜಲ ಎಂದು ಅರ್ಥ (ಉನ್ದೀ-ಕ್ಲೇದನೆ ಎಂಬ ಧಾತುವಿನ 'ಕ್ವನ್' ನಿಷ್ಪತ್ತಿ). ಅದರ 'ಶಾಂತಿ' ಎಂದರೆ ಆ ನೀರಿನಲ್ಲಿ ಇರಬಹುದಾದ ಘೋರರೂಪ ಶಮನ ಮಾಡುವುದು. ನೀರು ಶಾಂತರೂಪದಿಂದ ಜನರನ್ನು ಹೇಗೆ ತಣಿಸಬಲ್ಲದೋ ಹಾಗೆ ಘೋರರೂಪದಿಂದ ತಲ್ಲಣಿಸಲೂ ಬಲ್ಲದು. ಶುದ್ಧವಾದ ನೀರು ದೇಹಕ್ಕೆ ಎಷ್ಟು ಫಲಕಾರಿಯೋ ಅಶುದ್ಧವಾದ ನೀರು ಅಷ್ಟೇ ಅಪಾಯಕಾರಿ. ಅಶುದ್ಧವಾದ ನೀರಿನ ಸಂಬಂಧವಾದ ಅನೇಕ ಕಾಯಿಲೆಗಳನ್ನು ನಾವು ಕಂಡಿದ್ದೇವೆ. (ಸಕ್ಕರೆ ಖಾಯಿಲೆಯೂ ಕೂಡ ನದಿಗಳನ್ನು ಹರಿಯದಂತೆ ಅಣೆಕಟ್ಟು ಹಾಕಿ ಹಾಗೆ ನಿಂತ ನೀರನ್ನು ಉಪಯೋಗಿಸುವುದರಿಂದ ಉಂಟಾಗುತ್ತದೆ ಎಂದು ತಜ್ಞರ ಅಭಿಪ್ರಾಯವಿದೆ.) ಸಮಸ್ತ ವೈದಿಕ ಕರ್ಮಗಳು (ಆಚಮನದಿಂದ ಹಿಡಿದು) ನೀರಿನಿಂದಲೇ ಆರಂಭವಾಗುತ್ತವೆ ಎಂದು ಶ್ರುತಿ ಇದೆ. 'ತಾಭೀ ರಶ್ಮಿಪವಿತ್ರಾಭಿಃ ಶ್ರದ್ಧಾಂ ಯಜ್ಞಮಾರಭೇ' (ತೈ. ಬ್ರಾ. 3-7-4-13). 'ಸೂರ್ಯರಶ್ಮಿಯಿಂದ ಪವಿತ್ರವಾದ ಶ್ರದ್ಧಾಶಬ್ದದಿಂದ ಕರೆಸಿಕೊಂಡ (ಅಥವಾ ಶ್ರದ್ಧೆಯ ಉತ್ಪತ್ತಿಗೆ ಕಾರಣವಾದ) ನೀರಿನಿಂದ ಯಜ್ಞವನ್ನು ಆರಂಭಿಸುವೆನು' ಎಂದರ್ಥ. 'ಆಪ ಏವೇದಮಗ್ರ ಆಸುಃ', 'ಆಪೋ ವೈ ಸರ್ವಾ ದೇವತಾಃ', 'ಆಪೋ ವೈ ದೇವಾನಾಂ ಪ್ರಿಯಂ ಧಾಮ' ಇತ್ಯಾದಿ ಅನೇಕ ಶ್ರುತಿವಾಕ್ಯಗಳು ನೀರಿನ ಮಹಿಮೆ, ಸಾಮರ್ಥ್ಯಗಳನ್ನು ಹೊಗಳುತ್ತಿವೆ. ಹೀಗಿರುವ ಅಬ್ದೇವತೆಯ ಅನುಗ್ರಹಕ್ಕಾಗಿ ಮತ್ತು ದೀರ್ಘಾಯುಷ್ಯಾದಿಪೂರ್ಣ ಫಲಕ್ಕಾಗಿ ಈ 'ಉದಕಶಾಂತಿ ಕರ್ಮ'ವನ್ನು ಆಚರಿಸಲಾಗುತ್ತದೆ.

10. **ಅಂಕುರಾರ್ಪಣ:** ಈ ಕರ್ಮಕ್ಕೆ 'ಅಂಕುರಾರೋಪಣ'ವೆಂದೂ ಕರೆಯುತ್ತಾರೆ. ಈ ಕರ್ಮದ ಉದ್ದೇಶವೇನೆಂದರೆ ಯಜಮಾನನು ಮಾಡಲಿರುವ ಕರ್ಮ ಸಾಫಲ್ಯತೆಯು ನಿರಂತರ ಮಂಗಳದಾಯಕವಾಗಿರಲಿ ಎಂದು ಪ್ರಾರ್ಥಿಸುವುದಾಗಿದೆ. (ಅಮುಕ ಕರ್ಮಸಾಫಲ್ಯನಿರಂತರ ಶುಭತಾ ಸಿದ್ಧಿದ್ವಾರಾ ಶ್ರೀಪರಮೇಶ್ವರ

ಪ್ರೀತ್ಯರ್ಥಂ.... ಇತ್ಯಾದಿ ಸಂಕಲ್ಪವಿದೆ.) ಈ ಕರ್ಮವನ್ನು ಐಚ್ಛಿಕವಾಗಿ ಮಾಡುವ ಸಂಪ್ರದಾಯವೇ ಜಾಸ್ತಿಯಾಗಿದೆ. ಶುಭಕಾರ್ಯದ ಹಿಂದಿನ ದಿನ ರಾತ್ರಿ ಅಥವಾ ಹಿಂದಿನ 5 ಅಥವಾ 7 ದಿನಗಳ ಮುಂಚೆಯೂ ಅಂಕುರಾರ್ಪಣ ಮಾಡುವ ಪದ್ಧತಿ ಇದೆ. 'ಅಂಕುರ' ಎಂದರೆ ಮೊಳಕೆ. ಇದರ 'ಅರ್ಪಣೆ' ಎಂದರೆ ಅದನ್ನು ನೀರಿನಲ್ಲಿ ಬಿಡುವುದು ಎಂದು ಒಂದು ಅರ್ಥ. 'ಅಂಕುರ ಆರೋಪಣ' ಎಂದರೆ ಮೊಳಕೆ ಯನ್ನು ಬೆಳೆಸುವುದು ಎಂದೂ ಅರ್ಥವಿದೆ. ಒಟ್ಟಿನಲ್ಲಿ ಹೇಗೆ ಒಂದು ಬೀಜದಿಂದ ಮೊಳಕೆ ಹೊರಟು ಅದು ಮುಂದೆ ಅನೇಕ ಕವಲುಗಳಾಗಿ ವೃದ್ಧಿಹೊಂದುವುದೋ ಹಾಗೆ ಯಜಮಾನನ ವಂಶವೂ ವೃದ್ಧಿಯಾಗಲೆಂದು ಬಯಸಿ ಆಚರಿಸುವ ಕರ್ಮವೇ ಇದಾಗಿದೆ. 'ಶತವಲ್‌ಶಂ ವಿರೋಹ, ಸಹಸ್ರವಲ್‌ಶಾ ವಿವಯಗ್‌ಂ ರುಹೇಮ.' (ನೂರು ಕವಲಾಗಿ ನೀನು (ದರ್ಬೆ) ಬೆಳೆ, ನಾವು ಸಾವಿರ ಕವಲಾಗಿ ಬೆಳೆಯತ್ತೇವೆ – ಯ. ಸಂ. 1-1-1) ಎಂದು ಶ್ರುತಿವಾಕ್ಯದ ಗಮಕವೂ ಈ ಕರ್ಮಕ್ಕೆ ಇದೆ.

ಗಣಪತಿಪೂಜಾ ನಂತರ ಐದು ಮಣ್ಣಿನ ಕುಡಿಕೆಗಳಲ್ಲಿ ಹುತ್ತದ ಮಣ್ಣು, ಒಣಗಿದ ಸಗಣಿ ಇದರ ಮಿಶ್ರಣವನ್ನು ಹಾಕಿ ಮಂತ್ರೋಕ್ತವಾಗಿ ಬ್ರಹ್ಮ, ಇಂದ್ರ, ಯಮ, ವರುಣ ಮತ್ತು ಚಂದ್ರ ದೇವತೆಗಳನ್ನು ಆವಾಹಿಸಿ ಪೂಜಿಸಿ ನಂತರ ಭತ್ತ, ಗೋಧಿ, ಉದ್ದು, ಹೆಸರು ಇತ್ಯಾದಿ ಮೊಳಕೆ ಬರುವ ಧಾನ್ಯಗಳನ್ನೂ ಹಾಕಿ ಮೇಲೆ ಹಸೀ ಮರಳು ತುಂಬಿ ಮೊಳಕೆ ಬರುವಂತೆ ನೋಡಿಕೊಳ್ಳುವುದು. ಕರ್ಮ ಸಮಾಪ್ತಿಯ ನಂತರ ಮಂಗಳವಾದ್ಯದೊಡನೆ ಈ ಅಂಕುರಪಾತ್ರೆಗಳನ್ನು ನೀರಿನಲ್ಲಿ ವಿಸರ್ಜಿಸುವ ವಾಡಿಕೆ ಇದೆ. ಈ ಕರ್ಮವನ್ನು ಅವರವರ ಆಚಾರದಂತೆ ನೆರವೇರಿಸತಕ್ಕದ್ದು.

**11. ವಟು ಮತ್ತು ಆಚಾರ್ಯ ಪ್ರಾಯಶ್ಚಿತ್ತ:** ಈ ಕಾರ್ಯವು ಉಪನಯನದ ದಿನ ಬೆಳಗ್ಗೆ ಮಂಗಳಸ್ನಾನ ಮತ್ತು ಕರ್ಮಣಃ ಪುಣ್ಯಾಹ ಆದ ನಂತರ ಮಾಡತಕ್ಕದ್ದು. ಈ ಕರ್ಮದಲ್ಲಿ ಕುಮಾರನು ಜನ್ಮಾದಾರಭ್ಯ ಉಪನಯನವಾಗುವವರೆಗಿನ ಮಧ್ಯ ಕಾಲದಲ್ಲಿ ಮಾಡಿದ / ಮಾಡಿರಬಹುದಾದ ಸವರ್ಣ ಅಸವರ್ಣದಾದಿಯರಿಂದ ಪಾಲನೆ, ಅವರ ಸ್ತನ್ಯಪಾನಗಳು, ಎಂಜಲು, ತಂಗಳು ಮುಂತಾದ್ದನ್ನು ತಿಂದದ್ದು, ಮೂತ್ರಪುರೀಷ ವಿಸರ್ಜನ ಕಾಲದಲ್ಲಿ ಮೌನ ಆಚರಿಸದೇ ಇರುವುದೇ ಮುಂತಾದ ದೋಷ ಪ್ರಾಯಶ್ಚಿತ್ತಾರ್ಥವಾಗಿಯೂ ಹಾಗೂ ಉತ್ತರೋತ್ತರ ಉಪನಯನ ವ್ರತ ಅಧಿಕಾರಯೋಗ್ಯತಾಸಿದ್ಧಿಗೂ ಪ್ರಾಜಾಪತ್ಯಾದಿ ಮೂರು ಕೃಚ್ಛ್ರಗಳನ್ನು ವಿಧಿಸ ಬೇಕೆಂದು ಸಭೆಯನ್ನು ತಂದೆಯು ಬೇಡುವನು. ಆಗ ಸಭಾಸದರು ಪ್ರಾಯಶ್ಚಿತ್ತ ರೂಪವಾದ ಮೂರು ಕೃಚ್ಛ್ರಗಳ ಬದಲಾಗಿ ಯಥಾಶಕ್ತಿ ಹಿರಣ್ಯದಾನವನ್ನು ಸ್ವೀಕರಿಸಿ ಕುಮಾರನಿಗೆ ಉಪನಯನ ಸಂಸ್ಕಾರಕ್ಕೆ ಯೋಗ್ಯತೆಯನ್ನೂ ಹಾಗೂ ಆಚಾರ್ಯನಿಗೆ

(ವಟುವಿನ ತಂದೆಗೆ) ಗಾಯತ್ರಿ ಉಪದೇಶ ಅಧಿಕಾರವನ್ನೂ ಸಂಪಾದಿಸಿಕೊಡುತ್ತಾರೆ. ಇದೇ ವಟುಪ್ರಾಯಶ್ಚಿತ್ತ ಕರ್ಮ.

12. **ಕರ್ಮಣಃ ಪುಣ್ಯಾಹಃ:** ಇಲ್ಲಿ ಹಿಂದಿನ ದಿನದಂತೆ ಪುಣ್ಯಾಹವಾಚನವನ್ನು ಆಮೂಲಾಗ್ರವಾಗಿ ಮಾಡಬೇಕಿಲ್ಲ. ವಾಸ್ತುವರುಣಪೂಜಾ ಪ್ರಾರ್ಥನೆ ಮಾಡಿ ಬ್ರಾಹ್ಮಣರನ್ನು ಕುರಿತು 'ಓಂ ಪುಣ್ಯಾಹಂ ಭವಂತೋ ಬ್ರುವಂತು, ಓಂ ಸ್ವಸ್ತಿ ಭವಂತೋ ಬ್ರುವಂತು, ಓಂ ಋದ್ಧಿಂ ಭವಂತೋ ಬ್ರುವಂತು.' ಎಂದು ಯಜಮಾನನು ಮೂರು ಬಾರಿ ಕೇಳಿಕೊಂಡು ಬ್ರಾಹ್ಮಣರಿಂದ ಪ್ರತಿವಚನ ಪಡೆಯುವುದು ಮಾತ್ರ ಮಾಡಬೇಕು.

13. **ರಕ್ಷಾಬಂಧನ:** ಸಂಸ್ಕಾರವನ್ನು ಹೊಂದುತ್ತಿರುವ ಕುಮಾರನಿಗೆ ಸಂಸ್ಕಾರವು ಮುಗಿಯುವವರೆಗೂ ಯಾವುದೇ ಪ್ರಾಣಿಭಯ, ಚೋರಭಯ, ರೋಗಭಯ ಮುಂತಾದವೂ ಮತ್ತು ಯಾವ ವಿಧವಾದ ಅಶೌಚಾದಿಗಳೂ ಬರದಿರಲೆಂದು ಮಂತ್ರಪೂರ್ವಕವಾಗಿ ಬಲಗೈಗೆ ಕಟ್ಟುವ ಸೂತ್ರವೇ 'ರಕ್ಷಾಬಂಧನ'. ಒಂಬತ್ತು ಎಳೆಗಳುಳ್ಳ ಯಜ್ಞೋಪವೀತದ ಸೂತ್ರಕ್ಕೆ ಅರಿಶಿನಕೊನೆಯನ್ನು ಕಟ್ಟಿ ಅದರಲ್ಲಿ ವಾಸುಕಿಯನ್ನು ಆವಾಹಿಸಿ ಷೋಡಶೋಪಚಾರ ಪೂಜೆಮಾಡಿ 'ಕೃಣುಷ್ವ ಪಾಜಾದಿ' ರಕ್ಷೋಘ್ನ ಮಂತ್ರಗಳನ್ನು ಬ್ರಾಹ್ಮಣರಿಂದ ವಾಚನ ಮಾಡಿಸಿ ವಾಸುಕಿಧ್ಯಾನ ಪೂರ್ವಕವಾಗಿ ಆ ದಾರವನ್ನು ಕುಮಾರನ ಬಲಗೈಗೆ ಕಟ್ಟಬೇಕು. ಉಪನಯನಕಾಲ ಮುಗಿಯುವವರೆಗೂ ಮೂರೂ ದಿನಗಳು ಇದನ್ನು ಬಿಚ್ಚಬಾರದು. ನಾಲ್ಕನೆಯ ದಿನ ಉಪನಯನ ಅಗ್ನಿ ವಿಸರ್ಜನಾನಂತರ ಈ ಕಂಕಣವನ್ನೂ ವಿಸರ್ಜನೆಮಾಡತಕ್ಕದ್ದು.

14. **ನವತಂತುಧಾರಣೆ:** ಸಂಕಲ್ಪಪೂರ್ವಕವಾಗಿ ಕುಮಾರನಿಗೆ ಆಚಮನ ಯೋಗ್ಯತಾಸಿದ್ಧಿಗೋಸ್ಕರ ಒಂಬತ್ತು ಎಳೆಗಳುಳ್ಳ ಉಪವೀತವನ್ನು ಪೂಜೆಮಾಡಿ ಬ್ರಾಹ್ಮಣರ ಆಶೀರ್ವಾದಪೂರ್ವಕ ತಂದೆಯು (ಆಚಾರ್ಯ) ವಟುವಿಗೆ 'ನವೋ ನವೋ...' ಎಂಬ ಮಂತ್ರದಿಂದ ಧಾರಣೆಮಾಡಿಸಬೇಕು. ನಂತರ ಆಚಮನ ಮಾಡಿಸುವುದು.

15. **ಯಜ್ಞೋಪವೀತಧಾರಣೆ:** ಕುಮಾರನಿಗೆ 'ದ್ವಿಜತ್ವ' ಪ್ರಾಪ್ತಿಗೋಸ್ಕರ ಜನಿವಾರಧಾರಣೆ ಮಾಡಿಸುವ ಕರ್ಮವೇ 'ಯಜ್ಞೋಪವೀತಧಾರಣೆ'. ಸಂಕಲ್ಪ ಪೂರ್ವಕವಾಗಿ ಹಿಂದಿನಂತೆ ಯಜ್ಞೋಪವೀತ ಪೂಜೆಮಾಡಿ, ಗೋಪಿಚಂದನ ಸಹಿತ ಹತ್ತುಜನ ಬ್ರಾಹ್ಮಣರಿಗೆ ಯಜ್ಞೋಪವೀತ ದಾನಮಾಡಿ, ಅವರ ಆಶೀರ್ವಾದ ಪಡೆದು, 'ಯಜ್ಞೋಪವೀತಂ ಪರಮಂ ಪವಿತ್ರಂ...' ಎಂಬ ಮಂತ್ರದೊಡನೆ

ಕುಮಾರನಿಗೆ ಯಜ್ಞೋಪವೀತಧಾರಣೆ ಮಾಡಿಸುವುದು. ನಂತರ ಅವನಿಂದ ಆಚಮನ ಮಾಡಿಸುವುದು. ಹೆಚ್ಚಿನ ವಿವರಗಳನ್ನು ಮುಂದಿನಭಾಗದಲ್ಲಿ ಕೊಟ್ಟಿದೆ.

16. **ಮಾತ್ರಾಸಹಭೋಜನ:** ಈ ಕಾರ್ಯಕ್ರಮಕ್ಕೆ ಕುಮಾರ ಭೋಜನ, ಮಾತೃಕಾಭೋಜನ, ಚೌಲಪಙ್ಕ್ತಿ ಊಟ ಎಂದು ಕರೆಯುವುದು ವಾಡಿಕೆಯಲ್ಲಿದೆ. ಈ ಕಲಾಪದ ಉದ್ದೇಶವೇನೆಂದರೆ ಮುಂದೆ ಕುಮಾರನು ಉಪವೀತನಾಗಿ ಬ್ರಹ್ಮಚರ್ಯವ್ರತದಲ್ಲಿ ಇರುವಾಗ ಯಾವ ಸ್ತ್ರೀಯರ ಸಹಪಙ್ಕ್ತಿ ಭೋಜನವೂ ನಿಷಿದ್ಧವಾಗಿರುತ್ತದೆ. ಹಾಗೂ ಇಲ್ಲಿಯವರೆಗೆ ಅವನು ತಾಯಿಯೊಡನೆ ಅತ್ಯಂತ ಸಲುಗೆಯಿಂದ ಇದ್ದದ್ದು ಮುಂದೆ ಹಾಗೆ ಇರಲು ಅವಕಾಶವಿರುವುದಿಲ್ಲ. ಈ ಕಾರಣದಿಂದ ಮಾತ್ರಾಸಹಭೋಜನವನ್ನು ಹಿರಿಯರು ಇಂದು ಏರ್ಪಡಿಸಿರುತ್ತಾರೆ. ಈ ಊಟಕ್ಕೆ ಬೇರೆ ಬ್ರಹ್ಮಚಾರಿಗಳನ್ನೂ ಆಹ್ವಾನಿಸಿ ದಕ್ಷಿಣಾದಿಗಳನ್ನು ಕೊಡುವ ಪದ್ಧತಿಯೂ ಇದೆ. ಭೋಜನದ ಬದಲು ಕೆಲವರು ಉಪಾಹಾರವನ್ನು ಮಾತ್ರ ಏರ್ಪಡಿಸುವುದೂ ಉಂಟು. ಕುಮಾರನು ಆಚಾರ್ಯನು ಪಠಿಸುವ ಗಾಯತ್ರೀ ಮಂತ್ರಕ್ಕೆ ಅನುಗುಣವಾಗಿ ಅನ್ನಕ್ಕೆ ಪ್ರೋಕ್ಷಣೆಮಾಡಿ ಪರಿಷೇಚನವನ್ನು ಮಾಡುವನು. ನಂತರ ಆಚಾರ್ಯನು ಹೇಳುವ ಮಂತ್ರಪೂರ್ವಕ ಆಪೋಶನವನ್ನೂ ಪ್ರಾಣಾಹುತಿ ಗಳನ್ನೂ ತೆಗೆದುಕೊಂಡು ಮೌನದಿಂದ ಊಟ (ಕ್ಷಾರ ಲವಣವರ್ಜಿತ) ಮಾಡತಕ್ಕದ್ದು. ಕೆಲವರಲ್ಲಿ ತಾಯಿಯು ಕುಮಾರನಿಗೆ ತುಪ್ಪದ ಆಪೋಶನವನ್ನು ಹಾಕುವ ಮತ್ತು ಆರತಿ ಎತ್ತುವ ಪದ್ಧತಿಯೂ ಇದೆ. ಭೋಜನಾ ನಂತರ ಆಚಾರ್ಯನು ಉತ್ತರಾ-ಪೋಶನ ಹಾಕಿ ವಟುವು ಎದ್ದನಂತರ ಪುನಃ ಶುದ್ಧಾಚಮನ ಮಾಡಿಸಬೇಕು.

17. **ದಿಗ್ವಪನ ಮತ್ತು ಕ್ಷೌರಕರ್ಮ:** ಮಾತ್ರಾಸಹಭೋಜನವಾದ ನಂತರ ಈ ಕಾರ್ಯ ನಡೆಯುತ್ತದೆ. ಇಂದು ಮಾತ್ರ ಭೋಜನಾನಂತರ ಕ್ಷೌರಕ್ಕೆ ಅನುಮತಿ ಇದೆ. ಬೇರೆ ಯಾವಾಗಲೂ ಕ್ಷೌರ ಮತ್ತು ಸ್ನಾನಾನಂತರವೇ ಉಪಾಹಾರ ಭೋಜನಾದಿ ಗಳು ಆಗಬೇಕು. ಈ ದಿಗ್ವಪನ ಕಾರ್ಯದಲ್ಲಿ ಹೆಸರಿಗೆ ತಕ್ಕಂತೆ ತಂದೆಯು (ಆಚಾರ್ಯನು) ಮಂತ್ರಪೂರ್ವಕವಾಗಿ ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿ ಕುಮಾರನ ಕೂದಲನ್ನು ದರ್ಭೆಸಮೇತ ಕ್ಷೌರ ಕತ್ತಿಯಿಂದ ಕತ್ತರಿಸಬೇಕು. (ಈ ಕಾರ್ಯವಿಧಿ ಯನ್ನೂ ಮಂತ್ರಗಳನ್ನೂ ಬೇರೆಯಾಗಿ ಮುಂದೆ ಕೊಟ್ಟಿದೆ.) ಅನಂತರ ಕ್ಷೌರಿಕನಿಂದ ಕುಮಾರನಿಗೆ ಶಿಖೆಯನ್ನು ಬಿಡಿಸಬೇಕು. ಈ ವಪನ ಕರ್ಮವು ಕುಮಾರನ ಆಯುಷ್ಯಾಭಿವೃದ್ಧಿಗಾಗಿಯೂ ಶರೀರ ಶುದ್ಧಿಗಾಗಿಯೂ ತೇಜಸ್ಸಂಪಾದನೆಗಾಗಿಯೂ ವಿಹಿತವಾಗಿದೆ. ಉಗುರು ಮತ್ತು ಮೀಸೆ ಕೂದಲುಗಳು (ಶಿಖೆಯನ್ನು ಬಿಟ್ಟು) ಶರೀರದ ಅಪವಿತ್ರ ಭಾಗವೆಂದು ಶ್ರುತಿಯಲ್ಲಿ ಹೇಳಿದೆ. 'ಮೃತಾ ವಾ ಏಷಾ

ತ್ವಗಮೇಧ್ಯಾ ಯತ್ಕೇಶಶ್ಮಶ್ರು' (ತೈ. ಸಂ. 6-1-1). ಆದ್ದರಿಂದ ಸದಾ ಶುಚಿತ್ವವನ್ನು ಬಯಸುವ ಬ್ರಹ್ಮಚಾರಿಯು ಇವುಗಳನ್ನು ತೆಗೆಸಬೇಕು ಎಂದರ್ಥ. ನಂತರ ಸ್ನಾನ ಮತ್ತು ಗೋಪಿಚಂದನ ಧಾರಣೆ.

18. **ಅಗ್ನಿ ಸ್ಥಾಪನೆ:** ಗೋಪಿಚಂದನಾದಿಗಳಿಂದ ಅಲಂಕೃತನಾದ ಕುಮಾರನನ್ನು ಹಸೆಮಣೆಯ ಮೇಲೆ ಕೂರಿಸಿಕೊಂಡು ಆಚಾರ್ಯನು ಮುಂದಿನ ಕರ್ಮಗಳಿಗೆ ಬೇಕಾದ ಅಗ್ನಿಪ್ರತಿಷ್ಠೆಯನ್ನು ಮಾಡಬೇಕು (ಶ್ರೋತ್ರಿಯರ ಮನೆಯಿಂದ ಅಗ್ನಿಯನ್ನು ತರಬೇಕೆಂದು ಶಾಸ್ತ್ರವಿದೆ). ಹಿಂದೆ ನವಗ್ರಹ ಹೋಮಾದಿಗಳಿಗೆ ಮಾಡಿಕೊಂಡಂತೆ ಇಲ್ಲಿಯೂ ಆಜ್ಯಭಾಗಾಂತದವರೆವಿಗೆ ಅಗ್ನಿಮುಖ ಪ್ರಯೋಗವನ್ನು ಮಾಡುವುದು. ಇಲ್ಲಿ ಪಾತ್ರಾಸಾದನ ಮಾಡುವಾಗ ಸ್ರುಕ್, ಸ್ರುವ, ಪ್ರೋಕ್ಷಣಪಾತ್ರ, ಪ್ರಣೀತಾಪಾತ್ರ, ಆಜ್ಯಪಾತ್ರ, ಇಧ್ಮ ಮುಂತಾದ ದೈವಪಾತ್ರಗಳ ಜೊತೆಯಲ್ಲಿ ಮಾನುಷಪಾತ್ರಗಳಾದ ಮುತ್ತುಗದ ಸಮಿತ್ತು, ದರ್ಭೆ, ನೀರು, ಕೂರ್ಚ, ದೀಕ್ಷಾವಸ್ತ್ರ, ಅಶ್ಮ (ಕಲ್ಲು/ ಸಾಣೆಕಲ್ಲು), ಮುತ್ತುಗದದಂಡ, ಕೃಷ್ಣಾಜಿನದ ಚೂರು, ಮೌಂಜೀ, ಭಿಕ್ಷಾಪಾತ್ರೆ ಇವುಗಳನ್ನೂ ಇಟ್ಟು ಒಟ್ಟಿಗೆ ಪವಿತ್ರ ಕರಣಾದಿ ಆಜ್ಯಭಾಗಾಂತದವರೆಗೆ ಅಗ್ನಿಮುಖ ಪ್ರಯೋಗ ಮಾಡಬೇಕು.

19. **ಪಲಾಶ ಸಮಿದಾಧಾನ:** ಕುಮಾರನಿಂದ ಆಚಮನ ಮಾಡಿಸಿ ಅವನ ಬಲ ಕೈಯಿಂದ ಆಜ್ಯಸಹಿತವಾದ ಮುತ್ತುಗದಸಮಿತ್ತನ್ನು 'ಆಯುರ್ದಾದೇವ....' ಎಂಬ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮಮಾಡಿಸಬೇಕು.

20. **ಅಶ್ಮಾರೋಹಣ:** ಪಲಾಶಸಮಿದ್ಧೋಮದ ನಂತರ ಕುಮಾರನನ್ನು ಅಗ್ನಿಗೆ ಉತ್ತರ ದಿಕ್ಕಿನಲ್ಲಿ ಇಟ್ಟಿರುವ ಕಲ್ಲಿನ ಮೇಲೆ (ಸಾಣೆಕಲ್ಲನ್ನು ಕೆಲವರು ಉಪಯೋಗಿಸುತ್ತಾರೆ) ಬಲಗಾಲು ಮುಂದಿಟ್ಟು ನಿಲ್ಲುವಂತೆ ಹೇಳಬೇಕು. ಹಾಗೆ ನಿಂತಿರುವಾಗಲೇ ಮಂತ್ರಪೂರ್ವಕವಾಗಿ ಕುಮಾರನಿಗೆ ದೀಕ್ಷಾವಸ್ತ್ರಗಳನ್ನು, ಅಜಿನ, ದಂಡ ಮತ್ತು ಮೌಂಜಿಧಾರಣೆ ಮಾಡಿಸಬೇಕು. ಇಲ್ಲಿನ ಮಂತ್ರಭಾಗವನ್ನು ಮುಂದೆ ಕೊಟ್ಟಿದೆ.

21. **ಆಚಾರ್ಯಾಭಿಮುಖಿಗಮನ ಮತ್ತು ಉದಕಾಂಜಲಿ:** ವಸ್ತ್ರದಂಡಾದಿ ಧಾರಣಮಾಡಿದ ಕುಮಾರನನ್ನು ಅಗ್ನಿಗೆ ಉತ್ತರದಲ್ಲಿ ಪ್ರಾಗಗ್ರವಾಗಿ ಹರಡಿರುವ ದರ್ಭೆಯ ಮೇಲೆ ಆಚಾರ್ಯನು ತನಗೆ ಅಭಿಮುಖವಾಗಿ ಕುಳ್ಳಿರಿಸಿಕೊಳ್ಳಬೇಕು. ಹಾಗೆ ಕುಳಿತಿರುವ ಕುಮಾರನ ಬೊಗಸೆಗೆ ಆಚಾರ್ಯ ತನ್ನ ಬೊಗಸೆಯಲ್ಲಿ (ಬೇರೆಯವರಿಂದ ಹಾಕಿಸಿಕೊಂಡು) ಇರುವ ನೀರನ್ನು ಸುರಿದು ಆ ನೀರನ್ನು

ಕುಮಾರನಿಗೆ ಮೂರುಸಲ ಪ್ರೋಕ್ಷಣೆ ಮಾಡಬೇಕು. ಇದರ ಮಂತ್ರಭಾಗವನ್ನು ಮುಂದೆ ಕೊಟ್ಟಿದೆ.

22. **ಹಸ್ತಗ್ರಹಣ:** ಕುಮಾರನು ಮುಂದೆ ವಿದ್ಯಾಭ್ಯಾಸಕ್ಕಾಗಿ ಗುರುಕುಲಕ್ಕೆ ಹೋದಾಗ ಅಲ್ಲಿ ತನ್ನವರು ಯಾರೂ ಇಲ್ಲವೆಂಬ ಭಾವನೆ ಬಂದು ಅವನ ಧೈರ್ಯ ಕುಗ್ಗಬಹುದು. ಹಾಗಾಗದಿರಲಿ ಎಂದು ಆಚಾರ್ಯನು 'ಅಗ್ನಿಷ್ಟೇ ಹಸ್ತಮಗ್ರಭೀತ್' ಎಂಬ ಹತ್ತು ಮಂತ್ರಗಳಿಂದ ಕುಮಾರನ ಬಲಹಸ್ತವನ್ನು ಹಿಡಿದುಕೊಳ್ಳುತ್ತಾನೆ. ಇಲ್ಲಿ ಹೇಳುವ ಮಂತ್ರಗಳ ಅಭಿಪ್ರಾಯದಂತೆ ಅಗ್ನಿದೇವನೂ, ಸೋಮನೂ, ಸವಿತೃವೇ ಮುಂತಾದ ದೇವೋತ್ತಮರು ವಟುವಿನ ಹಸ್ತಗ್ರಹಣ ಮಾಡುತ್ತಾರಾದ್ದರಿಂದ ಕುಮಾರನು ಮುಂದೆ ಯಾವ ವಿಧವಾದ ಭಯ, ಆತಂಕಗಳಿಂದಲೂ ಇರಬೇಕಾಗಿಲ್ಲ ವೆಂದು ಆಶ್ವಾಸನೆ ನೀಡಿರುವುದಾಗಿದೆ.

23. **ದೇವತಾಪ್ರದಾನ:** ಹೀಗೆ ವಟುವಿನ ಹಸ್ತವನ್ನು ಹಿಡಿದ ಆಚಾರ್ಯನು ಪುನಃ ಅವನ ಬಲಗೈಯನ್ನು ಹೆಬ್ಬೆರಳು ಸಮೇತ ಹಿಡಿದುಕೊಂಡು 'ಅಗ್ನೇಯೇತ್ವಾ' ಎಂಬ ಹನ್ನೊಂದು ಮಂತ್ರಗಳಿಂದ ಅಗ್ನಿಯೇ ಮುಂತಾದ ಹನ್ನೊಂದು ದೇವತೆಗಳಿಗೆ ಪ್ರತಿಮಂತ್ರದೊಡನೆ ರಕ್ಷಣೆಗಾಗಿ ಒಪ್ಪಿಸುತ್ತಾನೆ. ಈ ಹನ್ನೊಂದು ದೇವತೆಗಳಲ್ಲಿ ಮೃತ್ಯು, ಯಮ, ಅಂತಕ ಎಂಬ ಮೂರು ಮೃತ್ಯುದೇವತೆಗಳಿಗೂ ಮತ್ತು 'ಗದ' ಎಂಬ ರೋಗಾಭಿಮಾನಿದೇವತೆಯೂ ಇದ್ದಾರೆ. ಕುಮಾರನನ್ನು ಇವರುಗಳಿಗೇ ರಕ್ಷಣೆಗಾಗಿ ಅರ್ಪಿಸಿದ ಮೇಲೆ ಅವರಿಂದ ಕುಮಾರನಿಗೆ ಮುಂದೆ ಯಾವ ರೋಗ ಅಥವಾ ಅಪಮೃತ್ಯುವಿನ ಭಯವಿರುವುದಿಲ್ಲ ಎಂದು ಮಂತ್ರದ ಅಭಿಪ್ರಾಯ.

24. **ಬ್ರಹ್ಮೋಪದೇಶ:** ದೇವತಾಪ್ರದಾನದ ನಂತರ ಆಚಾರ್ಯನು ಕುಮಾರ ನನ್ನು 'ದೇವಸ್ಯ ತ್ವಾ...' ಎಂಬ ಮಂತ್ರದಿಂದ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಜ್ಯೋತಿಷ್ಕರಿಂದ ಮೊದಲೇ ಗೊತ್ತುಮಾಡಿದ ಸುಮುಹೂರ್ತದಲ್ಲಿ ಮಂಗಲಾಷ್ಟಕ, ಚೂರ್ಣಿಕಾಪಠನಪೂರ್ವಕ 'ಸುಪ್ರಜಾಃ ಪ್ರಜಯಾ ಭೂಯಾಃ.... ಪೋಷ್ಯೈ' ಎಂಬ ಮಂತ್ರವನ್ನು ಕುಮಾರನ ಬಲಕಿವಿಯಲ್ಲಿ ಸಾವಧಾನವಾಗಿ ಜಪಿಸಿ, ಸಂಪ್ರದಾಯಾನು ಸಾರ ಜೀರಿಗೆ ಬೆಲ್ಲವನ್ನು ಮಾತಾಪಿತೃಗಳು ವಟುವಿನ ಶಿರಸ್ಸಿನಲ್ಲಿ ಇಡುತ್ತಾರೆ. ನಂತರ ಪರದೆ(ಅಂತರಪಟ)ಯನ್ನು ತೆಗೆದು ಬ್ರಾಹ್ಮಣ ಸುವಾಸಿನಿಯರಿಂದ ಆಶೀರ್ವಾದವನ್ನು ಮಾಡಿಸಬೇಕು. ಈ ಕರ್ಮವೇ 'ಬ್ರಹ್ಮೋಪದೇಶ' ಎಂಬ ಮುಖ್ಯವಾದ ಕಾರ್ಯಕ್ರಮ. ಈ ಬ್ರಹ್ಮೋಪದೇಶವಾದ ಮೇಲೆ ಆಚಾರ್ಯನ ಪ್ರಶ್ನೆಗಳಿಗೆ ಕುಮಾರನ ಉತ್ತರ, ಉಪನಯನಪ್ರಧಾನಹೋಮ ಮುಂತಾದವು ನಡೆದ ನಂತರ 'ಗಾಯತ್ರೀ ಉಪದೇಶ' ಇರುತ್ತದೆ. ಆದ್ದರಿಂದ 'ಬ್ರಹ್ಮೋಪದೇಶ'

ವನ್ನು 'ಗಾಯತ್ರೀ ಉಪದೇಶ'ವೆಂದು ತಿಳಿಯಬಾರದು. ಗಾಯತ್ರೀ ಉಪದೇಶವಾದ ನಂತರವೇ ವಟುವು ವೇದಾಧ್ಯಯನಕ್ಕೆ ಅಧಿಕಾರಿಯಾಗುತ್ತಾನೆ. ಬ್ರಹ್ಮೋಪ-ದೇಶದಲ್ಲಿ ವಟುವು ಬ್ರಹ್ಮಚರ್ಯಾಶ್ರಮವನ್ನು ಸ್ವೀಕರಿಸಿ ಮುಂದೆ ಎಂತಹ ಅಧಿಕಾರಿಯಾಗಿ ಇರಬೇಕೆಂದು ಉಪದೇಶಿಸುತ್ತಾರೆ. ಉಪದೇಶವೆಂದರೆ ಹಿತವನ್ನು ಹೇಳುವುದು. ಸಲಹೆ ಕೊಡುವುದು ಎಂದರ್ಥ. (ಉಪ + ದಿಶ – ಅತಿಸರ್ಜನೇ – 'ಘಞ್') 'ಬ್ರಹ್ಮ'ವೆಂದರೆ ವೇದ ಎಂದೂ ಅದನ್ನು ಅಧ್ಯಯನ ಮಾಡುವವನು 'ಬ್ರಹ್ಮಚಾರೀ' (ಬ್ರಹ್ಮಣಿ ಚರತಿ ಇತಿ ಬ್ರಹ್ಮಚಾರೀ) ಎಂದೂ ಅರ್ಥ. 'ಬ್ರಹ್ಮ' ಎಂದರೆ ಎಲ್ಲರಿಗೂ ಹಿರಿಯವನೂ, ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಇವುಗಳಲ್ಲಿ ಎಲ್ಲರನ್ನೂ ಮೀರಿಸಿದ ದೊಡ್ಡವನು ಎಂದು ಮುಂಡಕಭಾಷ್ಯದಲ್ಲಿದೆ. (ಬ್ರಹ್ಮಾ ಪರಿವೃಢಃ ಮಹಾನ್ ಧರ್ಮಜ್ಞಾನವೈರಾಗ್ಯೈಶ್ವರ್ಯೈಃ ಸರ್ವಾನನ್ಯಾನ್ ಅತಿಶೇತೆ ಇತಿ) ಇಂತಹ ಬ್ರಹ್ಮದ ಉಪಾಸನೆಗೆ ತಕ್ಕ ಆಶ್ರಮವೇ ಬ್ರಹ್ಮಚರ್ಯಾಶ್ರಮ. ಈ ಆಶ್ರಮವನ್ನು ಕುಮಾರನು ಸ್ವೀಕರಿಸಿದ ನಂತರ ಅವನು ಹೇಗೆ ಇರಬೇಕೆಂದು ತಿಳಿಹೇಳುವ ಉಪದೇಶವೇ 'ಬ್ರಹ್ಮೋಪದೇಶ' ಅಥವಾ ಬ್ರಹ್ಮಚರ್ಯವ್ರತೋಪದೇಶ. ಇಲ್ಲಿ ಆಚಾರ್ಯನು ಕುಮಾರನ ಬಲಕಿವಿಯಲ್ಲಿ ಜಪಿಸುವ ಮಂತ್ರದ ಅರ್ಥವೇನೆಂದರೆ 'ನೀನು ಸಮಸ್ತ ಪ್ರಜೆಗಳ ಪೈಕಿ ಅತ್ಯಂತ ಶ್ರೇಷ್ಠನಾದ ಪ್ರಜೆಯಾಗಬೇಕು, ವೀರರಲ್ಲಿ ವೀರನೂ, ವರ್ಚಸ್ವಿಗಳಲ್ಲಿ ವರ್ಚಸ್ವಿತಮನೂ, ಪೋಷಣೆ ಮಾಡುವವರಲ್ಲಿ ಶ್ರೇಷ್ಠ ಪೋಷಕನೂ, ಸಮರ್ಥನೂ, ಸಮಸ್ತ ವಿದ್ಯಾಶಾಸ್ತ್ರ ಪಾರಂಗತನೂ ಆದವನಾಗು' ಎಂದು ಹಿತವನ್ನು ಹೇಳುವುದಾಗಿದೆ. ಹೀಗೆ ಉಪದಿಷ್ಟನಾದ ವಟುವು 'ಬ್ರಹ್ಮಚರ್ಯಮಾಗಾಂ...' ಎಂಬ ಮಂತ್ರದಿಂದ ಆಚಾರ್ಯನಿಗೆ ಪ್ರತಿವಚನ ಹೇಳುತ್ತಾನೆ. 'ವೇದಗ್ರಹಣ ಮಾಡತಕ್ಕ ಬ್ರಹ್ಮಚರ್ಯ ವ್ರತವನ್ನು ಹೊಂದಿದ್ದೇನೆ. ಇಂತಹ ನನ್ನನ್ನು ಸವಿತೃದೇವನ ಆಜ್ಞೆ ಹೊಂದಿದ ನೀನು ಹತ್ತಿರ ಕರೆದುಕೋ' ಎಂದು ಕುಮಾರನು ಆಚಾರ್ಯನಿಗೆ ತಿಳಿಸುವ ಮಂತ್ರವು ಇದಾಗಿದೆ.

25. **ಆಚಾರ್ಯ-ವಟು ಪ್ರಶ್ನೋತ್ತರಗಳು:** ಹೀಗೆ ಬ್ರಹ್ಮಚರ್ಯವ್ರತಸ್ಥನಾದ ವಟುವಿಗೆ 'ಕೋ ನಾಮಾಸಿ?' 'ಕಸ್ಯ ಬ್ರಹ್ಮಚಾರ್ಯಸಿ?' ಎಂಬ ಎರಡು ಪ್ರಶ್ನೆಗಳನ್ನು ಆಚಾರ್ಯನು ಕೇಳಿ ಕುಮಾರನಿಂದ ಉತ್ತರ ಪಡೆದು 'ಏಷ ತೇ ದೇವ ಸೂರ್ಯ' ಇತ್ಯಾದಿ ಮಂತ್ರದಿಂದ ವಟುವಿಗೆ ಸೂರ್ಯನಿಂದ ದೀರ್ಘಾಯುಸ್ಸನ್ನು ಕೋರಿ ಅವನಿಂದಲೂ ಸೂರ್ಯನಿಗೆ 'ಅಧ್ವನಾಮಧ್ವಪತೇ' ಎಂಬ ಮಂತ್ರದಿಂದ ಪ್ರಾರ್ಥನೆಯನ್ನು ಮಾಡಿಸುತ್ತಾನೆ.

**26. ಉಪನಯನಪ್ರಧಾನ ಹೋಮ:** ಇಲ್ಲಿ 'ಯೋಗೇ ಯೋಗೇ' ಎಂಬ ಮಂತ್ರದಿಂದ ಮೊದಲುಗೊಂಡು ಹನ್ನೊಂದು ಪ್ರಧಾನ ಆಜ್ಯಾಹುತಿಗಳಿರುತ್ತವೆ. ಎಲ್ಲ ಆಹುತಿಗಳನ್ನೂ ಕುಮಾರನೇ ಕೊಡಬೇಕು. ಈ ಹನ್ನೊಂದು ಆಜ್ಯಾಹುತಿ ಮಂತ್ರಗಳ ಪೈಕಿ ಎರಡನೇ ಮತ್ತು ನಾಲ್ಕನೇ ಮಂತ್ರಗಳನ್ನು (ಇಮಮಗ್ನ.... ಮತ್ತು ಅಗ್ನಿಷ್ಟ ಆಯು.... ಎಂದು ಪ್ರಾರಂಭವಾಗುವ ಮಂತ್ರಗಳನ್ನು) ಆಚಾರ್ಯನು ಮಾತ್ರ ಪಠಿಸಿ ಕುಮಾರನಿಂದ ಆಹುತಿಯನ್ನು ಕೊಡಿಸಬೇಕು. ಉಳಿದ ಒಂಬತ್ತು ಮಂತ್ರ ಗಳನ್ನು ಕುಮಾರನಿಂದಲೇ ಹೇಳಿಸಿ ಹೋಮ ಮಾಡಿಸಬೇಕು. ಹೀಗೆ ಪ್ರಧಾನ ಹೋಮವಾದ ನಂತರ ಆಚಾರ್ಯನು ಕರ್ಮಸಮೃದ್ಧಿಗಾಗಿ 'ಜಯಾದಿ' ಹೋಮ ವನ್ನು ಮಾಡಿ (ಬರ್ಹಿಸ್ಸಮಂಜನ ಮತ್ತು ಪರಿಧಿಪ್ರಹರಣವೂ ಇಲ್ಲಿಲ್ಲ) ಜ್ಞಾತಾ ಜ್ಞಾತಾದಿ ಕರ್ಮಲೋಪ ಪರಿಹಾರಾರ್ಥವಾಗಿ ಅನಾಜ್ಞಾತಾದಿ ಹೋಮಗಳನ್ನು ಮಾಡಿ ಪ್ರಣೀತಾ ಮೋಕ್ಷಣಾಂತದವರೆವಿಗೂ ಮಾಡಿ ಬ್ರಹ್ಮವಿಸರ್ಜನೆಯನ್ನು ಮಾತ್ರ ಗಾಯತ್ರೀ ಉಪದೇಶಾನಂತರವೇ ಮಾಡತಕ್ಕದ್ದು.

**27. ಗಾಯತ್ರೀ ಮಂತ್ರೋಪದೇಶ:** ಉಪನಯನಾಗ್ನಿಗೆ ಪಶ್ಚಿಮದಲ್ಲಿ ಉದಗಗ್ರ ವಾಗಿ ಒಂದು ಕೂರ್ಚೆಯನ್ನು ಕುಮಾರನು ಇಡಬೇಕು ಮತ್ತು ಇದರ ಮೇಲೆ 'ರಾಷ್ಟ್ರಭೃತ್...' ಎಂಬ ಮಂತ್ರದಿಂದ ಆಚಾರ್ಯನು ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ಸಂಪ್ರದಾಯಕ್ಕೆ ಅನುಗುಣವಾಗಿ ಆಚಾರ್ಯನು (ತಂದೆಯು) ಗಾಯತ್ರೀ ಪ್ರದಾನಕಾಲದಲ್ಲಿ ನಿರ್ವಿಘ್ನತೆ ಉಂಟಾಗಲೆಂದು ಮಹಾಗಣಪತಿಪೂಜೆ ಮಾಡಿ ಸುಮುಹೂರ್ತತ್ವ ಸಿದ್ಧಿಗೋಸ್ಕರ ಬೃಹಸ್ಪತಿ ಪೂಜೆಯನ್ನೂ ಮಾಡುತ್ತಾನೆ. ನಂತರ ಕುಮಾರನು ಆಚಾರ್ಯನಿಗೆ ಪಶ್ಚಿಮಾಭಿಮುಖವಾಗಿ ಕುಳಿತು ಪಾದಗಳನ್ನು ತೊಳೆದು, ಒರೆಸಿ, ಪುಷ್ಪಾಕ್ಷತೆಗಳಿಂದ ಪೂಜಿಸಿ ನೀರನ್ನು ಪ್ರೋಕ್ಷಿಸಿಕೊಂಡು ತನ್ನ ಬಲಗೈಯಿಂದ ಆಚಾರ್ಯನ ಬಲಗಾಲಿನ ಅಂಗುಷ್ಠವನ್ನು ಮುಟ್ಟಿಕೊಂಡು 'ಸಾವಿತ್ರೀಂ ಭೋ ಅನುಬ್ರೂಹಿ' ಎಂದು ಪ್ರಾರ್ಥಿಸುತ್ತಾನೆ. ಆಗ ಆಚಾರ್ಯನು ಎದ್ದು ನಿಂತು ಸಭೆಯನ್ನು ನಮಸ್ಕರಿಸಿ 'ಗಾಯತ್ರೀ ಉಪದೇಶಸ್ಯ ಸುಮುಹೂರ್ತೋಽಸ್ತು' ಎಂದು ಹೇಳಿಸಿಕೊಂಡು ಸಭಾನುಜ್ಞೆಯಂತೆ ಕುಮಾರನಿಗೆ ಗಾಯತ್ರೀ ಮಂತ್ರವನ್ನು ಉಪದೇಶಮಾಡಬೇಕು. ಕುಮಾರನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಬಲಕಿವಿಯಲ್ಲಿ ವಸ್ತ್ರಾಚ್ಛಾದನಪೂರ್ವಕ ಗಾಯತ್ರೀ ಮಂತ್ರವನ್ನು ಮುಂದೆ ತೋರಿಸಿರುವಂತೆ ಹೇಳಿಕೊಡಬೇಕು.

1. ಓಂ ಭೂಃ ತತ್ಸವಿತುರ್ವರೇಣ್ಯಂ।

2. ಓಂ ಭುವಃ ಭರ್ಗೋ ದೇವಸ್ಯ ಧೀಮಹಿ।

3. ಓಗ್ಂ ಸುವಃ ಧಿಯೋ ಯೋ ನಃ ಪ್ರಚೋದಯಾತ್॥

4. ಓಂ ಭೂಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।

5. ಓಂ ಭುವಃ ಧಿಯೋ ಯೋ ನಃ ಪ್ರಚೋದಯಾತ್।

6. ಓಗ್ಂ ಸುವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್॥

ಈ ಮಂತ್ರೋಪದೇಶಾನಂತರ ವಸ್ತ್ರಾಚ್ಛಾದನವನ್ನು ತೆಗೆದು ವಟುವಿಗೆ ಬ್ರಾಹ್ಮಣರಿಂದ ಆಶೀರ್ವಾದ ಮಾಡಿಸುವುದು.

27. **ಓಷ್ಠ ಕರ್ಣ ಸ್ಪರ್ಶನ:** ವಟುವು ಗಾಯತ್ರೀ ಮಂತ್ರವನ್ನು ಕರ್ಣದ್ವಾರಾ ಕೇಳಿಸಿಕೊಂಡು ಮುಖದ್ವಾರಾ ಉಚ್ಚರಿಸಿರುವುದಿಂದ ಆ ಮಂತ್ರವು ಅದೇ ದ್ವಾರಗಳಿಂದ ಹೊರಗೆ ಹೋಗಲೂ ಸಾಧ್ಯ. ಅದು ಹಾಗೆ ಆಗದಿರಲೆಂದು ಕುಮಾರನು 'ಅವೃಧಮಸಿ' ಎಂಬ ಮಂತ್ರದಿಂದ ತನ್ನ ಎರಡು ತುಟಿಗಳನ್ನೂ ಎಡಭಾಗದಿಂದ ಬಲಕಿವಿಯವರೆಗೂ ಬಲಗೈಯಿಂದ ಸವರಿಕೊಳ್ಳಬೇಕು. ನಂತರ ಆಚಮನ ಮಾಡಿ ಎರಡು ಕಿವಿಗಳನ್ನೂ 'ಬ್ರಹ್ಮಣ ಆಣೀಸ್ಥಃ' ಎಂದು ಹೇಳುತ್ತ ಎರಡು ಕೈಗಳಿಂದಲೂ ಒಂದೇ ಬಾರಿಗೆ ಮುಚ್ಚಿಕೊಳ್ಳಬೇಕು. ಮತ್ತೆ ಆಚಮನ ಮಾಡಬೇಕು.

29. **ಪಾಲಾಶದಂಡ ಸ್ವೀಕಾರ:** 'ಸುಶ್ರವಃ ಸುಶ್ರವಸಂ' ಎಂಬ ಮಂತ್ರಪೂರ್ವಕವಾಗಿ ಆಚಾರ್ಯನು ವಟುವಿಗೆ ತುದಿಯಲ್ಲಿ ಎಲೆಗಳಿರುವ ಮುತ್ತುಗದ ದಂಡವನ್ನು ಕೊಡುತ್ತಾನೆ. ಅದನ್ನು ಕುಮಾರನು ಬಲಗೈಯಲ್ಲಿ ಹಿಡಿದುಕೊಳ್ಳಬೇಕು. ಈ ಪಾಲಾಶದಂಡವು ಹೆಬ್ಬೆರಳಿಗಿಂತ ದಪ್ಪನಾಗಿರಬಾರದು ಮತ್ತು ವಟುವಿನಷ್ಟೇ ಎತ್ತರವಾಗಿರಬೇಕು. ವಟುವು ಮುಂದೆ ವೇದಾಧ್ಯಯನ ಮಾಡುವಾಗ ಯಾವಾಗಲೂ ಇದು ಜೊತೆಯಲ್ಲಿರಬೇಕು. ಎಂದಾದರೂ ಮುರಿದರೆ ಬೇರೆ ದಂಡವನ್ನು ಮಂತ್ರ

ಪೂರ್ವಕವಾಗಿ ಸ್ವೀಕರಿಸಬೇಕು. ಮುತ್ತುಗದ ದಂಡವೇ ಸಿಕ್ಕದಿದ್ದರೆ ಬಿಲ್ವದಂಡವಾದರೂ ಇರಬೇಕೆಂದು ವಿಧಿ ಇದೆ.

ಈ ಮುತ್ತುಗದ ವಿಶೇಷವೇನೆಂದರೆ ಹಿಂದೆ ದೇವತೆಗಳೆಲ್ಲ ಒಂದು ಬಾರಿ ಮುತ್ತುಗದ ಮರದ ಕೆಳಗೆ ವೇದಾಧ್ಯಯನವನ್ನೂ ಬ್ರಹ್ಮಚಿಂತನೆಯನ್ನೂ ಮಾಡಿದರು. ಅದನ್ನು ಪೂರ್ಣವಾಗಿ ಈ ವೃಕ್ಷವು ಕೇಳಿಸಿಕೊಂಡದ್ದರಿಂದ ಅದಕ್ಕೆ 'ಸುಶ್ರವಾ' ಎಂದು ಹೆಸರು ಬಂದಿತು. ಇಂತಹ ವೇದಶ್ರವಣಸಂಪನ್ನವಾದ ವೃಕ್ಷದ ಕೆಳಗೆ ಯಾವಾಗಲೂ ಅಧ್ಯಯನವು ಸಾಧ್ಯವಾಗಲಾರದೆಂದು ಅದರ ದಂಡವನ್ನು ಪ್ರತೀಕವಾಗಿ ಹತ್ತಿರದಲ್ಲಿ ಇಟ್ಟುಕೊಳ್ಳುವ ವ್ಯವಸ್ಥೆಯನ್ನು ಸೂತ್ರಕಾರರು ಮಾಡಿದ್ದಾರೆ. ವೇದಾಧ್ಯಯನವೆಲ್ಲ ಮುಗಿದು ಸಮಾವರ್ತನ ಕಾಲದಲ್ಲಿ (ಎಂದರೆ ಅಧ್ಯಯನವೆಲ್ಲ ಮುಗಿದು ಅಧ್ಯಾಪನ ಮಾತ್ರ ಮಾಡಬೇಕಾದಾಗ) ಈ ದಂಡವನ್ನು ವೃಕ್ಷರಾಜನಾದ ಅಶ್ವತ್ಥವೃಕ್ಷದ ಸನ್ನಿಧಿಯಲ್ಲಿ ವಿಸರ್ಜನೆಗೊಳಿಸಬೇಕು. ಹೀಗೆ ವೇದಸಂಬಂಧವಾದ ಮುತ್ತುಗದ ಶ್ರೇಷ್ಠತೆಯಿಂದ ಅದರ ಮಧ್ಯದ ಎಲೆಯಿಂದ ಸ್ರುಕ್, ಸ್ರುವ ಇಲ್ಲದಿದ್ದಾಗ ಹೋಮಾದಿಗಳನ್ನೂ ನಡೆಸುತ್ತಾರೆ. 'ಮಧ್ಯಮೇನ ಪರ್ಣೇನ ಜುಹೋತಿ' ಎಂಬ ಶ್ರುತಿವಾಕ್ಯವೇ ಇದೆ. ಇದರ ಸಮಿತ್ತನ್ನೂ ನವಗ್ರಹಹೋಮದಲ್ಲಿ ಚಂದ್ರಗ್ರಹಕ್ಕೆ ದ್ರವ್ಯವಾಗಿ ಬಳಸುತ್ತಾರೆ.

30. **ಬ್ರಹ್ಮಚಾರೀವ್ರತಗಳು:** ಪಾಲಾಶದಂಡ ಸ್ವೀಕಾರಾನಂತರ ವಟುವು 'ಸ್ಮೃತಂ ಚ ಮೇಽಸ್ಮೃತಂ ಚ ಮೇ' ಇತ್ಯಾದಿ ಮಂತ್ರೋಕ್ತ ಒಂಬತ್ತು ವ್ರತಗಳನ್ನು ಬ್ರಹ್ಮಚರ್ಯಾಶ್ರಮದಲ್ಲಿ ಪಾಲಿಸುವುದಾಗಿ ಪ್ರತಿಜ್ಞೆ ಮಾಡುತ್ತಾನೆ. ಈ ಮಂತ್ರಗಳನ್ನು ಆಚಾರ್ಯನು ಕುಮಾರನಿಂದ ಹೇಳಿಸಬೇಕು. ಮಂತ್ರಭಾಗ ಮುಂದೆ ಕೊಟ್ಟಿದೆ.

31. **ಆದಿತ್ಯೋಪಸ್ಥಾನ:** ಗಾಯತ್ರೀ ಉಪದೇಶವನ್ನು ನೀಡಿದ ಆಚಾರ್ಯನಿಗೆ ಕುಮಾರನು ಯಥಾಶಕ್ತಿ ಗುರುದಕ್ಷಿಣೆಯನ್ನು ಸಮರ್ಪಿಸಬೇಕು. ಆಚಾರ್ಯನು ಹದಿನೇಳುಸಲ ಪ್ರಾಣಾಯಾಮ ಮಾಡಿ 'ದೇವಸ್ಯ ತ್ವಾ' ಎಂಬ ಮಂತ್ರಪೂರ್ವಕವಾಗಿ ದಕ್ಷಿಣೆಯನ್ನು ಸ್ವೀಕರಿಸುತ್ತಾನೆ. (ಹಿಂದೆ ಗೋವನ್ನು ದಕ್ಷಿಣೆಯಾಗಿ ಕೊಡುವ ಪದ್ಧತಿ ಇತ್ತು.) ಬ್ರಹ್ಮಸ್ಥಾನದಲ್ಲಿರುವ ಬ್ರಾಹ್ಮಣನಿಗೂ ದಕ್ಷಿಣೆಯನ್ನು ಕೊಟ್ಟು (ಬ್ರಹ್ಮಣೇ ವರಂ ದತ್ವಾ) ಬ್ರಹ್ಮನನ್ನು ಉದ್ವಾಸನೆ ಮಾಡಬೇಕು. ನಂತರ ಆದಿತ್ಯೋಪಾಸನೆ. ಈ ಕಲಾಪದಲ್ಲಿ ಆಚಾರ್ಯನು ತನ್ನ ಕೈಯಿಂದ ಪಶ್ಚಿಮಾಭಿಮುಖವಾಗಿ ಕುಳಿತಿರುವ ಕುಮಾರನನ್ನು 'ಉದಾಯುಷಾ' ಎಂಬ ಮಂತ್ರಪೂರ್ವಕವಾಗಿ ಎಬ್ಬಿಸಿ 'ತಚ್ಚಕ್ಷುರ್ದೇವಹಿತಂ' ಎಂಬ ಮಂತ್ರವನ್ನು ಕುಮಾರನಿಂದ ಹೇಳಿಸುತ್ತ ಸೂರ್ಯನ ದರ್ಶನವನ್ನು

ಮಾಡಿಸಬೇಕು. ಮಂತ್ರಪೂರ್ವಕವಾಗಿ ದೇವತೆಗಳನ್ನುದ್ದೇಶಿಸಿ ಅಭಿಮುಖವಾಗಿ ನಿಲ್ಲುವುದಕ್ಕೆ 'ಉಪಸ್ಥಾನ'ವೆಂದು ಹೆಸರು. 'ಉಪಾನ್ಮಂತ್ರಕರಣೇ' (ಪಾ. ಸೂ. 1-3-25) 'ಉಪ' ಮತ್ತು 'ಅನು' ಎಂಬ ಉಪಸರ್ಗವನ್ನಿಟ್ಟುಕೊಂಡ 'ಸ್ಥಾ' ಧಾತುವಿಗೆ ದೇವತೆಯನ್ನುದ್ದೇಶಿಸಿ ಮಂತ್ರಪೂರ್ವಕವಾಗಿ ಅಭಿಮುಖವಾಗಿ ನಿಲ್ಲುವುದೆಂದಾಗ ಆತ್ಮನೇಪದವಾಗುತ್ತದೆ ಎಂದು ಮೇಲಿನ ಸೂತ್ರಾರ್ಥ. ಆದ್ದರಿಂದ 'ಆದಿತ್ಯಮುಪತಿಷ್ಠತೇ' ಎಂದು ಇಲ್ಲಿ ಕ್ರಿಯಾಪದವಾಗುತ್ತದೆ.

32. **ಕಾಮ್ಯ ವಿಧಿ:** ಮೇಲೆ ಹೇಳಿದಂತೆ ವಟುವಿನಿಂದ ಸೂರ್ಯೋಪಸ್ಥಾನ ಮಾಡಿಸಿದ ಮೇಲೆ ಆಚಾರ್ಯನು ಕುಮಾರನ ಬಲಗೈಯನ್ನು ಹಿಡಿದು 'ಯಸ್ಮಿನ್ ಭೂತಂ ಚ....' ಎಂಬ ಮಂತ್ರದಿಂದ ವಟುವು ಸಮಾವರ್ತನ ಪರ್ಯಂತ ಆಚಾರ್ಯನನ್ನು ಬಿಟ್ಟುಹೋಗದೆ ಇರಲಿ ಎಂಬ ಇಚ್ಛೆಯಿಂದ ಮೇಲಿನ ಮಂತ್ರವನ್ನು ಪಠನ ಮಾಡುತ್ತಾನೆ. ಇದೇ ಕಾಮ್ಯವಿಧಿ (ಮಂತ್ರವನ್ನು ಮುಂದೆ ಕೊಟ್ಟಿದೆ).

33. **ಸಮಿದಾಧಾನ(ಅಗ್ನಿಕಾರ್ಯ):** ಉಪನೀತನಾದ ವಟುವು ಬ್ರಹ್ಮಚರ್ಯಾಶ್ರಮದಲ್ಲಿ ಕಡ್ಡಾಯವಾಗಿ ಪ್ರತಿನಿತ್ಯವೂ ಮಾಡಬೇಕಾದ ತ್ರಿಕಾಲಸಂಧ್ಯಾವಂದನಾ ಮತ್ತು ದ್ವಿರಗ್ನಿಕಾರ್ಯಗಳಲ್ಲಿ ಮೊಟ್ಟಮೊದಲನೆಯ ಅಗ್ನಿಕಾರ್ಯವನ್ನು ಉಪನಯನಾಗ್ನಿಯಲ್ಲಿ ಈಗ ಮಾಡತಕ್ಕದ್ದು. ಈ ಕಾರ್ಯದ ಮಂತ್ರ ಮತ್ತು ವಿವರಣೆಯನ್ನು ಮುಂದೆ ಕೊಟ್ಟಿರುತ್ತೇವೆ. ಉಪನಯನಾಗ್ನಿಯನ್ನು ಮೂರುದಿನ ಕಾಪಾಡಿಕೊಂಡು ಅದರಲ್ಲೇ ಅಗ್ನಿಕಾರ್ಯವನ್ನು ಮಾಡುತ್ತ ನಾಲ್ಕನೆಯ ದಿನ ಈ ಅಗ್ನಿಯನ್ನು ವಿಸರ್ಜಿಸಿ ಮುಂದೆ ಲೌಕಿಕಾಗ್ನಿಯಲ್ಲಿ ನಿತ್ಯ ಅಗ್ನಿಕಾರ್ಯವನ್ನು ಮಾಡಬೇಕು. ಉಪನಯನಕಾಲದಲ್ಲಿ ವಟುವು ಬ್ರಾಹ್ಮಣನಿಗೆ ಅತ್ಯಂತ ಪೂಜ್ಯನಾದ ಅಗ್ನಿಯನ್ನು ತನ್ನ ಆಶ್ರಮಪರ್ಯಂತ ಪರಿಚರ್ಯೆಗಾಗಿ ಸ್ವೀಕರಿಸುತ್ತಾನೆ. ಹಾಗೆ ಸ್ವೀಕರಿಸಿದ ಅಗ್ನಿಗೆ ತಕ್ಕ ಆಹುತಿಗಳನ್ನು ನಿಯಮಿತ ಕಾಲಗಳಲ್ಲಿ ಅರ್ಪಿಸುವುದೇ ಅಗ್ನಿಕಾರ್ಯ ಅಥವಾ ಅಗ್ನಿಪರಿಚರ್ಯೆ. "ಯಥಾ ವತ್ಸೋ ಜಾತಃ ಸ್ತನಂ ಪ್ರೇಪ್ಸತಿ, ಏವಂ ವಾ ಏಷ ಏತರ್ಹಿ ಭಾಗಧೇಯಂ ಪ್ರೇಪ್ಸತಿ" ಎಂದು (ತೈ. ಸಂ. 5-4-3-1) ಶ್ರುತಿ ವಾಕ್ಯವಿದೆ. ಹೇಗೆ ಆಗತಾನೇ ಹುಟ್ಟಿದ ಕರುವು ತನ್ನ ತಾಯಿಯ ಹಾಲನ್ನು ಕುಡಿದು ಹಸಿವನ್ನು ಹಿಂಗಿಸಿಕೊಳ್ಳುವುದೋ ಹಾಗೆ ಆಗತಾನೇ ಸ್ವೀಕರಿಸಿದ ಅಗ್ನಿಗೆ ಆಹಾರ ರೂಪವಾಗಿ ಆಜ್ಯೋಪೇತವಾದ ಸಮಿತ್ತುಗಳನ್ನು ಆಧಾನಮಾಡಿ ಕಾಪಾಡಿಕೊಳ್ಳಬೇಕು. ಇದೇ ಅಗ್ನಿಕಾರ್ಯದ ತತ್ತ್ವ. ಈ ಮೂರು ದಿನಗಳೂ ವಟುವು ಖಾರ, ಉಪ್ಪು ಇವುಗಳನ್ನು ತಿನ್ನದೇ ವ್ರತಸ್ಥನಾಗಿರಬೇಕು.

**34. ಅನುಶಾಸನ (ಶಿಕ್ಷಾ):** ಅಗ್ನಿಕಾರ್ಯದ ನಂತರ ಆಚಾರ್ಯನು ವಟುವಿಗೆ ಬ್ರಹ್ಮಚರ್ಯಾಶ್ರಮದಲ್ಲಿ ಪಾಲಿಸಬೇಕಾದ ಮುಖ್ಯವಾದ ಆರು ನಿಯಮಗಳನ್ನು ಬೋಧಿಸಿ ವಟುವಿನಿಂದ ಪ್ರತಿವಚನ ಪಡೆಯುತ್ತಾನೆ. ಇದರ ವಿವರವನ್ನು ಮುಂದೆ ಕೊಟ್ಟಿದೆ. ಈ ಅನುಶಾಸನವು ಬಹಳ ಮುಖ್ಯವಾದದ್ದು. ನಿಯಮಗಳ ವಿಷಯದಲ್ಲೇ 'ತಪಸ್ಸು' ಎಂಬ ಶಬ್ದವು ಬಂದಿರುತ್ತದೆ. 'ನಿಯಮೇಷು ತಪಃಶಬ್ದಃ' ಎಂದು ಆಪಸ್ತಂಬರ ವಚನವಿದೆ.

**35. ಭಿಕ್ಷಾಚರ್ಯೆ:** ಮೇಲೆ ತಿಳಿಸಿದ ಆರು ಬ್ರಹ್ಮಚರ್ಯವ್ರತಗಳಲ್ಲಿ ಭಿಕ್ಷಾಚರ್ಯೆಯು ಐದನೆಯದಾಗಿದೆ. ಆಚಾರ್ಯನ ಅಪ್ಪಣೆಯಂತೆ ('ಭಿಕ್ಷಾಚರ್ಯಂ ಚರ') ವಟುವು ಭಿಕ್ಷೆ ಎತ್ತಬೇಕು. ಇದು ಭಿಕ್ಷೆ 'ಬೇಡುವುದಲ್ಲ'. ಭಿಕ್ಷೆ ಬೇಡುವುದು ಭಿಕ್ಷುಕರೇ ಮುಂತಾದವರು ತಮ್ಮ ಹೊಟ್ಟೆಪಾಡಿಗೆ ಮಾಡುವ ಕೆಲಸವಾಗಿರುತ್ತದೆ. ಬ್ರಹ್ಮಚಾರಿಗಳಾದರೆ ತಮಗೆ ಮತ್ತು ಆಚಾರ್ಯನಿಗೆ ಅಡುಗೆ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ ಕಾಲವಿನಿಯೋಗವಾಗಿ ಚಿತ್ತೈಕಾಗ್ರತೆಯೂ ಹೋಗುವುದರಿಂದ, ವೇದಾಧ್ಯಯನ ವ್ರತದ ಕಾಲದಲ್ಲಿ ಊಟಕ್ಕೆ ಭಿಕ್ಷೆಯನ್ನು 'ಎತ್ತುತ್ತಾರೆ' — ಇದು ಬ್ರಹ್ಮಚರ್ಯಾಶ್ರಮದ 'ಧರ್ಮ'. ಹಾಗೇ ಭಿಕ್ಷೆ ನೀಡುವುದೂ ಗೃಹಸ್ಥರ 'ಧರ್ಮ'ವಾಗಿರುತ್ತದೆ. ಈ ಧರ್ಮಕ್ಕನುಸಾರವಾಗಿ ಇಂದು ವಟುವು ಆಚಾರ್ಯನ ಅನುಜ್ಞೆಯ ಪ್ರಕಾರ ನಮಸ್ಕಾರಪೂರ್ವಕವಾಗಿ ತಾಯಿಯಿಂದ ಮೊದಲ ಭಿಕ್ಷೆಯನ್ನು ಪಡೆಯುತ್ತಾನೆ. ನಂತರ ಸುಮಂಗಲಿಯರಾದ ಸಹೋದರಿಯರು, ಚಿಕ್ಕಮ್ಮ, ದೊಡ್ಡಮ್ಮ ಮುಂತಾದವರಿಂದ 'ಭವತಿ ಭಿಕ್ಷಾಂ ದೇಹಿ' ಎಂದು ಹೇಳುತ್ತ ಭಿಕ್ಷೆ ಪಡೆಯುತ್ತಾನೆ. ಭಿಕ್ಷೆ ನೀಡುವವರು ಅಕ್ಕಿ, ಬೆಲ್ಲ ಮುಂತಾದ ಹಸಿ ಪದಾರ್ಥಗಳನ್ನೇ ನೀಡಬೇಕು. ಉಪನಯನದ ನಾಲ್ಕನೇ ದಿನದಿಂದ ಪಕ್ವಪದಾರ್ಥಗಳನ್ನು ಭಿಕ್ಷೆ ಪಡೆಯಬೇಕೆಂದು ವಿಧಿ ಇದೆ.

**36. ಪಾಲಾಶಕರ್ಮ:** ಕುಮಾರನಿಗೆ ಪ್ರಣವ, ಶ್ರದ್ಧಾ, ಮೇಧಾ ಸಿದ್ಧ್ಯರ್ಥವಾಗಿ ಉಪನಯನದ ನಾಲ್ಕನೇ ದಿನ ಈ ಕರ್ಮವನ್ನು ಮಾಡಬೇಕು. ಈಗಿನ ಕಾಲದಲ್ಲಿ ನಾಲ್ಕು ದಿನಗಳ ಉಪನಯನದ ಕಲಾಪ ಬಹುತೇಕ ಇರುವುದಿಲ್ಲವಾದ್ದರಿಂದ ಭಿಕ್ಷಾಚರ್ಯೆಯ ನಂತರ ಈ ಕೆಳಗೆ ಕಂಡಂತೆ ಕಾರ್ಯಗಳನ್ನು ನಡೆಸಿ ಉಪನಯನ ಸಂಸ್ಕಾರವನ್ನು ಒಂದೇ ದಿನದಲ್ಲಿ ಸಂಪನ್ನಗೊಳಿಸುವ ಪದ್ಧತಿ ಇದೆ.

ಅ) ಆಚಾರ್ಯನು (ತಂದೆಯು) ಆಚಮನ, ಸಂಕಲ್ಪಮಾಡಿ 'ಮಮ ಕುಮಾರಸ್ಯ ಆಯುಷ್ಯಾಭಿವೃದ್ಧ್ಯರ್ಥಂ ಮೇಧಾಜನನಸಿದ್ಧ್ಯರ್ಥಂ ಪ್ರಣವಶ್ರದ್ಧಾಮೇಧಾ ದೇವತಾ

ಪೂಜಾಂ ಕರಿಷ್ಯೆ' ಎಂದು ಹೇಳುವುದು. ನಂತರ ಒಂದು ಬಾಳೆಎಲೆಯಲ್ಲಿ ಅಕ್ಕಿಯನ್ನು (1 ಕೆ.ಜಿ.ಯಷ್ಟು) ಉದ್ದುದ್ದವಾಗಿ ರಾಶಿ ಹಾಕಿ ಅದನ್ನು ಮೂರು ಭಾಗ ಮಾಡಿ ಒಂದರಲ್ಲಿ ಪ್ರಣವ ಅಧಿದೇವತೆಯನ್ನು 'ಯಶ್ಛಂದಸಾ' ಎಂಬ ಮಂತ್ರದಿಂದಲೂ, ಶ್ರದ್ಧಾಧಿದೇವತೆಯನ್ನು 'ಶ್ರದ್ಧಯಾಗ್ನಿ' ಎಂಬ ಮಂತ್ರದಿಂದಲೂ ಮೂರನೆಯದಾದ ಮೇಧಾಧಿದೇವತೆಯನ್ನು 'ಮೇಧಾದೇವೀ ಜುಷಮಾಣಾ ನ' ಎಂಬ ಮಂತ್ರ ದಿಂದಲೂ ಆವಾಹಿಸಿ ಷೋಡಶೋಪಚಾರ ಪೂಜೆ ಮಾಡಿ ಪ್ರಸಾದ ಸ್ವೀಕಾರಮಾಡಿ ವಟುವಿಗೂ ಕೊಡಬೇಕು.

ಆ) ನಂತರ ವಟುವಿಗೆ ನೂತನ ವಸ್ತ್ರವನ್ನು ಉಡಿಸಿ (ಬಿಚ್ಚಿದ ವಸ್ತ್ರವನ್ನು ಆಚಾರ್ಯನಿಗೆ ಕೊಟ್ಟು) ಹಸೆಮಣೆಯ ಮೇಲೆ ಕೂರಿಸಿ ಸಾಂಪ್ರದಾಯಿಕವಾದ ಫಲ ಪೂಜೆ, ಸಭಾಪೂಜೆ, ಗುರುಪೂಜೆ ಇತರ ಮರ್ಯಾದಾ ತಾಂಬೂಲಗಳನ್ನು ಸಲ್ಲಿಸಿ ಮಹಾಜನರಿಂದ ಆಶೀರ್ವಾದವನ್ನು ಮಾಡಿಸಿ ಆರತಿ ಮಾಡಿ ಪಾರಿತೋಷಕಾದಿ ಗಳನ್ನು ಆಶೀರ್ವಾದಪೂರ್ವಕ ಕೊಡುವುದು.

ಇ) ಉಡುಗೊರೆ ಕಲಾಪದ ನಂತರ ಪೂರ್ವದಲ್ಲಿ ಆವಾಹಿತರಾದ ಇಷ್ಟದೇವತೆ, ಕುಲದೇವತೆ, ನಾಂದೀ, ಮಂಟಪದೇವತೆಗಳಿಗೆ ಉತ್ತರಪೂಜೆಯನ್ನು ಮಾಡಿ ಕಂಕಣ ವಿಸರ್ಜನೆಯನ್ನು ಮಾಡಿ ವಟುವನ್ನು ಅಶ್ವತ್ಥಕಟ್ಟೆಗೆ ಮಂಗಳವಾದ್ಯ ಸಮೇತ ಕರೆದುಕೊಂಡುಹೋಗಿ ಅಲ್ಲಿ ತ್ರಿಮೂರ್ತ್ಯಾತ್ಮಕ ಅಶ್ವತ್ಥನಾರಾಯಣನ ಮತ್ತು ವಸಂತ ಮಾಧವ ಪೂಜೆಮಾಡಿಸಿ ಪಾನಕ, ಕೋಸುಂಬರಿಗಳನ್ನು ಎಲ್ಲರಿಗೂ ಹಂಚಿ ಮನೆಗೆ ಬರುವುದು. ಅಲ್ಲಿ ಬಾಗಿಲ ಹೊರಗೆ ವಟುವಿಗೆ ನೀರಿನಿಂದ ಕಾಲು ತೊಳೆದು, ಆರತಿಮಾಡಿ ಇಡುಗಾಯಿ ಹಾಕುವುದು. ಅಲ್ಲಿಂದ ಒಳಗೆ ಹಸೆಮಣೆಯ ಮೇಲೆ ಕೂರಿಸಿ ವಟುವಿನ ಅಕ್ಕತಂಗಿಯರಿಂದ ಹಾಲು, ತುಪ್ಪ, ನೀರಿನಿಂದ ಕಾಲು ತೊಳೆದು ಗಂಧಾದಿಗಳಿಂದ ಅಲಂಕರಿಸಬೇಕು ('ವಾಮನ' ಎಂಬ ಭಾವನೆ ಇರಬೇಕು). ನಂತರ ಆ ಅಕ್ಕತಂಗಿಯರಿಗೂ ಕುಂಕುಮ ತಾಂಬೂಲ ವಸ್ತ್ರಾದಿಗಳನ್ನು ಕೊಟ್ಟು ಆರತಿಮಾಡಿ ಹಿರಿಯರಿಗೆ ನಮಸ್ಕರಿಸಿ ವಟುವು ಆಶೀರ್ವಾದ ಪಡೆಯುವುದು. ಇವೆಲ್ಲವೂ ಶಿಷ್ಟಾಚಾರಕ್ಕೆ ಸೇರಿದ ಕಲಾಪಗಳು.

(ಈ) ಕೊನೆಯಲ್ಲಿ ಬ್ರಾಹ್ಮಣ ಸುವಾಸಿನೀ ಭೋಜನ. ಆ ಕಾಲದಲ್ಲಿ ವಟುವು ಪರಿಷೇಚನಕ್ಕೆ ಮುಂಚೆ ಕೆಲವು ಬ್ರಾಹ್ಮಣರಿಂದ 'ಭವಾನ್ ಭಿಕ್ಷಾಂ ದೇಹಿ' ಎಂದು ಭಿಕ್ಷಾಚರ್ಯೆಮಾಡಿ ಆಚಾರ್ಯನ ಪಕ್ಕದಲ್ಲಿ ಕುಳಿತು ನೀರಿನಿಂದ ಪರಿಷೇಚನ ಮಾಡಿ ಚಿತ್ರಾಹುತಿ ಇಟ್ಟು ಆಪೋಶನಪೂರ್ವಕ ಪ್ರಾಣಾಹುತಿಗಳನ್ನು ತೆಗೆದುಕೊಂಡು

ಮೌನದಿಂದ ಊಟಮಾಡಬೇಕು. ಊಟವಾದ ಮೇಲೆ ಉತ್ತರಾಪೋಶನವನ್ನು ತೆಗೆದುಕೊಂಡು ಕೈತೊಳೆದು ಪುನಃ ಶುದ್ಧ ಆಚಮನ ಮಾಡಬೇಕು. ಇದು ಯಥಾ ಸಂಭವ ಶಾಸ್ತ್ರೀಯವಾದ ಕೃಷ್ಣಯಜುರ್ವೇದೀಯ ಆಪಸ್ತಂಬ ಸೂತ್ರಿಗಳ ಉಪನಯನ ಸಂಸ್ಕಾರ ಕಲಾಪವಾಗಿರುತ್ತದೆ.

ಇನ್ನು ಮುಂದೆ ವಟುವು ಪ್ರತಿದಿನವೂ ತ್ರಿಕಾಲ ಸಂಧ್ಯಾವಂದನೆ, ದ್ವಿರಗ್ನಿ ಕಾರ್ಯ, ಮತ್ತು ಬ್ರಹ್ಮಯಜ್ಞವನ್ನು ತಪ್ಪದೆ ಮಾಡತಕ್ಕದ್ದು. ಪ್ರಥಮೋಪಾಕರ್ಮವಾಗುವ ವರೆಗೂ ವೇದಾಧ್ಯಯನ ಅಧಿಕಾರವಿರುವದಿಲ್ಲವಾಗಿ, ಬ್ರಹ್ಮಯಜ್ಞಕಾಲದಲ್ಲಿ ಹೇಳ ಬೇಕಾದ ವೇದಮಂತ್ರಗಳ ಬದಲಾಗಿ ಗಾಯತ್ರೀಮಂತ್ರವನ್ನು ಹೇಳಿಕೊಳ್ಳಬೇಕು.

## ಭಾಗ - 2

# ಉಪನಯನ ಸಂಸ್ಕಾರ ಮಂತ್ರಗಳು ಮತ್ತು ಅರ್ಥ ವಿವರಣೆ

ಈ ಭಾಗದಲ್ಲಿ ಉಪನಯನ ಸಂಸ್ಕಾರವನ್ನು, ತತ್ತತ್ಕರ್ಮ ವಿಹಿತ ಮಂತ್ರಗಳ ಪ್ರಯೋಗ, ಅರ್ಥ ವಿವರಣೆ ಸಮೇತ ಯಥಾಮತಿಯಾಗಿ ಕೊಟ್ಟಿರುತ್ತೇವೆ. ಕರ್ಮ ಭಾಗಗಳ ಅರ್ಥವನ್ನು ಯಜಮಾನನಿಗೂ ವಟುವಿಗೂ ತಿಳಿಸಿದಲ್ಲಿ ಅವರಿಗೆ ಕರ್ಮಶ್ರದ್ಧೆ ಉಂಟಾಗುತ್ತದೆ ಎಂಬ ಉದ್ದೇಶದಿಂದ ವಿವರಗಳನ್ನು ಇಲ್ಲಿ ಕೊಡಲಾಗಿದೆ.

ಉಪನಯನದ ಹಿಂದಿನ ದಿವಸ ಯಜಮಾನನು ಪತ್ನೀ ಮತ್ತು ವಟು ಸಹಿತ ಶಿಷ್ಟಾಚಾರದಂತೆ ಮಂಗಳಸ್ನಾನವನ್ನು ಮಾಡಿ ಗಣಪತಿ ಪೂಜಾ, ಪುಣ್ಯಾಹ, ನಾಂದಿ, ಗ್ರಹಯಜ್ಞ, ಇಷ್ಟದೇವತಾಪೂಜೆ, ಮಂಟಪಪೂಜೆಗಳನ್ನು ಮಾಡಬೇಕು. ಇಷ್ಟು ಕಾರ್ಯಗಳಿಗೆ ಬೇಕಾದ ಮಂತ್ರಗಳು ಸಾಮಾನ್ಯವಾಗಿ ಎಲ್ಲ ಪುರೋಹಿತರುಗಳಿಗೆ ತಿಳಿದಿರುತ್ತದೆಯಾದ್ದರಿಂದ ಈ ಕರ್ಮಾಂಗ ಮಂತ್ರಗಳನ್ನು ಇಲ್ಲಿ ಕೊಟ್ಟಿಲ್ಲ. ಕುಮಾರ ನಿಗೆ ಜಾತಕರ್ಮ, ನಾಮಕರಣ, ಅನ್ನಪ್ರಾಶನಾದಿಗಳು ಆಗದಿದ್ದರೆ ಆ ಸಂಸ್ಕಾರ ಗಳನ್ನೂ ಇಂದು ನೆರವೇರಿಸಿಕೊಳ್ಳಬೇಕು.

ಉಪನಯನದ ದಿನ ಬೆಳಗ್ಗೆ ಯಜಮಾನನು ಪತ್ನೀ ಪುತ್ರನೊಡನೆ ಮಂಗಳ ಸ್ನಾನವನ್ನು ಮಾಡಿ ಸಂಧ್ಯಾಚರಣೆಯ ನಂತರ ಕರ್ಮಣಃಪುಣ್ಯಾಹವನ್ನು ಮಾಡ ಬೇಕು.

1. **ಕರ್ಮಣಃ ಪುಣ್ಯಾಹ ವಿಧಿ:** ಪ್ರಾಣಾನಾಯಮ್ಯ — ದೇಶಕಾಲೌ ಸಂಕೀರ್ತ್ಯ.... ನಕ್ಷತ್ರೇ / ರಾಶೌ ಜಾತಸ್ಯ ಮಮ / ಅಸ್ಯ ಕುಮಾರಸ್ಯ (ಅಮುಕ) ಕರ್ಮಾಂಗ ಕರ್ಮಣಃ ಪುಣ್ಯಾಹವಾಚನಂ ಕರಿಷ್ಯೇ ಎಂದು ಸಂಕಲ್ಪಮಾಡಿ ನಂತರ 'ತತ್ತ್ವಾಯಾಮಿ ಬ್ರಹ್ಮಣಾ.... ಪ್ರಮೋಷೀಃ' ಎಂಬ ಮಂತ್ರದಿಂದ ವರುಣ ದೇವತೆಯನ್ನೂ 'ವಾಸ್ತೋಷ್ಪತೇ...' ಎಂಬ ಮಂತ್ರದಿಂದ ವಾಸ್ತುಪುರುಷನನ್ನೂ ಪೂಜಿಸಬೇಕು. ಆಹ್ವಾನಿತ ಬ್ರಾಹ್ಮಣರ ಮೇಲೆ ಅಕ್ಷತೆ ಹಾಕಿ 'ಭವದ್ಭಿರನುಜ್ಞಾತಃ ಪುಣ್ಯಂ ಪುಣ್ಯಾಹಂ ವಾಚಯಿಷ್ಯೇ' ಎಂದು ಹೇಳಿ, 'ಓಂ ಪುಣ್ಯಾಹಂ ಭವಂತೋ ಬ್ರುವಂತು', 'ಓಂ ಸ್ವಸ್ತಿ ಭವಂತೋ ಬ್ರುವಂತು', 'ಓಂ ಋದ್ಧಿಂ ಭವಂತೋ ಬ್ರುವಂತು' ಎಂದು ಯಜಮಾನನು ಒಂದೊಂದು ವಾಕ್ಯವನ್ನೂ ಮೂರುಸಾರಿ ಹೇಳಬೇಕು. ಆಗ ಬ್ರಾಹ್ಮಣರು ಪ್ರತಿ ವಾಕ್ಯಕ್ಕೂ ಉತ್ತರವಾಗಿ 'ಓಂ ಪುಣ್ಯಾಹಮ್', 'ಓಂ ಸ್ವಸ್ತಿ', 'ಓಂ ಋದ್ಧ್ಯತಾಂ' ಎಂದು ಮೂರು ಮೂರು ಬಾರಿ ಹೇಳುತ್ತಾರೆ — 'ಪುಣ್ಯಾಹ ಸಮೃದ್ಧಿರಸ್ತು' ಎಂದು ಕೊನೆಯಲ್ಲಿ ಹೇಳಿ ಪುಣ್ಯಾಹ ಕಲಶೋದಕವನ್ನು ಕುಮಾರನ ಕೈಗೆ ಹಾಕಿ ಎಲ್ಲರಿಗೂ ಪ್ರೋಕ್ಷಿಸಬೇಕು.

2. **ರಕ್ಷಾಬಂಧನ ವಿಧಿ:** ಬೋಧಾಯನೋಕ್ತವಾದ ರಕ್ಷಾಬಂಧನ (ಪ್ರತಿಸರ ಬಂಧ) ಪ್ರಯೋಗವು 'ಉದಕ ಶಾಂತಿ ಪ್ರಯೋಗದಂತೆಯೇ ಉದಕುಂಭ ಸ್ಥಾಪನ, ಕೃಣುಷ್ವ ಪಾಜ' ಇತ್ಯಾದಿ ಮಂತ್ರಪಠಣ, ಕುಂಭೋದಕದಿಂದ ರಕ್ಷಾತಂತುವಿಗೆ ಪ್ರೋಕ್ಷಣೆ ನಂತರ ರಕ್ಷಾಬಂಧನ ಇತ್ಯಾದಿಯಾಗಿ ಬಹಳ ಸುದೀರ್ಘವಾದ ಪ್ರಯೋಗ ವಿದೆ. ಉಪನಯನದ ದಿನ ಇಷ್ಟು ದೀರ್ಘವಾದ ಕಲಾಪಕ್ಕೆ ಕಾಲಾವಕಾಶ ವಿರುವುದಿಲ್ಲದ್ದರಿಂದಲೂ ಮತ್ತು ಈ ರೀತಿಯಾಗಿ ರಕ್ಷಾಬಂಧನ ಪ್ರಯೋಗವನ್ನು ಸಾಮಾನ್ಯವಾಗಿ ಈಗ ಯಾರೂ ಅನುಷ್ಠಾನ ಮಾಡುತ್ತಿಲ್ಲವಾದ್ದರಿಂದ, ರೂಢಿಯಲ್ಲಿ ಇರುವ ಪ್ರಯೋಗವನ್ನು ಕೆಳಗೆ ಕಂಡಂತೆ ಕೊಟ್ಟಿದೆ (ಬೇರೆ ಪ್ರಯೋಗ ಬಲ್ಲವರು ಅದರಂತೆ ಆಚರಿಸಬಹುದು).

ಒಂದು ತಟ್ಟೆಯಲ್ಲಿ ಸ್ವಲ್ಪ ಅಕ್ಕಿಯನ್ನು ಹರಡಿ ಎರಡು ವಿಳ್ಳೆದೆಲೆ ಅಡಿಕೆ ಇಟ್ಟು ಅದರಲ್ಲಿ ಒಂಬತ್ತು ಎಳೆಯ ದಾರಕ್ಕೆ ಅರಿಶಿನಕೊನೆಯನ್ನು ಕಟ್ಟಿದ ಸೂತ್ರವನ್ನು ಇಟ್ಟು ಷೋಡಶೋಪಚಾರ ಪೂಜೆಮಾಡಬೇಕು.

**ಸಂಕಲ್ಪ:** ದೇಶಕಾಲೌ ಸಂಕೀರ್ತ್ಯ... ನಕ್ಷತ್ರ / ರಾಶೌ ಜಾತಸ್ಯ ಕುಮಾರಸ್ಯ ಉಪನಯನಕರ್ಮಾಂಗ ರಕ್ಷಾಧಾರಣಂ ಕರಿಷ್ಯೇ.

**ಧ್ಯಾನಂ:** ನಮೋ ಅಸ್ತು ಸರ್ಪೇಭ್ಯೋ ಯೇ ಕೇಚ ಪೃಥಿವೀ ಮನು।

ಯೇ ಅನ್ತರಿಕ್ಷೇ ದಿವಿ ತೇಭ್ಯಃ ಸರ್ಪೇಭ್ಯೋ ನಮಃ॥

- ಅಸ್ಮಿನ್ ಸೂತ್ರೇ ಓಂ ಭೂಃ ವಾಸುಕಿಮಾವಾಹಯಾಮಿ। ಓಂ ಭುವಃ...ಯಾಮಿ। ಓಗ್‌ಂ ಸುವಃ ...ಯಾಮಿ। ಓಂ ಭೂರ್ಭುವಸ್ಸುವಃ... ಆವಾಹಯಾಮಿ ಸ್ಥಾಪಯಾಮಿ ಪೂಜಯಾಮಿ। ಸೂತ್ರದಲ್ಲಿ ವಾಸುಕಿಯನ್ನು ಆವಾಹನೆ ಮಾಡಿ ಆಸನಾದಿ ಷೋಡಶೋಪಚಾರ ಪೂಜೆಮಾಡಬೇಕು. ಕಾಲಾವಕಾಶವನ್ನು ನೋಡಿ ಕೊಂಡು 'ಅಗ್ನಿಮೀಳೇ...' ಇತ್ಯಾದಿ ನಾಲ್ಕೂ ವೇದಗಳ ಋಕ್ಕುಗಳನ್ನೂ, ಕೃಣುಷ್ವಪಾಜ, ವಿಷ್ಣೋರ್ನುಕಂ, ಜಾತವೇದಸೇ ಇತ್ಯಾದಿ ಮಂತ್ರಪಠನ ಮಾಡಿಸಿ, 'ತ್ರ್ಯಂಬಕಂಯಜಾಮಹೇ' ಎಂಬ ಮಂತ್ರದಿಂದ ಕೆಳಗಿನಿಂದ ಮೇಲುವರೆಗೆ ರಕ್ಷಾತಂತುವಿಗೆ ಭಸ್ಮಲೇಪನಮಾಡಿ ನಂತರ ದಾರವನ್ನು ತೆಗೆದುಕೊಂಡು 'ಅಗ್ನಿರಾಯುಷ್ಮಾನ್' ಎಂಬ ಮಂತ್ರದಿಂದ ಕುಮಾರನ ಬಲಗೈಗೆ ಕಟ್ಟಿ ಆಶೀರ್ವಾದ ಮಾಡಬೇಕು.

**ಆಶೀರ್ವಾದ ಮಂತ್ರ:**

ಅಗ್ನಿರಾಯುಷ್ಮಾನ್ಥ್ಸ ವನಸ್ಪತಿಭಿರಾಯುಷ್ಮಾನ್ತೇನ ತ್ವಾಽ
ಯುಷಾಽಽಯುಷ್ಮನ್ತಂ ಕರೋಮಿ ಸೋಮ ಆಯುಷ್ಮಾನ್ಥ್ಸ ಓಷ
ಧೀಭಿರಾಯುಷ್ಮಾನ್ತೇನ ತ್ವಾಽಽ ಯುಷಾಽಽಯುಷ್ಮನ್ತಂ ಕರೋಮಿ ಯಜ್ಞ
ಆಯುಷ್ಮಾನ್ಥ್ಸ ದಕ್ಷಿಣಾಭಿರಾಯುಷ್ಮಾನ್ತೇನ ತ್ವಾಯುಷಾಽಽ
ಯುಷ್ಮನ್ತಂ ಕರೋಮಿ ಬ್ರಹ್ಮಾಯುಷ್ಮತ್ತದ್ಬ್ರಾಹ್ಮಣೈರಾಯು
ಷ್ಮತ್ತೇನ ತ್ವಾಽಽಯುಷಾಽಽಯುಷ್ಮನ್ತಂ ಕರೋಮಿ ದೇವಾ
ಆಯುಷ್ಮನ್ತಸ್ತೇಽಮೃತೇನಾಯುಷ್ಮನ್ತಸ್ತೇನ ತ್ವಾಽಽಯುಷಾಽಽ
ಯುಷ್ಮನ್ತಂ ಕರೋಮಿ॥

**ರಕ್ಷಾಧಾರಣ ಮಂತ್ರ:** ಬೃಹತ್ಸಾಮ ಕ್ಷತ್ರಭೃದ್ವೃದ್ಧ ವೃಷ್ಣಿಯಂ ತ್ರಿಷ್ಟುಭೌಜ
ಶ್ಶುಭಿತಮುಗ್ರವೀರಮ್। ಇಂದ್ರಸ್ತೋಮೇನ ಪಂಚದಶೇನ
ಮಧ್ಯಮಿದಂ ವಾತೇನ ಸಗರೇಣ ರಕ್ಷ॥

— ರಕ್ಷಾಧಾರಣ ಮೂಹೂರ್ತ ಸ್ಸುಮುಹೂರ್ತೋಽಸ್ತು॥

3. **ನವತಂತುಧಾರಣೆ:** ಯಜಮಾನನು ಆಚಮನ ಮಾಡಿ 'ಮಮ ಕುಮಾರಸ್ಯ ಆಚಮನ ಯೋಗ್ಯತಾಸಿದ್ಧ್ಯರ್ಥಂ ನವತಂತುಧಾರಣಕರ್ಮ ಕರಿಷ್ಯೇ' ಎಂದು ಸಂಕಲ್ಪಮಾಡಿ ಒಂದು ತಟ್ಟೆಯಲ್ಲಿ ಎರಡು ವಿಳ್ಳೆದೆಲೆ ಅಡಿಕೆ ಇಟ್ಟು ಅದರ ಮೇಲೆ ಒಂದು ಹಸೀದಾರದಿಂದ ಮಾಡಿದ ಯಜ್ಞೋಪವೀತವನ್ನು ಇಟ್ಟು ಷೋಡಶೋಪ ಚಾರ ಪೂಜೆಮಾಡಬೇಕು. ನಂತರ ಅದನ್ನು ಜನಿವಾರದಂತೆ ಬಿಚ್ಚಿಹಿಡಿದುಕೊಂಡು,

ನವೋ ನವೋ ಭವತಿ ಜಾಯಮಾನೋಽಹ್ನಾಂ ಕೇತುರುಷ
ಸಾಮೇತ್ಯಗ್ರೇ। ಭಾಗಂ ದೇವೇಭ್ಯೋ ವಿದಧಾತ್ಯಾಯನ್ಪ್ರ
ಚಂದ್ರಮಾಸ್ತಿರತಿ ದೀರ್ಘಮಾಯುಃ॥ ಎಂಬ ಮಂತ್ರವನ್ನು ಹೇಳುತ್ತ

ಕುಮಾರನಿಗೆ ಬಲಕೈ ಮೂಲಕ ಶಿರಸ್ಸು ದಾಟಿ ಎಡಭುಜಕ್ಕೆ ಬರುವಂತೆ ಧಾರಣೆ ಮಾಡಿಸಿ ಆಚಮನ ಮಾಡಿಸಬೇಕು. ಕೆಲವರು ತಮ್ಮ ಶಿಷ್ಟಾಚಾರದಂತೆ ಬೆಳ್ಳಿ ಅಥವಾ ಬಂಗಾರದಿಂದ ಮಾಡಿದ ನವತಂತುವನ್ನೂ ಧಾರಣೆ ಮಾಡಿಸುತ್ತಾರೆ. ಈ ನವತಂತುವನ್ನು ಮುಂದೆ ಅಶ್ವತ್ಥಕಟ್ಟೆಯಲ್ಲಿ ವಿಸರ್ಜನೆ ಮಾಡುತ್ತಾರೆ.

4. **ದ್ವಿಜತ್ವ ಪ್ರಾಪ್ತಿಗಾಗಿ ಯಜ್ಞೋಪವೀತ ಧಾರಣೆ:** ಮೇಲಿನಂತೆಯೇ ಸಂಕಲ್ಪದಲ್ಲಿ 'ಮಮ ಕುಮಾರಸ್ಯ ದ್ವಿಜತ್ವ ಯೋಗ್ಯತಾ ಸಿದ್ಧ್ಯರ್ಥಂ ಯಜ್ಞೋಪವೀತ ದಾನಪೂರ್ವಕ ಧಾರಣಕರ್ಮ ಕರಿಷ್ಯೇ' ಎಂದು ಹೇಳುತ್ತ ಕೆಲವು ಯಜ್ಞೋಪವೀತ ಗಳನ್ನು ತಟ್ಟೆಯಲ್ಲಿಟ್ಟು ಪೂಜೆಮಾಡಿ, ಹತ್ತುಜನ ಬ್ರಾಹ್ಮಣರಿಗೆ ಜನಿವಾರ, ಗೋಪಿಚಂದನವನ್ನೂ ದಕ್ಷಿಣೆ ಸಮೇತ ದಾನಮಾಡಿ ಅವರಿಂದ 'ಯಜ್ಞೋಪವೀತ ಧಾರಣಯೋಗ್ಯತಾಸಿದ್ಧಿರಸ್ತು' ಎಂದು ಆಶೀರ್ವಾದ ಪಡೆಯಬೇಕು. ನಂತರ

ಮುಂದಿನ ಮಂತ್ರಪೂರ್ವಕ ಕುಮಾರನಿಗೆ ಯಜ್ಞೋಪವೀತಧಾರಣೆ ಮಾಡಿಸಿ ಆಚಮನ ಮಾಡಿಸಬೇಕು.

**ಮಂತ್ರ:** ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇ
ರ್ಯತ್ಸಹಜಂ ಪುರಸ್ತಾತ್। ಆಯುಷ್ಯಮಗ್ರಿಯಂ ಪ್ರತಿ
ಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ॥

(ಮಂತ್ರಾರ್ಥ: ಈ ಯಜ್ಞಸಾಧನವಾದ ಉಪವೀತವು ಪರಮ ಶ್ರೇಷ್ಠವಾದದ್ದು. ಹಿಂದೆ ಇದು ಬ್ರಹ್ಮನೊಂದಿಗೇ ಜನ್ಮತಾಳಿತು. ಇದು ಆಯುಸ್ಸನ್ನು ವೃದ್ಧಿಮಾಡುವುದೂ, ಅಡ್ಡಿಗಳನ್ನು ನಿವಾರಣೆ ಮಾಡುವುದಾಗಿಯೂ ಇರುವುದು. ಇದನ್ನು ಶುದ್ಧವಾಗಿ ಧಾರಣೆಮಾಡುವುದರಿಂದ ಶರೀರಕ್ಕೆ ಬಲ ಮತ್ತು ತೇಜಸ್ಸು ಉಂಟಾಗಲಿ ಎಂದು ಆಶಂಸನವಿದೆ.)

ಕೃಷ್ಣಾಜಿನವನ್ನಾಗಲೀ ವಸ್ತ್ರವನ್ನಾಗಲೀ ಎಡಭುಜದ ಮೇಲೆ ಬಲಭುಜದ ಕೆಳಗೆ ಇರುವಂತೆ ಪ್ರದಕ್ಷಿಣೆಯಾಗಿ ಸುತ್ತಿಕೊಳ್ಳವುದೇ 'ಯಜ್ಞೋಪವೀತ'ವು. 'ಅಜಿನಂ ವಾಸೋ ವಾ ದಕ್ಷಿಣತ ಉಪವೀಯ ದಕ್ಷಿಣಂ ಬಾಹುಮುದ್ಧರತೇಽವಧತ್ತೇ ಸವ್ಯಮಿತಿ ಯಯ್ಞೋಪವೀತಂ' (ತೈ. ಆ. ೨ - ೧) ಎಂದು ಶ್ರುತಿವಾಕ್ಯವಿದೆ.

ಎಲ್ಲ ಕಾಲದಲ್ಲೂ ಹೀಗೆ ಅಜಿನ ವಸ್ತ್ರಾದಿಗಳನ್ನು ಧರಿಸಿರಲು ಸಾಧ್ಯವಾಗಲಾರದ್ದರಿಂದ ಆಪಸ್ತಂಬರು ಧರ್ಮಸೂತ್ರದಲ್ಲಿ 'ಅಪಿ ವಾ ಸೂತ್ರಮೇವ ಉಪವೀತಾರ್ಥೇ' ಎಂದರೆ ನೂಲನ್ನೇ (ದಾರವನ್ನೇ) ಅಜಿನ ವಸ್ತುಗಳ ಬದಲಾಗಿ ಧರಿಸಬಹುದು ಎಂದಿದ್ದಾರೆ. ಇದೇ ಯಜ್ಞೋಪವೀತವು. ಇದನ್ನು ಸ್ವತಃ ಹತ್ತಿಯಿಂದ ನೂಲು ತೆಗೆದು ಅದನ್ನು ಒಂಬತ್ತು ಮಡಿಕೆಯಾಗಿ ಹೊಸೆದು ಮೂರು ಎಳೆಯಾಗಿ ಮಾಡಿ ಪವಿತ್ರ ಗ್ರಂಥಿಯನ್ನೂ ತಮ್ಮ ತಮ್ಮ ಆರ್ಷೇಯ ಸಂಖ್ಯೆಗೆ ಅನುಗುಣವಾದ ಗ್ರಂಥಿಯನ್ನೂ ಹಾಕಿ ಮಂತ್ರಪೂರ್ವಕವಾಗಿ ಧರಿಸಬೇಕು.

5. **ಮಾತ್ರಾಸಹಭೋಜನ:** ಈ ಕಲಾಪದಲ್ಲಿ ಹೆಚ್ಚಿನ ಮಂತ್ರಗಳಿಲ್ಲ. ಕುಮಾರನು ಪರಿಷೇಚನ ಆಪೋಶನ ಮತ್ತು ಪ್ರಾಣಾಹುತಿ ತೆಗೆದುಕೊಳ್ಳುವಾಗ ಆಚಾರ್ಯನೇ ತತ್ತತ್ಕರ್ಮ ಮಂತ್ರಗಳನ್ನು ಹೇಳಬೇಕು. ಊಟವಾದಮೇಲೆ ಕುಮಾರನು ಕೈಕಾಲು ತೊಳೆದು ದ್ವಿರಾಚಮನ ಮಾಡುವುದು.

**6. ದಿಗ್ವಪನ:** ಈ ಕಾರ್ಯಕ್ಕೆ ಕೆಳಗೆ ಹೇಳಿರುವ ಪದಾರ್ಥಗಳನ್ನು ಹೊಂದಿಸಿಟ್ಟು ಕೊಳ್ಳಬೇಕು

(i) ತಣ್ಣೀರು ಮತ್ತು ಬಿಸಿನೀರು ಬೇರೆಬೇರೆ ಬಟ್ಟಲುಗಳಲ್ಲಿ.

(ii) ಎತ್ತಿನ (ಹಸುವಿನ) ಸಗಣಿಯ ಉಂಡೆಯನ್ನು ಒಂದು ಚಿಕ್ಕಎಲೆಯಲ್ಲಿ ಸ್ವಲ್ಪ ಜವೆಗೋಧಿ ಅಥವಾ ಅಕ್ಷತೆಕಾಳು ಜೊತೆ ಇಟ್ಟುಕೊಳ್ಳುವುದು.

(iii) ಬೇರುಸಹಿತವಾದ ಮೂರು ದರ್ಭೆಯ ಗುತ್ತಿಗಳು, ಮೂರು ಹಂದಿಯ ಮುಳ್ಳುಗಳು ಮತ್ತು ಅತ್ತಿಮರದ ಸಣ್ಣಕೊನೆ.

**ಪ್ರಯೋಗ:** ಕುಮಾರನ ಎಡಭಾಗಕ್ಕೆ ಕುಳಿತಿರುವ ಆಚಾರ್ಯನು (ತಂದೆಯು) ಮೊದಲು ಬಿಸಿನೀರನ್ನು ತಣ್ಣೀರಿನಲ್ಲಿ 'ಉಷ್ಣೇನವಾಯ ಉದಕೇನೇಹ್ಯದಿತಿಃ ಕೇಶಾನ್ ವಪತು' ಎಂಬ ಮಂತ್ರದಿಂದ ಬೆರೆಸಬೇಕು.

(ಮಂತ್ರಾರ್ಥ: ವಾಯುದೇವತೆಯು ಅದಿತಿಯ ಅನುಗ್ರಹದಿಂದ ಈ ವಟುವಿನ ವಪನ ಕಾರ್ಯದಲ್ಲಿ ಬಿಸಿನೀರಿನ ರೂಪದಿಂದ ಬಂದು ಅನುಗ್ರಹಿಸಲಿ ಎಂದು ಪ್ರಾರ್ಥಿಸುವು ದಾಗಿದೆ.)

ಹಾಗೆ ಬೆರೆತ ನೀರಿನಿಂದ ಕುಮಾರನ ತಲೆಯನ್ನು ಬೇರುಸಹಿತವಾದ ಮೂರು ದರ್ಭೆ ಗುತ್ತಿಗಳು, ಮುಳ್ಳುಹಂದಿ ಮುಳ್ಳುಗಳು ಮತ್ತು ಅತ್ತಿಕೊನೆ ಸೇರಿಸಿ ಕೆಳಗಿನ ಮಂತ್ರದಿಂದ ಪೂರ್ವದ ಕಡೆಯಿಂದ ನೆನೆಸಬೇಕು.

**ಮಂತ್ರ:** ಆಪ ಉಂದಂತು ಜೀವಸೇ ದೀರ್ಘಾಯುತ್ವಾಯ
ವರ್ಚಸೇ। ಜ್ಯೋಕ್ಷ ಸೂರ್ಯಂ ದೃಶೇ॥

(ಮಂತ್ರಾರ್ಥ: ಈ ವಟುವು ದೀರ್ಘಕಾಲ ಬದುಕಿ, ಒಳ್ಳೆ ದೃಷ್ಟಿಪಾಟವ ಉಳ್ಳವನಾಗಿಯೂ ವರ್ಚಸ್ವಿಯೂ ಆಗಿರುವಂತೆ ಅಬ್ದೇವತೆಯು ಶಿರಸ್ಸನ್ನು ನೆನೆಸಲಿ ಎಂದರ್ಥ. ಎಂದರೆ ಶಿರಸ್ಸನ್ನು ಸ್ನಾನಾದಿಕಾಲಗಳಲ್ಲಿ ನೆನಸುವುದರ ಉದ್ದೇಶ ಶುದ್ಧಿಯ ಜೊತೆಗೆ ದೃಷ್ಟಿಸಾಮರ್ಥ್ಯ ಮತ್ತು ವರ್ಚೋಽಭಿವೃದ್ಧಿ ಉಂಟಾಗಲೆಂದೇ ಆಗಿದೆ.)

ಶಿರಸ್ಸನ್ನು ನೀರಿನಿಂದ ನೆನೆಸಿದ ಮೇಲೆ ಪೂರ್ವದಿಂದ ಪ್ರಾರಂಭಿಸಿ ಮೂರು ಮೂರು ದರ್ಭೆಸಮೇತ ಕುಮಾರನ ಶಿರಸ್ಸಿನಲ್ಲಿ ಕೂದಲನ್ನು ಕತ್ತಿಯಿಂದ (ಕ್ಷುರ) ಆಚಾರ್ಯನು (ತಂದೆಯು) ಕತ್ತರಿಸಬೇಕು.

**(ಅ) ಪೂರ್ವದಿಗ್ವಪನ ಮಂತ್ರ:** ಯೇನಾವಪತ್ಸವಿತಾ ಕ್ಷುರೇಣ ಸೋಮಸ್ಯ ರಾಜ್ಞೋ ವರುಣಸ್ಯ ವಿದ್ವಾನ್। ತೇನ ಬ್ರಹ್ಮಾಣೋ ವಪತೇದಮಸ್ಯಾಯುಷ್ಮಾನ್ ಜರದಷ್ಟಿರ್ಯಥಾ ಸದಯಮ್॥ (ನಾರಾಯಣ) ಶರ್ಮಾ॥

ಆಗ ಕುಮಾರನ ಬಲಭಾಗದಲ್ಲಿ ತಾಯಿಯಾಗಲೀ ಅಥವಾ ಬ್ರಹ್ಮಚಾರಿಯಾಗಲೀ ಕುಮಾರನನ್ನು ನೋಡುತ್ತ ಮುಂದಿನ ಅಭಿಮಂತ್ರಣ ಮಂತ್ರವನ್ನು ಹೇಳಬೇಕು.

**ಅಭಿಮಂತ್ರಣ ಮಂತ್ರ:** ಯತ್ಕ್ಷುರೇಣಮರ್ಚಯತಾ ಸುಪೇಶಸಾ ವಪ್ತ್ರಾವಪಸಿ ಕೇಶಾನ್। ಶುಂಧಿ ಶಿರೋ ಮಾಸ್ಯಾಯುಃ ಪ್ರಮೋಷೀಃ॥

ಈ ಮಂತ್ರವನ್ನು ಹೇಳಿದಮೇಲೆ ಪೂರ್ವದಿಕ್ಕಿನಲ್ಲಿ ಕತ್ತರಿಸಿದ ಕೂದಲನ್ನು ತಾಯಿಯು ಗೋಧಿ / ಅಕ್ಷತೆಯೊಂದಿಗೆ ಇರುವ ಸಗಣಿ ಉಂಡೆಯ ಮೇಲೆ ಇಟ್ಟು ಕೈತೊಳೆದುಕೊಳ್ಳಬೇಕು. (ಕತ್ತರಿಸಿದ ಕೂದಲನ್ನು ಕುಮಾರನ ಮೂಲಕ ತಾಯಿಗೆ ಕೊಡಿಸಬೇಕೆಂದೂ ಆಶ್ವಲಾಯನ ಪ್ರಯೋಗವಿದೆ.) ಇದೇ ರೀತಿ ತಾಯಿಯು ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಗ್ವಪನದ ಕೂದಲನ್ನು ಸಗಣಿ ಉಂಡೆಯ ಮೇಲೆ ಇಟ್ಟು ಕೈತೊಳೆದುಕೊಳ್ಳಬೇಕು.

**(ಆ) ದಕ್ಷಿಣ ದಿಗ್ವಪನ:** ಹಿಂದಿನಂತೆಯೇ ಮೂರು ದರ್ಭೆ ಸಮೇತ ದಕ್ಷಿಣ ದಿಕ್ಕಿನ ಶಿರೋಭಾಗದಲ್ಲಿ ಕೂದಲನ್ನು ಕತ್ತರಿಸಬೇಕು ಮತ್ತು ಸಗಣಿ ಉಂಡೆಯಲ್ಲಿಡಬೇಕು.

**ಮಂತ್ರ:** ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ ಚಾಯುಷೇ ವಪತ್।
ತೇನಾಸ್ಯಾಯುಷೇ ವಪಸೌಶ್ಲೋಕ್ಯಾಯ ಸ್ವಸ್ತಯೇ॥

**(ಇ) ಪಶ್ಚಿಮ ದಿಗ್ವಪನ:** (ಪ್ರಯೋಗ ಹಿಂದಿನಂತೆ)

**ಮಂತ್ರ:** ಯೇನ ಭೂಯಶ್ಚರಾತ್ರ್ಯಯಂ ಜ್ಯೋಕ್ಚ ಪಶ್ಯಾತಿ ಸೂರ್ಯಮ್।
ತೇನಾಸ್ಯಾಯುಷೇ ವಪ ಸೌಶ್ಲೋಕ್ಯಾಯ ಸ್ವಸ್ತಯೇ॥

**(ಈ) ಉತ್ತರ ದಿಗ್ವಪನ:** (ಪ್ರಯೋಗ ಹಿಂದಿನಂತೆ)

**ಮಂತ್ರ:** ಯೇನ ಪೂಷಾ ಬೃಹಸ್ಪತೇರಗ್ನೇರಿಂದ್ರಸ್ಯ

ಚಾಯುಷೇ ವಪತ್। ತೇನ ತೇ ವಪಾಮಿ (ನಾರಾಯಣ)

ಶರ್ಮಣ್ನಾಯುಷಾ ವರ್ಚಸಾ ಯಥಾಜ್ಯೋಕ್ಸುಮನಾ ಅಸಾಃ॥

ದಕ್ಷಿಣ, ಪಶ್ಚಿಮ, ಉತ್ತರ ದಿಗ್ವಪನ ಕಾಲದಲ್ಲಿ ಪೂರ್ವ ದಿಗ್ವಪನದಲ್ಲಿನಂತೆ ತಾಯಿ ಅಥವಾ ಬ್ರಹ್ಮಚಾರಿಯಿಂದ ಕುಮಾರನಿಗೆ ಅಭಿಮಂತ್ರಣವಿರುವುದಿಲ್ಲ. ಕತ್ತರಿಸಿದ ಕೂದಲಿಟ್ಟಿರುವ ಸಗಣಿ ಉಂಡೆಯನ್ನು ತಾಯಿ ಅಥವಾ ಬೇರೆ ಬ್ರಹ್ಮಚಾರಿಯು ಔದುಂಬರ (ಅತ್ತಿಯ) ಗಿಡದ ಬುಡಕ್ಕೆ ಅಥವಾ ಬೆಳೆದ ದರ್ಭೆಗಳ ಗುಂಪಿನ ಬುಡದಲ್ಲಾಗಲೀ ಹಾಕಬೇಕು. ಇದಕ್ಕೆ 'ಕೇಶ ಉಪಗೂಹನ'ವೆಂದು ಹೆಸರು.

**ಕೇಶ ಉಪಗೂಹನ ಮಂತ್ರ:** ಉಪ್ತ್ವಾಯ ಕೇಶಾನ್ ವರುಣಸ್ಯ ರಾಜ್ಞೋ ಬೃಹಸ್ಪತಿಃ ಸವಿತಾ ಸೋಮೋ ಅಗ್ನಿಃ। ತೇಭ್ಯೋ ನಿಧಾನಂ ಬಹುಧಾನ್ವವಿಂದನ್ನಂತರಾ ದ್ಯಾವಾಪೃಥಿವೀ ಅಪಸ್ಸುವಃ॥

ದಿಗ್ವಪನ ಕಾಲದಲ್ಲಿ ಕತ್ತರಿಸಿದ ಕೇಶವನ್ನು ಸಗಣಿಯ ಉಂಡೆಯಲ್ಲಿ ಇಟ್ಟಮೇಲೆ ತಾಯಿಯು ಪ್ರತಿಸಲವೂ ಕೈತೊಳೆದುಕೊಳ್ಳಬೇಕು. ಆದರೆ ಆಚಾರ್ಯನು (ತಂದೆಯು) ದಿಗ್ವಪನದ ಕೊನೆಯಲ್ಲಿ ಮಾತ್ರ ಒಂದು ಸಾರಿ ಕೈತೊಳೆದುಕೊಳ್ಳಬೇಕು.

ದಿಗ್ವಪನ ಕಾಲದಲ್ಲಿ ಕೂದಲಿನ ಜೊತೆ ಹಿಡಿದುಕೊಳ್ಳುವ ಮೂರು ದರ್ಭೆಗಳು ಉತ್ತರ ಅಥವಾ ಪೂರ್ವಾಗ್ರಗಳಾಗಿರಬೇಕು. ಕೆಲವರು ಊರ್ಧ್ವಾಗ್ರವಾಗಿಯೂ ಹಿಡಿದುಕೊಳ್ಳುತ್ತಾರೆ.

**ದಿಗ್ವಪನ ಮಂತ್ರಾರ್ಥ:**

**(i) ಪೂರ್ವ ದಿಗ್ವಪನ:** ಇಲ್ಲಿ ಆಚಾರ್ಯನು ಕುಮಾರನಿಗೆ ವಪನಮಾಡಲು ಪುಣ್ಯಾಹವಾಚನ ಮಾಡಿದ ಬ್ರಾಹ್ಮಣರ ಅನುಜ್ಞೆ ಕೇಳುತ್ತಾನೆ. ಕರ್ಮಕುಶಲನಾದ ಸವಿತೃವು ಯಾವ ಕ್ಷುರ(ಕತ್ತಿ)ದಿಂದ ಸೋಮ ಮತ್ತು ವರುಣನ ವಪನ ಮಾಡಿದನೋ ಅದಕ್ಕೆ

ಸಮಾನವಾದ ಕ್ಷುರದಿಂದ ಈ ಮಾಣವಕನಿಗೆ ವಪನ ಮಾಡಿದರೆ ಅವನು ಚಿರಂಜೀವಿಯೂ ಮತ್ತು ಒಳ್ಳೆಪಚನ ಶಕ್ತಿಯುಳ್ಳವನೂ ಆಗುತ್ತಾನೆ ಎಂದು ತಾತ್ಪರ್ಯ.

(ii) **ಅಭಿಮಂತ್ರಣ ಮಂತ್ರ**ದಲ್ಲಿ ತಾಯಿ ಅಥವಾ ಬ್ರಹ್ಮಚಾರಿಯು ಆಚಾರ್ಯನಿಗೆ ಹೇಳುವ ಮಾತು:- 'ಯಾವ ಹರಿತವಾದ ಕತ್ತಿಯಿಂದ ಕುಮಾರನ ಕೂದಲನ್ನು ಕತ್ತರಿಸುತ್ತೀಯೋ ಅದರಿಂದ ಅವನ ಶಿರಸ್ಸಿನಲ್ಲಿ ಕೂದಲಿಲ್ಲದಂತೆ ಸ್ವಚ್ಛಮಾಡು, ಅವನ ಆಯುಸ್ಸನ್ನು ಕಳೆಯಬೇಡ.' [ಈ ಕಾರಣದಿಂದ ಶಾಸ್ತ್ರೋಕ್ತ ಕ್ಷೌರಕ್ಕೆ 'ಆಯುಷ್ಕರ್ಮ'ವೆಂದು ಹೇಳುತ್ತಾರೆ.]

(iii) **ದಕ್ಷಿಣ ದಿಗ್ವಪನ:** 'ಹಿಂದೆ ಪೂಷನಾಮಕ ದೇವತೆಯು ಬೃಹಸ್ಪತಿ, ಅಗ್ನಿ ಮತ್ತು ಇಂದ್ರ ಇವರ ಆಯುಸ್ಸು ವೃದ್ಧಿಯಾಗುವಂತೆ ವಪನಕಾರ್ಯವನ್ನು ಮಾಡಿದನೋ ಅಂತಹ ಕತ್ತಿಯಿಂದ ನನ್ನ ಶರೀರದ ಅಂತರಾತ್ಮನೇ ನೀನೂ ವಟುವಿಗೆ ವಪನ ಮಾಡು. ಇದರಿಂದ ಅವನು ಕೀರ್ತಿವಂತನೂ ಅವಿನಾಶಿಯೂ ಆಗುತ್ತಾನೆ' ಎಂದು ತಾತ್ಪರ್ಯ.

(iv) **ಪಶ್ಚಿಮ ದಿಗ್ವಪನ:** 'ನನ್ನ ಶರೀರದಲ್ಲಿನ ಅಂತರಾತ್ಮನೇ, ಈ ವಟುವಿಗೆ ಪುನಃ ವಪನ ಮಾಡುವುದರಿಂದ ಅವನು ಬಹುಕಾಲ ಪರಿವ್ರಜನೂ, ಸೂರ್ಯದೇವನ ದರ್ಶನಮಾಡುವವನೂ, ನಾಶವಿಲ್ಲದವನೂ ಆಗುವಂತಾಗಲಿ' ಎಂದು ತಾತ್ಪರ್ಯ.

(v) **ಉತ್ತರ ದಿಗ್ವಪನ:** ದಕ್ಷಿಣ ದಿಗ್ವಪನದ ಮಂತ್ರ ಭಾಗವೇ ಇಲ್ಲಿಯೂ ಇದೆ. ಈ ದಿಗ್ವಪನದಿಂದ ಕುಮಾರನು ಆಯುಷ್ಮಂತನೂ, ವರ್ಚಸ್ವಿಯೂ, ಸದಾ ಸಂತೋಷಯುಕ್ತವಾದ ಮನಸ್ಸುಳ್ಳವನೂ ಆಗಲೆಂದು ಹಾರೈಸಿದೆ.

ದಿಗ್ವಪನ ಕಾರ್ಯದ ನಂತರ ಕ್ಷೌರಿಕನಿಂದ ಕುಮಾರನಿಗೆ ವಪನ ಮಾಡಿಸಿ ಕುಲಾಚಾರದಂತೆ ಆರತಿ ಮಾಡಿ ಸ್ನಾನ ಮಾಡಿಸಿ ವಸ್ತ್ರ ಉಡಿಸಿ ಹಸೆಮಣೆಗೆ ಕರೆದುಕೊಂಡು ಬರುವುದು. ವಟುವಿಗೆ ಶಿಖೆಯನ್ನು ಬಿಡಿಸುವುದಿದ್ದರೆ ಅವರವರ ಗೋತ್ರ ಋಷಿಗಳ ಸಂಖ್ಯೆಗೆ ಅನುಸಾರವಾಗಿ (ಏಕರ್ಷಿ, ದ್ವ್ಯಾರ್ಷೇಯ, ತ್ರ್ಯಾರ್ಷೇಯ ಮುಂತಾಗಿ) ಶಿಖೆ ಬಿಡಿಸಬೇಕು. ಇವೆಲ್ಲ ಈಗಿನ ಕಾಲಕ್ಕೆ ಎಷ್ಟುಮಟ್ಟಿಗೆ ಸಾಧ್ಯವೋ ತಿಳಿಯದು. ವಟುವು ಗೋಪಾದ ಮಾತ್ರದ ಶಿಖೆಯನ್ನು ಉಳಿಸಿಕೊಂಡರೆ ಸಾಕು ಎನ್ನಬಹುದು.

7. **ಅಗ್ನಿಪ್ರತಿಷ್ಠೆ:** ಈ ಗ್ರಂಥದ ಭಾಗ -1ರ II-18ನೇ ಪ್ಯಾರಾದಲ್ಲಿ ಅಗ್ನಿಪ್ರತಿಷ್ಠಾಪನೆ ಮತ್ತು ಆಜ್ಯಭಾಗಾಂತದವರೆಗೆ ಅಗ್ನಿಮುಖವನ್ನು ಮಾಡಿಕೊಳ್ಳಬೇಕೆಂದು ತಿಳಿಸಿದೆ. ತತ್ಸಂಬಂಧವಾದ ಪ್ರಯೋಗ ಮಂತ್ರಾದಿಗಳನ್ನು ಇಲ್ಲಿ ಕೊಟ್ಟಿಲ್ಲ.

8. **ಪಾಲಾಶಸಮಿದಾಧಾನ:** ಗೋಪಿಚಂದನಾದಿಗಳಿಂದ ಅಲಂಕೃತನಾದ ವಟುವಿನ ಬಲಗೈಯಲ್ಲಿ ತುಪ್ಪದಲ್ಲಿ ನೆನೆಸಿದ ಮುತ್ತುಗದ ಕಡ್ಡಿ(ಸಮಿತ್ತು)ಯನ್ನು

ಕೊಟ್ಟು ಅವನ ಕೈಯನ್ನು ಆಚಾರ್ಯನು ಹಿಡಿದುಕೊಂಡು ಕೆಳಗಿನ ಮಂತ್ರವನ್ನು ಉಚ್ಚರಿಸಿ ಕೊನೆಯಲ್ಲಿ ಸಮಿತ್ತನ್ನು ಅಗ್ನಿಗೆ ಹಾಕಿಸಬೇಕು.

**ಮಂತ್ರ:** ಆಯುರ್ದಾ ದೇವ ಜರಸಂ ಗೃಣಾನೊ ಘೃತ ಪ್ರತೀಕೋ ಘೃತಪೃಷ್ಠೋ ಅಗ್ನೇ। ಘೃತಂ ಪಿಬನ್ನಮೃತಂ ಚಾರು ಗವ್ಯಂ ಪಿತೇವ ಪುತ್ರಂ ಜರಸೇ ನಯೇಮಮ್

।। ಆಧೇಹಿ ।।

(ತಾತ್ಪರ್ಯ: "ಹೊಳೆಯುತ್ತಿರುವ ಕಾಯವುಳ್ಳವನೂ ಹಿಂಭಾಗದಲ್ಲಿ ತುಪ್ಪದಿಂದ ಕೂಡಿರುವವನೂ ಆದ ಅಗ್ನಿಯೇ, ನನ್ನ ಮಂತ್ರರೂಪವಾದ ಸ್ತುತಿಯನ್ನು ಸ್ವೀಕರಿಸಿ ಆಯುಸ್ಸನ್ನು ನೀಡು. ನಾನು ಅರ್ಪಿಸುವ ಅಮೃತಸಮಾನವಾದ ಹಸುವಿನ ತುಪ್ಪವನ್ನು ತೆಗೆದುಕೊಂಡು ಈ ಸಮಿತ್ತಿನ ಆಹುತಿಯಿಂದ ತೃಪ್ತನಾಗಿ ತಂದೆಯು ಮಗನನ್ನು ಕಾಪಾಡುವಂತೆ ನನ್ನನ್ನು ಆಯುಷ್ಯಾದಿಗಳ ಮೂಲಕ ಕಾಪಾಡು" ಎಂದು ಕೇಳಿದೆ.)

9. **ಅಶ್ಮಾರೋಹಣ:** (ಭಾಗ-1ರ II-20ನೇ ಪ್ಯಾರಾ). ಈ ಮಂತ್ರ ಹೇಳುತ್ತ ಅಗ್ನಿಗೆ ಉತ್ತರ ದಿಕ್ಕಿನಲ್ಲಿಟ್ಟಿರುವ ಕಲ್ಲಿನ ಮೇಲೆ ವಟುವನ್ನು ಬಲಗಾಲು ಮುಂದಾಗಿ ನಿಲ್ಲಿಸಬೇಕು.

**ಮಂತ್ರ:** ಆತಿಷ್ಠೇಮಮಶ್ಮಾನಮಶ್ಮೇವ ತ್ವಗ್ಂ ಸ್ಥಿರೋ ಭವ।
ಅಭಿತಿಷ್ಠ ಪೃತನ್ಯತಸ್ಸಹಸ್ವ ಪೃತನಾಯತಃ।।

(ತಾತ್ಪರ್ಯ: ಎಲೈ ಕುಮಾರನೇ, ಕಲ್ಲಿನ ಮೇಲೆ ನಿಂತಿರುವ ನೀನು ಅದರಂತೇ ಸ್ಥಿರವಾಗಿರು. ಯುದ್ಧಮಾಡಲು ಬಯಸುವವರನ್ನು ಓಡಿಸು ಮತ್ತು ಅವರನ್ನು ತಡೆಯುವವನೂ ಆಗು ಎಂದರ್ಥ.)

10. **ವಸ್ತ್ರಾಜಿನಾದಿಗಳ ಧಾರಣೆ:** ಅಗ್ನಿಪ್ರತಿಷ್ಠಾ ಕಾಲದಲ್ಲಿ ಮಾನುಷ ಪಾತ್ರೆಗಳೆಂದು ಇಟ್ಟು ಸಂಸ್ಕರಿಸಿದ ವಸ್ತ್ರಾದಿಗಳನ್ನು ಕುಮಾರನಿಗೆ ಈಗ (ಕಲ್ಲಿನ ಮೇಲೆ ನಿಂತಿರುವಾಗಲೇ) ಧಾರಣೆ ಮಾಡಿಸಬೇಕು.

(i) **ವಸ್ತ್ರ:** ಈ ಮುಂದಿನ ಮಂತ್ರದಿಂದ ವಸ್ತ್ರವನ್ನು ಮೊದಲು ಅಭಿಮಂತ್ರಿಸುವುದು.

**ಮಂತ್ರ:** ರೇವತೀ ಸ್ತ್ವಾವ್ಯಕ್ಷ್ಣನ್ ಕೃತ್ತಿಕಾಶ್ಚಾಕೃನ್ತಗ್ಂಸ್ತ್ವಾ।
ಧಿಯೋಽವಯನ್ನವಗ್ನಾ ಅವೃಂಜನ್ತ್ಸಹಸ್ರಮಂತಾಗ್ಂ
ಅಭಿತೋ ಅಯಚ್ಛನ್॥ ದೇವೀರ್ದೇವಾಯ ಪರಿಧೀ
ಸವಿತ್ರೇ ಮಹತ್ತದಾಸಾಮಭವನ್ಮಹಿತ್ವನಮ್॥

ನಂತರ ಈ ಕೆಳಗಿನ ಮೂರು ಮಂತ್ರಗಳಿಂದ ಕುಮಾರನ ಸೊಂಟಕ್ಕೆ ವಸ್ತ್ರವನ್ನು ಪ್ರದಕ್ಷಿಣೆಯಾಗಿ ಉಡಿಸಬೇಕು.

**ಮಂತ್ರ:** 1. ಯಾ ಅಕೃಂತನ್ನವಯನ್ ಯಾ ಅತನ್ವತ ಯಾಶ್ಚ
ದೇವೀರಂತಾನಭಿತೋಽ ದದಂತ। ತಾಸ್ತ್ವಾ ದೇವೀರ್ಜರಸೇ
ಸಂವ್ಯಯಂತ್ವಾಯುಷ್ಮಾನಿದಂ ಪರಿಧತ್ಸ್ವವಾಸಃ॥

**ಮಂತ್ರ:** 2. ಪರಿಧತ್ತ ಧತ್ತವಾಸಸೈನಗ್ಂ ಶತಾಯುಷಂ
ಕೃಣುತ ದೀರ್ಘಮಾಯುಃ। ಬೃಹಸ್ಪತಿಃ ಪ್ರಾಯಚ್ಛ
ದ್ವಾಸ ಏತತ್ಸೋಮಾಯ ರಾಜ್ಞೇ ಪರಿಧಾತ ವಾ ಉ॥

**ಮಂತ್ರ** 3. ಜರಾಂ ಗಚ್ಛಾಸಿ ಪರಿಧತ್ಸ್ವ ವಾಸೋ ಭವಾ
ಕೃಷ್ಟೀನಾಮಭಿಶಸ್ತಿಪಾವಾ। ಶತಂ ಚ ಜೀವ ಶರದಸ್ಸು
ವರ್ಚಾ ರಾಯಶ್ಚ ಪೋಷಮುಪಸಂವ್ಯಯಸ್ವ॥

ವಸ್ತ್ರಧಾರಣೆ ಮಾಡಿಸಿದ ಮೇಲೆ ಆಚಮನ ಮಾಡಿಸಿ ಈ ಮುಂದಿನ ಮಂತ್ರದಿಂದ ವಟುವನ್ನು ಅಭಿಮಂತ್ರಿಸಬೇಕು.

**ಮಂತ್ರ:** ಪರೀದಂ ವಾಸೋ ಅಧಿದಾಸ್ಸ್ವಸ್ತಯೇಽಭೂರಾಪೀನಾ
ಮಭಿಶಸ್ತಿಪಾವಾ। ಶತಂ ಚ ಜೀವ ಶರದಃ ಪುರೂಚೀ
ರ್ವಸೂನಿ ಚಾರ್ಯೋ ವಿಭಜಾಸಿ ಜೀವನ್॥

**ಈ ಮಂತ್ರಗಳ ತಾತ್ಪರ್ಯ:**

(i) "ರೇವತೀಸ್ತ್ವಾ...." ಎಂದು ವಸ್ತ್ರವನ್ನು ಕುರಿತು ಹೇಳುವ (ಅಭಿಮಂತ್ರಿಸುವ) ಈ ಮಂತ್ರದಲ್ಲಿ "ಎಲೈ ವಸ್ತ್ರವೇ, ನಿನ್ನನ್ನು ತಯಾರಿಸಲು 'ರೇವತಿ' ಎಂಬ ದೇವತೆಗಳು ಮೊದಲು ಹತ್ತಿಯಲ್ಲಿದ್ದ ಬೀಜವನ್ನು ಬೇರ್ಪಡಿಸಿ ಹಿಂಜಿದರು. ನಂತರ 'ಕೃತ್ತಿಕಾ'ದಿ ದೇವತೆಗಳು ನೂತರು. ನೂತ ದಾರವನ್ನು 'ಧಿಯ' ಎಂಬ ದೇವತೆಗಳು ಸೇರಿಸಿ (ಹಾಸುಹೊಕ್ಕುಗಳ ಮೂಲಕ) ವಸ್ತ್ರವನ್ನು ಮಾಡಿದರು. ಆ ವಸ್ತ್ರವನ್ನು 'ಗ್ನಾ' ಎಂಬ ದೇವತೆಗಳು ಗೊತ್ತಾದ ಸ್ಥಳಗಳಲ್ಲಿ ಕತ್ತರಿಸಿ ಬೇರೆ ಉಕ್ತದೇವತೆಗಳು ವಸ್ತ್ರದ ಅಂಚು ಮುಂತಾದವನ್ನು ಸರಿಪಡಿಸಿ ಸಿದ್ಧಮಾಡಿದರು. ಹಿಂದೆ ಸವಿತೃದೇವನ ವಸ್ತ್ರಪರಿಧಾನ ಕಾಲದಲ್ಲಿ ಈ ದೇವತೆಗಳು ಎಂತಹ ಮಹಿಮೆಯುಳ್ಳ ವಸ್ತ್ರ ಮಾಡಿಕೊಟ್ಟರೋ ಹಾಗೆ ಈ ವಸ್ತ್ರವೂ ವಟುವಿಗೆ ಶ್ರೇಯಸ್ಕರವಾಗಲಿ ಎಂದು ಭಾವ.

(ii) 'ಯಾ ಅಕೃಂತನ್...., ಪರಿಧತ್ತಧತ್ತ.... ಮತ್ತು ಜರಾಂಗಚ್ಛಾಸಿ' — ಎಂಬ ಮೂರು ಮಂತ್ರಗಳು ವಸ್ತ್ರಧಾರಣಕಾಲದ ಮಂತ್ರಗಳು. ಹಿಂದಿನ ಮಂತ್ರದ ಅರ್ಥವನ್ನೇ ಹೇಳುತ್ತಾ ಆ ವಸ್ತ್ರನಿರ್ಮಾತೃದೇವತೆಗಳು ಕುಮಾರನು ಬಹು ದೀರ್ಘಕಾಲ ಶುಭವಸ್ತ್ರಗಳನ್ನು ಧರಿಸುವಂತೆ ಅನುಗ್ರಹಿಸಲಿ ಎಂದು ಇಲ್ಲಿ ಹರಸುವುದಾಗಿದೆ. ದೀರ್ಘಾಯಸ್ಸಿಗೆ ಕಾರಣವಾದ ಇಂತಹ ಶುಭ್ರವಸ್ತ್ರಗಳನ್ನು ಹಿಂದೆ ಬೃಹಸ್ಪತಿಯು ಸೋಮರಾಜನಿಗೆ ಕೊಟ್ಟಿದ್ದನು. ಇದನ್ನು ಧರಿಸಿ ನೀನೂ ವರ್ಚಸ್ಸಿನಿಂದ ಕೂಡಿ ಸಂಪದ್ಯುಕ್ತನಾಗಿ ಬಾಳು" ಎಂದು ಆಶಂಸನೆ ಮಾಡುವುದಾಗಿದೆ.

(iii) 'ಪರೀದಂ ವಾಸೋ....' ಎಂಬ ಮಂತ್ರದಿಂದ ವಸ್ತ್ರಧಾರಣೆ ಮಾಡಿದ ವಟುವನ್ನು "ನೀನು ಆಪ್ತರಾದ ಜ್ಞಾತಿಗಳನ್ನು ಕಾಪಾಡುತ್ತಲೂ, ವಿಧವಿಧ ಸಂಪತ್ತುಗಳಿಗೆ ಒಡೆಯನಾಗಿ ಅವನ್ನು ಬೇಡುವವರಿಗೆ ಹಂಚುತ್ತಲೂ ಶತಾಯುಷಿಯಾಗಿ ಬಾಳು" ಎಂದು ಆಶೀರ್ವದಿಸುವುದಾಗಿದೆ.

## (II) ಮೌಂಜಿಧಾರಣೆಯ ಮಂತ್ರ:

ಇಯಂ ದುರುಕ್ತಾತ್ಪರಿಬಾಧಮಾನಾ ಶರ್ಮ ವರೂಥಂ ಪುನತೀ ನ ಆಗಾತ್।
ಪ್ರಾಣಾಪಾನಾಭ್ಯಾಂ ಬಲಮಾಭರಂತೀ ಪ್ರಿಯಾ ದೇವಾನಾಗ್ಂ ಸುಭಗಾ
ಮೇಖಲೇಯಮ್॥ ಋತಸ್ಯ ಗೋಪ್ತ್ರೀ ತಪಸಃ ಪರಸ್ಪೀ ಘ್ನತೀ ರಕ್ಷಸ್ಸಹಮಾನಾ
ಅರಾತೀಃ। ಸಾ ನಸ್ಸಮಂತ ಮನು ಪರೀಹಿ ಭದ್ರಯಾ ಭರ್ತಾರಸ್ತೇ ಮೇಖಲೇ
ಮಾ ರಿಷಾಮ॥

ಈ ಮಂತ್ರವನ್ನು ಕುಮಾರನಿಂದ ಹೇಳಿಸುತ್ತ ಮೌಂಜಿಯನ್ನು ಪ್ರದಕ್ಷಿಣಾಕಾರವಾಗಿ ಅವನ ಸೊಂಟಕ್ಕೆ ಮೂರು ಸುತ್ತು ಬರುವಂತೆ ಸುತ್ತಿ ಗಂಟು ಮುಂದೆ ನಾಭೀಪ್ರದೇಶದಲ್ಲಿ ಬರುವಂತೆ ಕಟ್ಟುವುದು.

(ತಾತ್ಪರ್ಯ: ಈ ಶ್ರೇಷ್ಠವಾದ ವರ್ಚಸ್ಸಿನಿಂದ ಕೂಡಿದ ಮೌಂಜಿಯು ನನ್ನ ಸುತ್ತಲೂ ಬರುವ ಕೆಟ್ಟಮಾತುಗಳನ್ನು ತಡೆಯಲಿ. ಶ್ರೇಷ್ಠವಾದ ವಾಸಸ್ಥಾನವನ್ನೂ, ವಸ್ತುಗಳನ್ನೂ ನಮಗೆ ತಂದುಕೊಡಲಿ. ಪ್ರಾಣಾಪಾನಗಳಿಂದ ಬಲವನ್ನು ಉಂಟುಮಾಡುವ ಶಕ್ತಿಯುಳ್ಳ ಈ ಮೌಂಜಿಯು ದೇವತೆಗಳಿಗೆ ಪ್ರಿಯವಾಗಿರುಂತೆ ನನಗೂ ಪ್ರಿಯವಾಗಿರಲಿ ಎಂದು ಕುಮಾರನ ಪ್ರಾರ್ಥನೆಯಾಗಿದೆ. ಈ ಮೇಖಲೆಯೇ ಯಜ್ಞವನ್ನೂ ತಪಸ್ಸನ್ನೂ ಕಾಪಾಡುವುದು ಮತ್ತು ಶತ್ರುಗಳಾದ ರಾಕ್ಷಸರನ್ನು ಸಂಹರಿಸಬಲ್ಲದು. ಇಂತಹ ಮಂಗಲಸ್ವರೂಪದ ಮೇಖಲೆಯು ನನಗೆ ಯಾವಾಗಲೂ ರಕ್ಷೆಯಾಗಿರಲಿ ಎಂದು ಕುಮಾರನು ಪ್ರಾರ್ಥಿಸುತ್ತಾನೆ.)

## (III) ಅಜಿನಧಾರಣೆಯ ಮಂತ್ರ:

ಮಿತ್ರಸ್ಯ ಚಕ್ಷುರ್ಧರುಣಂ ಬಲೀಯಸ್ತೇಜೋಯಶಸ್ವಿ ಸ್ಥವಿರಗ್ಂ ಸಮಿದ್ಧಮ್।
ಅನಾಹನಸ್ಯಂ ವಸನಂ ಜರಿಷ್ಣು ಪರೀದಂ ವಾಜ್ಯಜಿನಂ ದಧೇಽಹಮ್॥

ಈ ಮಂತ್ರದಿಂದ ವಟುವಿಗೆ ಕೃಷ್ಣಾಜಿನದ ಚೂರನ್ನು ಧಾರಣೆ ಮಾಡಿಸಿ ಅವನಿಂದಲೂ ಈ ಮಂತ್ರವನ್ನು ಹೇಳಿಸಬೇಕು.

(ತಾತ್ಪರ್ಯ: ಕೃಷ್ಣಾಜಿನವನ್ನು ಉತ್ತರೀಯವಾಗಿ ಧರಿಸುವುದರಿಂದ ದೀರ್ಘಾಯಸ್ಸು ಉಂಟಾಗುತ್ತದೆ. ಎಂದರೆ ಅಷ್ಟು ದೀರ್ಘಕಾಲವೂ ಸೂರ್ಯನ ದರ್ಶನ ಮಾಡಬಹುದು. ಹಾಗೆ ದೀರ್ಘಕಾಲದ ಸೂರ್ಯದರ್ಶನಕ್ಕೆ ಎಡೆಮಾಡಿಕೊಡುವ ಈ ಅಜಿನವು ಸೂರ್ಯನ ಚಕ್ಷುವಾಗಿರುತ್ತದೆ. ಇದರ ಧಾರಣೆಯಿಂದ ತೇಜಸ್ಸುಂಟಾಗುತ್ತದೆ. ಸ್ವತಃ ಹೆಚ್ಚಿನ ಪ್ರಕಾಶ ವುಳ್ಳದ್ದೂ, ಮಹಿಮಾನ್ವಿತವಾದದ್ದೂ, ಧೂರ್ತರಿಗೆ ಒಪ್ಪದಿರುವುದೂ ಮತ್ತು ಮುಪ್ಪಾಗುವ ವರೆಗೂ ಅನ್ನ ನೀಡುವಂತಹ ಈ ಅಜಿನವನ್ನು ಧರಿಸುತ್ತೇನೆ ಎಂದು ಕುಮಾರನ ಅಭೀಷ್ಟ ವನ್ನು ಇಲ್ಲಿ ಹೇಳಿದೆ. ಕೃಷ್ಣಾಜಿನದ ಬಗ್ಗೆ ಹಿಂದೆ ವಟುವಿಗೆ ಯಜ್ಞೋಪವೀತಧಾರಣ ಮಾಡಿಸುವ ಸಂದರ್ಭದಲ್ಲಿ ವಿವರ ನೀಡಿರುತ್ತೇವೆ.)

**11. ಆಚಾರ್ಯಾಭಿಮುಖಿಗಮನ ಮತ್ತು ಉದಕಾಂಜಲಿ:** ಅಗ್ನಿಗೆ ಉತ್ತರದಲ್ಲಿ ಪ್ರಾಗಗ್ರವಾಗಿ ಹರಡಿರುವ ದರ್ಭೆಗಳ ಮೇಲೆ ಆಚಾರ್ಯನು ಕುಮಾರನನ್ನು ತನಗೆ ಅಭಿಮುಖವಾಗಿ ಕೂರಿಸಿಕೊಂಡು ತಾನು ಈ ಮಂತ್ರವನ್ನು ಹೇಳಿ ಕುಮಾರನಿಂದಲೂ ಹೇಳಿಸಬೇಕು.

**ಮಂತ್ರ:** ಆಗಂತ್ರಾ ಸಮಗನ್ಮಹಿ ಪ್ರಸುಮೃತ್ಯುಂ ಯುಯೋತನ।
ಅರಿಷ್ಟಾಸ್ಸಂಚರೇಮಹಿ ಸ್ವಸ್ತಿಚರತಾದಿಹ ಸ್ವಸ್ತ್ಯಾಗೃಹೇಭ್ಯಃ॥

(ತಾತ್ಪರ್ಯ: ಅಭಿಮುಖವಾಗಿ ಬರುತ್ತಿರುವ ಆಚಾರ್ಯರ ಜೊತೆ ಸೇರಿಕೊಂಡು ಮೃತ್ಯುವನ್ನು ದೂರಮಾಡುತ್ತೇವೆ, ಅವಿನಾಶಿಗಳಾಗುತ್ತೇವೆ ಹಾಗೇ ಆಚಾರ್ಯರೂ ಸುಖದಿಂದ ಸಂಚರಿಸುತ್ತಿರಲಿ. ನನಗೆ ಗೃಹಸ್ಥನಾಗುವವರೆಗೆ ಬ್ರಹ್ಮಚರ್ಯಾಶ್ರಮದಲ್ಲಿ ಶುಭವಾಗುತ್ತಿರಲಿ ಎಂಬ ಹಾರೈಕೆ ಇಲ್ಲಿದೆ.)

ನಂತರ ಆಚಾರ್ಯನು ತನ್ನ ಬೊಗಸೆಗೆ ಬೇರೆಯವರಿಂದ ನೀರನ್ನು ಹಾಕಿಸಿ ಕೊಂಡು ಅದನ್ನು ಕೆಳಗಿನ ಮಂತ್ರಪೂರ್ವಕವಾಗಿ ಕುಮಾರನ ಬೊಗಸೆಗೆ ಸುರಿದು ಆ ನೀರಿನಿಂದ ಕುಮಾರನಿಗೆ ಮೂರುಸಲ ಪ್ರೋಕ್ಷಣೆ ಮಾಡಬೇಕು. ನಂತರ ಈ ಮಂತ್ರವನ್ನು ಕುಮಾರನಿಂದಲೂ ಹೇಳಿಸಬೇಕು.

**ಮಂತ್ರ:** ಸಮುದ್ರಾದೂರ್ಮಿಮಧುಮಾಗ್‌ಂ ಉದಾರದುಪಾಗ್‌ಂಶುನಾ ಸಮಮೃತತ್ವಮಶ್ಯಾಮ್। ಇಮೇ ನು ತೇ ರಶ್ಮಯಃ ಸೂರ್ಯಸ್ಯ ಯೇಭಿಃ ಸಪಿತ್ವಂ ಪಿತರೋ ನ ಆಯನ್॥

(ತಾತ್ಪರ್ಯ: ಆಚಾರ್ಯನು ಪ್ರೋಕ್ಷಿಸಿದ ಜಲಬಿಂದುಗಳು ನನ್ನಲ್ಲಿ ಸಮುದ್ರದ ಅಲೆಗಳಿಂದ ಎದ್ದಂತೆ ಸುಖಕರವಾದವು. ಇದರಿಂದ ನಾನು ಅಮೃತತ್ವವನ್ನು ಚೆನ್ನಾಗಿ ಅನುಭವಿಸುತ್ತೇನೆ. ಈ ನೀರಿನ ಬಿಂದುಗಳಿಗೆ ಕಾರಣವಾದ ಸೂರ್ಯರಶ್ಮಿಯೂ ನಿನ್ನ ಮುಖ ಸೇರಿವೆ. ಈ ಬಿಂದುರಶ್ಮಿಗಳ ದೆಸೆಯಿಂದ ಹಿಂದೆ ಅಂಗಿರಸ ಋಷಿಗಳು ದೇವತೆಗಳ ಜೊತೆಯಲ್ಲಿ ಸೋಮಪಾನಮಾಡಿದರು. ಹೀಗೆ ಇಲ್ಲಿ ಆಚಾರ್ಯನು ಪ್ರೋಕ್ಷಣೆ ಮಾಡಿದ ಉದಕಬಿಂದುಗಳ ಮಹಿಮೆಯನ್ನು ಹೊಗಳಿದೆ.)

12. **ಹಸ್ತಗ್ರಹಣ:** ಉದಕಾಂಜಲಿಯ ನಂತರ ಆಚಾರ್ಯನು ಕೆಳಗಿನ ಹತ್ತು ಮಂತ್ರಗಳನ್ನು ಹೇಳಿ ಕೊನೆಯಲ್ಲಿ ಹೆಬ್ಬೆರಳು ಸಮೇತ ಮೇಲ್ಮುಖವಾದ ಬೆರಳುಗಳುಳ್ಳ ಕುಮಾರನ ಬಲಗೈಯನ್ನು ಒಂದುಬಾರಿ ಹಿಡಿದುಕೊಳ್ಳಬೇಕು.

**ಹತ್ತುಮಂತ್ರಗಳು:** ಅಗ್ನಿಷ್ಟೇ ಹಸ್ತಮಗ್ರಭೀತ್। ಸೋಮಸ್ತೇ ಹಸ್ತಮಗ್ರಭೀತ್। ಸವಿತಾ ತೇ ಹಸ್ತಮಗ್ರಭೀತ್। ಸರಸ್ವತೀ ತೇ ಹಸ್ತಮಗ್ರಭೀತ್। ಪೂಷಾ ತೇ ಹಸ್ತಮಗ್ರಭೀತ್। ಅರ್ಯಮಾ ತೇ ಹಸ್ತಮಗ್ರಭೀತ್। ಅಗ್ಂಶುಸ್ತೇ ಹಸ್ತಮಗ್ರಭೀತ್। ಭಗಸ್ತೇ ಹಸ್ತಮಗ್ರಭೀತ್। ಮಿತ್ರಸ್ತೇ ಹಸ್ತಮಗ್ರಭೀತ್। ಮಿತ್ರಸ್ತ್ವಮಸಿ ಧರ್ಮಣಾಗ್ನಿರಾಚಾರ್ಯಸ್ತವ॥

(ತಾತ್ಪರ್ಯ: ಅಗ್ನಿಯೂ, ಸೋಮನೂ, ಸವಿತೃವೂ, ಸರಸ್ವತಿಯೂ, ಪೂಷನೂ, ಅರ್ಯಮನೂ, ಅಂಶುಮಂತನೂ, ಭಗನೂ, ಮಿತ್ರನೂ ನಿನ್ನ ಹಸ್ತಗ್ರಹಣ ಮಾಡಲಿ. ಹಸ್ತಗ್ರಹಣ ಮಾಡುವವರೆಲ್ಲರೂ ದೇವಶ್ರೇಷ್ಠರಾದ್ದರಿಂದ ಕುಮಾರನಿಗೆ ಆಯುರ್ಯಶೋ ಜ್ಞಾನಾದಿಗಳು ಖಚಿತವಾಗಿ ದೊರೆಯುತ್ತದೆಂದು ಅಭಿಪ್ರಾಯ. ಮೇಲಿನ ಒಂಬತ್ತು ದೇವತೆಗಳಲ್ಲಿ ಅಗ್ನಿ, ಸೋಮ, ಸರಸ್ವತಿಯನ್ನು ಬಿಟ್ಟು ಮಿಕ್ಕ ಆರೂ ದ್ವಾದಶಾದಿತ್ಯರ ಗುಂಪಿನಲ್ಲಿನ ದೇವತೆಗಳು. ಬ್ರಹ್ಮಚಾರಿಗಳಿಗೆ ದ್ವಿಜತ್ವದ ನಂತರ ತಂದೆಯು ಸವಿತೃ (ಸೂರ್ಯ) ಮತ್ತು ತಾಯಿಯು ಸಾವಿತ್ರಿಯಾಗಿರುತ್ತಾರೆ. ಮಿತ್ರ(ಸೂರ್ಯ)ನು ಹೆಸರಿಗೆ ತಕ್ಕಂತೆ ಎಲ್ಲರಿಗೂ ಎಲ್ಲ ಕಾಲದಲ್ಲೂ ಸ್ನೇಹಿತನಾಗಿರುತ್ತಾನೆ. ಹಿಂದೊಮ್ಮೆ ಸೋಮರಾಜನನ್ನು ವಧೆಮಾಡುವಂತೆ ದೇವತೆಗಳು ಮಿತ್ರನನ್ನು ಕೇಳಿದಾಗ ಅವನು ಎಲ್ಲರಿಗೂ 'ಮಿತ್ರ'ನಾಗಿರುವುದರಿಂದ ಆ ಕೆಲಸವನ್ನು ಮಾಡಲಾರೆನೆಂದನು. ಅಂತಹ ಮಿತ್ರನೂ, ಅಗ್ನಿ ದೇವನೂ ಕುಮಾರನಿಗೆ ಗುರುಸ್ಥಾನದಲ್ಲಿ ಇದ್ದಾರೆ ಎಂದು ತಾತ್ಪರ್ಯ.)

**13. ದೇವತೆಗಳಿಂದ ಕುಮಾರನ ರಕ್ಷಣೆ:** ಆಚಾರ್ಯನು ಕುಮಾರನ ಬಲಗೈಯನ್ನು (ಹೆಬ್ಬೆರಳು ಸಮೇತ ಹಸ್ತ) ಹಿಡಿದು ಕೆಳಗಿನ ಹನ್ನೊಂದು ಮಂತ್ರ ಗಳಿಂದ ಆಯಾ ದೇವತೆಗಳಿಗೆ ರಕ್ಷಣಾರ್ಥವಾಗಿ ಒಪ್ಪಿಸಬೇಕು. ಒಂದೊಂದು ಮಂತ್ರ ಹೇಳಿದ ನಂತರವೂ ಬಲಹಸ್ತವನ್ನು ಹಿಡಿದು ಸ್ವಲ್ಪ ಮೇಲಕ್ಕೆ ಎತ್ತಿ ಆ ದೇವತೆಗೆ ಅರ್ಪಿಸಿದಂತೆ ಮಾಡಬೇಕು.

**ಮಂತ್ರಗಳು:**

1. ಅಗ್ನಯೇ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

2. ಸೋಮಾಯ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

3. ಸವಿತ್ರೇ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

4. ಸರಸ್ವತ್ಯೈ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

5. ಮೃತ್ಯವೇ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

6. ಯಮಾಯ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

7. ಗದಾಯ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

8. ಅಂತಕಾಯ ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

9. ಅದ್ಭ್ಯಸ್ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

10. ಓಷಧೀಭ್ಯಸ್ತ್ವಾ ಪರಿದದಾಮಿ(ನಾರಾಯಣ)ಶರ್ಮನ್ ।

11. ಪೃಥಿವ್ಯೈ ತ್ವಾ ಸವೈಶ್ವಾನರಾಯೈ ಪರಿದದಾಮಿ(ನಾರಾಯಣ)ಶರ್ಮನ್ ।

(ತಾತ್ಪರ್ಯ: ಈ ಮಂತ್ರಗಳಿಗೆ ಅರ್ಥವನ್ನು ಬರೆಯುವ ಆವಶ್ಯಕತೆ ಇರುವುದಿಲ್ಲ. ತಾವೇ ಸುಲಭವಾಗಿ ಅರ್ಥವಾಗುವಂತಿವೆ. ಇಂತಹ ದೇವಶ್ರೇಷ್ಠರುಗಳಿಗೆ ಸಮರ್ಪಿತವಾದ ಕುಮಾರನು ಮುಂದೆ ಯಾವ ರೀತಿಯ ಉಪದ್ರವಗಳೂ ಇಲ್ಲದೆ ದೀರ್ಘಾಯಷ್ಮಂತನಾಗಿ ಬಾಳುವುದರಲ್ಲಿ ಸಂಶಯವಿಲ್ಲ ಎಂದು ತಾತ್ಪರ್ಯ.)

14. **ಬ್ರಹ್ಮೋಪದೇಶ:** ಈ ಸಂಸ್ಕಾರಕ್ಕಾಗಿ ಆಚಾರ್ಯನು ಮೊದಲೇ ಗೊತ್ತುಪಡಿಸಿದ ಮುಹೂರ್ತಕ್ಕಾಗಿ ನಿರೀಕ್ಷಣೆ ಮಾಡಬೇಕು. ಆ ನಿರೀಕ್ಷಣ ಕಾಲದಲ್ಲಿ ಉಪನಯನ ಮಂಗಳಾಷ್ಟಕ, ಚೂರ್ಣಿಕಾದಿಗಳನ್ನು ಪಠಿಸುತ್ತಿರಬೇಕು. ಸುಮುಹೂರ್ತ ಪ್ರಾಪ್ತವಾದೊಡನೆಯೇ

'ದೇವಸ್ಯ ತ್ವಾ ಸವಿತುಃ ಪ್ರಸವ ಉಪನಯೇ (ನಾರಾಯಣ) ಶರ್ಮನ್'

ಎಂಬ ಮಂತ್ರವನ್ನು ಹೇಳುತ್ತ ಕುಮಾರನನ್ನು ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು ಅಂತಃಪಟದೊಳಗೆ ಕುಮಾರನ ಬಲಗಿವಿಯಲ್ಲಿ 'ಸುಪ್ರಜಾಃ....' ಮಂತ್ರವನ್ನು ಜಪಿಸಬೇಕು.

## ಉಪನಯನಮಂಗಳಾಷ್ಟಕ

ಆದೌ ಗಣೇಶಸ್ತದನು ಸ್ವಯಂಭೂಸ್ತತೋ ಗಿರೀಶಸ್ತದನ್ತರಂ ಹರಿಃ।
ಏತೇ ಸದಾ ದೇವಗಣಾ ದಿಶನ್ತು ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೧॥

ಸುಮೇರು ಸೌರತ್ನ ಗಿರೀಂದ್ರ ನೀಲ ಕೈಲಾಸ ವಿನ್ಧ್ಯಾಚಲ ಹೇಮಕೂಟಾಃ।
ಸರ್ವೇಗಿರೀನ್ದ್ರಾಸ್ಸತತಂ ದಿಶನ್ತು ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೨॥

ಗೋದಾವರೀ ಸಿಂಧುಮಲಾಪಹಾರೀ ವೇದಾವತೀ ನಾದವತೀ ಪ್ರಶಸ್ತಾಃ।
ನದ್ಯಸ್ಸಮನ್ತಾಸ್ಸತತಂ ದಿಶನ್ತು ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೩॥

ಕೃಷ್ಣಾಜಿನಂ ದರ್ಭಮಯೀ ಚ ಮೌಂಜೀ ಪಾಲಾಶದಂಡಃ ಪರಿಧಾನಶಾಠೀ।
ಯಜ್ಞೋಪವೀತಂ ಚ ದಿಶನ್ತು ನಿತ್ಯಂ ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೪॥

ತಾಮ್ಬೂಲಗನ್ಧಾಕ್ಷತಪತ್ರಪುಷ್ಪದೀಪಾಂಕುರಾಶೀರ್ವಚನಾನಿ ಯಾನಿ।
ಪುಣ್ಯಾಹವಾಕ್ಯಾನಿ ದಿಶನ್ತು ತಾನಿ ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೫॥

ಮನ್ದಾರಧಾತ್ರೀರುಹ ಪಾರಿಜಾತ ಸಂತಾನಕಲ್ಪದ್ರುಮಚಂದನಾನಿ।
ಕಲ್ಪದ್ರುಮಾಖ್ಯಾನಿ ದಿಶನ್ತು ತಾನಿ ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೬॥

ಜಮ್ಭಾರಿ ವೈಶ್ವಾನರ ಕಾಲ ಪುಣ್ಯಾಃ ಸರಿತ್ಪತಿರ್ವಾಯು ಕುಬೇರಶರ್ವಾಃ।
ಏತೇ ಸದಾ ದಿಕ್ಪತಯೋಃ ದಿಶನ್ತು ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೭॥

ಓಂಕಾರ ಸವ್ಯಾಹೃತಿ ಮಂತ್ರ ಮುದ್ರಾಸ್ಸಾವಿತ್ರಿ ಗಾಯತ್ರಿ ಸರಸ್ವತೀ ಸ್ವರಾಃ।
ಛಂದಾಂಸಿ ವೇದಾಶ್ಚ ದಿಶನ್ತು ಸರ್ವೇ ವಟೋಶ್ಚಿರಾಯುಶ್ಶುಭಕೀರ್ತಿವಿದ್ಯಾಃ॥೮॥

ವಶಿಷ್ಠ ಜಾಬಾಲಿ ಪರಾಶರಾತ್ರಿ ವಾಧೂಲ ಬೋಧಾಯನ ಜಾಮದಗ್ನ್ಯಾಃ।
ಭೃಗ್ವಂಗಿರೋ ಗೌತಮಕಾಶ್ಯಪಾಶ್ಚ ವಟೋಶ್ಚಿರಾಯುಶ್ಶುಭಕೀರ್ತಿ ವಿದ್ಯಾಃ॥೯॥

ಒಂದೊಂದು ಶ್ಲೋಕದ ನಂತರವೂ "ಸುಮುಹೂರ್ತಾಃ ಸಾವಧಾನ। ಸುಲಗ್ನಾಃ ಸಾವಧಾನ। ಶ್ರೀಲಕ್ಷ್ಮೀನಾರಾಯಣಧ್ಯಾನಾ-ಸಾವಧಾನ" ಎಂದು ಘೋಷಮಾಡ ಬೇಕು.

**ಬ್ರಹ್ಮೋಪದೇಶ ಮಂತ್ರ:** ಸುಪ್ರಜಾಃ ಪ್ರಜಯಾ ಭೂಯಾಃ ಸುವೀರೋ ವೀರೈಃ ಸುವರ್ಚಾ ವರ್ಚಸಾ ಸುಪೋಷಃ ಪೋಷೈಃ॥

(ತಾತ್ಪರ್ಯ: ಸರ್ವಪ್ರೇರಕನಾದ ಸವಿತೃದೇವನ ಅನುಜ್ಞೆಯಿಂದ ನಿನ್ನನ್ನು ಸಮೀಪಕ್ಕೆ ಕರೆದುಕೊಳ್ಳುತ್ತೇನೆ. ಎಲೈ ವಟುವೇ; "ನೀನು (ಯೋಗ್ಯಕಾಲದಲ್ಲಿ) ಪುತ್ರರನ್ನು ಪಡೆದು, ವೀರರಲ್ಲೆಲ್ಲ ವೀರನೂ, ವರ್ಚಸ್ವಿಗಳಲ್ಲಿ ಶ್ರೇಷ್ಠ ವರ್ಚಸ್ವಿಯೂ, ಪೋಷಕರಲ್ಲಿ ಪೋಷಕೋತ್ತಮನೂ ಆಗು [ಈಗ ವೇದಗ್ರಹಣಕ್ಕೆ ಅವಶ್ಯವಾಗಿ ಬೇಕಾದ ಬ್ರಹ್ಮಚರ್ಯವ್ರತ ವನ್ನು ಹೊಂದು]" ಎಂದು ಈ ಉಪದೇಶದ ಸಾರ.)

ಮೇಲಿನ ಉಪದೇಶವಾದನಂತರ ಆಚಾರ್ಯನಾದ ತಂದೆ ಮತ್ತು ತಾಯಿ ಜೀರಿಗೆ ಬೆಲ್ಲವನ್ನು ಕುಮಾರನ ತಲೆಯಲ್ಲಿ ಇಟ್ಟು ಅಂತಃಪಟವನ್ನು ತೆಗೆದು ಬ್ರಾಹ್ಮಣ ಸುವಾಸಿನಿಯರಿಂದ ಆಶೀರ್ವಾದ ಮಾಡಿಸಬೇಕು. "ಬ್ರಹ್ಮೋಪದೇಶ ಮುಹೂರ್ತ-ಸ್ಸುಮುಹೂರ್ತೋಽಸ್ತು" ಎಂದು ಪ್ರತಿವಚನ ಪಡೆಯಬೇಕು.

### 15. ಕುಮಾರನು ಆಚಾರ್ಯನನ್ನು ಪ್ರಾರ್ಥಿಸುವುದು:

**ಮಂತ್ರ:** ಬ್ರಹ್ಮಚರ್ಯಮಾಗಾಮುಪಮಾನಯಸ್ವ ದೇವೇನ ಸವಿತ್ರಾ ಪ್ರಸೂತಃ॥

(ತಾತ್ಪರ್ಯ: ವೇದಗ್ರಹಣಕ್ಕೆ ಬೇಕಾದ ಬ್ರಹ್ಮಚರ್ಯವ್ರತವನ್ನು ಪಡೆದಿದ್ದೇನೆ. ಹೀಗೆ ವ್ರತಸ್ಥನಾದ ನನ್ನನ್ನು ಸರ್ವಪ್ರೇರಕನಾದ ಆದಿತ್ಯನ ಅನುಜ್ಞೆ ಹೊಂದಿರುವ ನೀನು ಹತ್ತಿರ ಕರೆದುಕೋ ಎಂದು ವಟುವು ಪ್ರಾರ್ಥನೆ ಮಾಡುವುದಾಗಿ ಇದೆ.)

## 16. ಆಚಾರ್ಯನ ಪ್ರಶ್ನೆಗಳು ಮತ್ತು ಕುಮಾರನ ಉತ್ತರಗಳು:

ಕುಮಾರನ ಬಲಗೈಯನ್ನು ಹಿಡಿದುಕೊಂಡು ಆಚಾರ್ಯನು ಕೇಳುವ

ಪ್ರಶ್ನೆ : ಕೋ ನಾ ಮಾಸಿ? (ನಿನ್ನ ಹೆಸರೇನು?)

ಉತ್ತರ : (ನಾರಾಯಣ) ಶರ್ಮನ್ ಅಸೌನಾಮಾಸ್ಮಿ (ನಾನು ನಾರಾಯಣ ಶರ್ಮಾ ಎಂಬ ಹೆಸರುಳ್ಳವನಾಗಿದ್ದೇನೆ.)

ಪ್ರಶ್ನೆ : ಕಸ್ಯ ಬ್ರಹ್ಮಚಾರ್ಯಸಿ ನಾರಾಯಣ ಶರ್ಮನ್?

(ಯಾರ ಬ್ರಹ್ಮಚಾರಿಯಾಗಿದ್ದೀಯೆ ನಾರಾಯಣ ಶರ್ಮಾ?)

ಉತ್ತರ : ಪ್ರಾಣಸ್ಯ ಬ್ರಹ್ಮಚಾರ್ಯಸ್ಮಿ।

(ಪ್ರಾಣನ ಬ್ರಹ್ಮಚಾರಿಯಾಗಿದ್ದೇನೆ.)

ಮೇಲಿನ ಕುಮಾರನ ಉತ್ತರಕ್ಕೆ ಆಚಾರ್ಯನು ಈ ಕೆಳಗಿನ ಮಂತ್ರದಿಂದ ಶುಭಾಶಂಸನ ಮಾಡುತ್ತಾನೆ.

**ಮಂತ್ರ:** (ನಾರಾಯಣ) ಶರ್ಮನ್ ಏಷ ತೇ ದೇವ ಸೂರ್ಯ ಬ್ರಹ್ಮಚಾರೀ ತಂ ಗೋಪಾಯ ಸಮಾಮೃತೈಷ ತೇ ಸೂರ್ಯಪುತ್ರಸ್ಸದೀರ್ಘಾಯುಸ್ಸಮಾಮೃತ। ಯಾಗ್ಂ ಸ್ವಸ್ತಿಮಗ್ನಿರ್ವಾಯುಸ್ಸೂರ್ಯಶ್ಚನ್ದ್ರಮಾ ಆಪೋಽನು ಸಂಚರನ್ತಿ ತಾಗ್ಂ ಸ್ವಸ್ತಿಮನು ಸಂಚರ (ನಾರಾಯಣ) ಶರ್ಮನ್॥

(ತಾತ್ಪರ್ಯ: ಎಲೈ ಸೂರ್ಯದೇವನೇ, ನಿನಗೆ ಸಂಬಂಧಿಸಿದ ಈ ವಟುವು ದೀರ್ಘಾಯುಷ್ಮಂತನಾಗಲಿ ಮತ್ತು ಅಂತಹ ದೀರ್ಘಾಯುಷ್ಮಂತರ ಮಧ್ಯೆ ಅವಸಾನ ಹೊಂದದೆ ಇರಲಿ. ಎಲೈ ಕುಮಾರನೇ, ನೀನು ಅಗ್ನಿ, ವಾಯು, ಸೂರ್ಯ, ಚಂದ್ರ ಅಬ್ದೇವತೆಗಳು ಯಾವ ಶುಭಪಥದಲ್ಲಿ ಸಂಚರಿಸುತ್ತಾರೋ, ಅಲ್ಲಿ ಸಂಚಾರಮಾಡುವವ ನಾಗು.)

**ಕುಮಾರ:** ಅಧ್ವನಾಮಧ್ವಪತೇ ಶ್ರೇಷ್ಠಸ್ಯಾಧ್ವನಃ ಪಾರಮಶೀಯ॥

(ತಾತ್ಪರ್ಯ: ಶ್ರೇಯೋಮಾರ್ಗಗಳಿಗೆ ಅಧಿಪತಿಯಾದ ಸೂರ್ಯನೇ ನಿನ್ನ ಅನುಗ್ರಹ ದಿಂದ ಈ ಶ್ರೇಯಸ್ಕರವಾದ ಬ್ರಹ್ಮಚರ್ಯ ಮಾರ್ಗದ ಕೊನೆಯನ್ನು ಹೊಂದುವೆನು.)

17. **ಉಪನಯನಪ್ರಧಾನಹೋಮ:** ಈ ಕರ್ಮದಿಂದಲೇ ಉಪನಯನ ಕರ್ಮಸಿದ್ಧಿಯಾಗುವುದು. ಇಲ್ಲಿ ಹನ್ನೊಂದು ಮಂತ್ರಗಳಿಂದ ಹನ್ನೊಂದು ಆಜ್ಯಾಹುತಿ ಗಳನ್ನು ಕುಮಾರನು ಕೊಡಬೇಕು. ಎರಡನೆಯ ಮತ್ತು ನಾಲ್ಕನೆಯ ಮಂತ್ರಭಾಗ ಗಳನ್ನು ಆಚಾರ್ಯನು ಹೇಳುತ್ತ ಕೊನೆಯ 'ಸ್ವಾಹಾ' ಎಂಬುದನ್ನು ಮಾತ್ರ ಕುಮಾರ ನಿಂದ ಹೇಳಿಸಿ ಆಜ್ಯಾಹುತಿ ಕೊಡಿಸಬೇಕು. ಒಂಬತ್ತು ಮಂತ್ರಗಳನ್ನು ಕುಮಾರ ನಿಂದಲೇ ಹೇಳಿಸುತ್ತ ಎಲ್ಲ ಹನ್ನೊಂದು ಆಜ್ಯಾಯುತಿಗಳನ್ನು ಕುಮಾರನಿಂದಲೇ ಕೊಡಿಸಬೇಕು.

**ಮಂತ್ರ:** 1. ಯೋಗೇ ಯೋಗೇ ತವಸ್ತರಂ ವಾಜೇವಾಜೇ ಹವಾಮಹೇ।

ಸಖಾಯಇಂದ್ರಮೂತಯೇ ಸ್ವಾಹಾ॥

— ಇಂದ್ರಾಯೇದಂ ನ ಮಮ॥

**ಮಂತ್ರ:** 2. **(ಆಚಾರ್ಯನು ಹೇಳತಕ್ಕದ್ದು)**

ಇಮಮಗ್ನ ಆಯುಷೇ ವರ್ಚಸೇ ಕೃಧಿ ಪ್ರಿಯಗ್ಂ ರೇತೋ ವರುಣ ಸೋಮರಾಜನ್। ಮಾ ತೇ ವಾಸ್ಮ ಅದಿತೇ ಶರ್ಮ ಯಚ್ಛ ವಿಶ್ವೇ ದೇವಾ ಜರದಷ್ಟಿರ್ಯಥಾಸತ್ಸ್ವಾಹಾ॥

— ಅಗ್ನೀವರುಣ ಸೋಮಾದಿತಿರ್ವಿಶ್ವೇಭ್ಯೋದೇವೇಭ್ಯ ಇದಂ ನ ಮಮ॥

**ಮಂತ್ರ:** 3. ಶತಮಿನ್ನು ಶರದೋ ಅನ್ತಿದೇವಾ ಯತ್ರಾ ನಶ್ಚಕ್ರಾ ಜರಸಂ ತನೂನಾಮ್। ಪುತ್ರಾಸೋ ಯತ್ರ ಪಿತರೋ ಭವನ್ತಿ ಮಾ ನೋ ಮಧ್ಯಾರೀರಿಷತಾಯುರ್ಗನ್ತೋಃ ಸ್ವಾಹಾ॥

— ದೇವೇಭ್ಯ ಇದಂ ನ ಮಮ.

**ಮಂತ್ರ:** 4. **(ಆಚಾರ್ಯನು ಹೇಳತಕ್ಕದ್ದು)** ಅಗ್ನಿಷ್ಟ ಆಯುಃ ಪ್ರತರಾಂ ದಧಾತ್ವಗ್ನಿಷ್ಟೇ ಪುಷ್ಟಿಂ ಪ್ರತರಾಂ ಕೃಣೋತು। ಇಂದ್ರೋಮರುದ್ಭಿರ್ ಋತುಧಾ ಕೃಣೋತ್ವಾದಿತ್ಯೈಸ್ತೇ ವಸುಭಿರಾದರ್ಧಾತು ಸ್ವಾಹಾ।।

— ಅಗ್ನೀಂದ್ರ ಮರುದಾದಿತ್ಯವಸುಭ್ಯಃ ಇದಂ ನ ಮಮ।।

**ಮಂತ್ರ:** 5. ಮೇಧಾಂ ಮಹ್ಯಮಂಗಿರಸೋ ಮೇಧಾಗ್ಂ ಸಪ್ತರ್ಷಯೋ ದದುಃ। ಮೇಧಾಂ ಮಹ್ಯಂ ಪ್ರಜಾಪತಿರ್ಮೇಧಾಮಗ್ನಿರ್ದಧಾತು ಮೇ ಸ್ವಾಹಾ।।

— ಅಂಗಿರಸಃ ಸಪ್ತರ್ಷಿಃ ಪ್ರಜಾಪತ್ಯಗ್ನಿಭ್ಯಃ ಇದಂ ನ ಮಮ।।

**ಮಂತ್ರ:** 6. ಅಪ್ಸರಾಸು ಚ ಯಾ ಮೇಧಾ ಗನ್ಧರ್ವೇಷು ಚ ಯದ್ಯಶಃ। ದೈವೀ ಯಾ ಮಾನುಷೀ ಮೇಧಾ ಸಾಮಾ ಮಾವಿಶತಾದಿಹ ಸ್ವಾಹಾ।।

— ಮೇಧಯಾ ಇದಂ ನ ಮಮ।।

**ಮಂತ್ರ:** 7. ಇಮಂ ಮೇ ವರುಣ ಶ್ರುಧೀಹವಮದ್ಯಾ ಚ ಮೃಡಯ। ತ್ವಾಮ ವಸ್ಯುರಾಚಕೇ ಸ್ವಾಹಾ।।

— ವರುಣಾಯೇದಂ ನ ಮಮ।।

**ಮಂತ್ರ:** 8. ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜ ಮಾನೋ ಹವಿರ್ಭಿಃ। ಅಹೇಡಮಾನೋ ವರುಣೇಹ ಬೋಧ್ಯುರು ಶಗ್ಂಸ ಮಾ ನ ಆಯುಃ ಪ್ರಮೋಷೀಃ ಸ್ವಾಹಾ।।

— ವರುಣಾಯೇದಂ ನ ಮಮ।।

**ಮಂತ್ರ:** 9. ತ್ವಂನೋ ಅಗ್ನೇ ವರುಣಸ್ಯ ವಿದ್ವಾನ್ದೇವಸ್ಯ ಹೇಡೋಽ ವಯಾಸಿ
ಸೀಷ್ಠಾಃ। ಯಜಿಷ್ಠೋ ವಹ್ನಿತಮಶ್ಶೋಶುಚಾನೋ
ವಿಶ್ವಾದ್ವೇಷಾಗ್ಂಸಿ ಪ್ರಮುಮುಗ್ಧ್ಯಸ್ಮತ್ ಸ್ವಾಹಾ॥

— ಅಗ್ನೀವರುಣಾಭ್ಯಾಮಿದಂ ನ ಮಮ॥

**ಮಂತ್ರ:** 10. ಸತ್ವಂ ನೋ ಅಗ್ನೇಽವಮೋ ಭವೋತೀ ನೇದಿಷ್ಠೋ ಅಸ್ಯಾ
ಉಷಸೋ ವ್ಯುಷ್ಟೌ। ಅವ ಯಕ್ಷ್ವ ನೋ ವರುಣಗ್ಂ ರರಾಣೋ
ವೀಹಿ ಮೃಡೀಕಗ್ಂ ಸುಹವೋ ನ ಏಧಿ ಸ್ವಾಹಾ॥

— ಅಗ್ನೀವರುಣಾಭ್ಯಾಮಿದಂ ನ ಮಮ॥

**ಮಂತ್ರ:** 11. ತ್ವಮಗ್ನೇ ಅಯಾಸ್ಯಯಾಸನ್ಮನಸಾಹಿತಃ। ಅಯಾಸನ್ ಹವ್ಯ
ಮೂಹಿಷೇ ಯಾ ನೋ ಧೇಹಿ ಭೇಷಜಗ್ಂ ಸ್ವಾಹಾ॥

— ಅಗ್ನಯೇ ಅಯಸ ಇದಂ ನ ಮಮ॥

ಈ ರೀತಿ ಕುಮಾರನಿಂದ ಹನ್ನೊಂದು ಆಜ್ಯಾಹುತಿಗಳನ್ನು ಕೊಡಿಸಿ ಅನೂಯಾಜ ಸಮಿತ್ತನ್ನೂ ಇಧ್ಮಸನ್ನಹನವನ್ನೂ ಅಗ್ನಿಯಲ್ಲಿ ಹೋಮ ಮಾಡಿ ಆಚಾರ್ಯನು 'ಏತತ್ಕರ್ಮ ಸಮೃದ್ಧ್ಯರ್ಥಂ ಸ್ರುವೇಣ ಜಯಾದಿ ಹೋಮಂ ಕರಿಷ್ಯೇ' ಎಂದು ಸಂಕಲ್ಪಮಾಡಿ ಐವತ್ತೆಂಟು ಉಪಹೋಮಗಳನ್ನು ಕೇವಲ ಆಜ್ಯದಿಂದಲೇ ಮಾಡಬೇಕು. ಇಲ್ಲಿ ಲೇಪಕಾರ್ಯ (ಬರ್ಹಿಸ್ಸಮಂಜನ), ಸಂಸ್ರಾವಹೋಮ ಮತ್ತು ಪರಿಧಿ ಪ್ರಹರಣವಿರುವುದಿಲ್ಲ. ಪರಿಧಿಗಳನ್ನು ತೆಗೆದಿಟ್ಟರೆ ಸಾಕು. ಹಾಗೂ ಕರ್ಮದಲ್ಲಿ ಉಂಟಾಗಿರುವ ಜ್ಞಾತಾಜ್ಞಾತಾದಿ ದೋಷಗಳ ಪರಿಹಾರಾರ್ಥವಾಗಿ ಅನಾಜ್ಞಾತಾದಿ ಹೋಮಗಳನ್ನು ಮಾಡಿ ಪೂರ್ಣಪಾತ್ರೋದಕ ಪ್ರೋಕ್ಷಣಾಂತ ಮಾಡಿ ಬ್ರಹ್ಮ ವಿಸರ್ಜನೆ ಮಾಡದೆ ಮುಂದಿನ ಗಾಯತ್ರೀ ಉಪದೇಶಕ್ಕೆ ಸಿದ್ಧತೆಮಾಡಿಕೊಳ್ಳಬೇಕು. (ಗಾಯತ್ರೀ ಉಪದೇಶವು ಬ್ರಹ್ಮನ ಉಪಸ್ಥಿತಿಯಲ್ಲೇ ಆಗಬೇಕಾದ್ದರಿಂದ ಅವನನ್ನು

ಈಗ ವಿಸರ್ಜಿಸಬಾರದು. ಉಪನಯನಪ್ರಧಾನಹೋಮ ಮಂತ್ರಗಳ ತಾತ್ಪರ್ಯ ಕೊಂಚ ದೀರ್ಘವಾಗಿರುವುದರಿಂದ ಮುಂದೆ ಪರಿಶಿಷ್ಟದಲ್ಲಿ ಕೊಟ್ಟಿರುತ್ತೇವೆ.)

**18. ಗಾಯತ್ರೀ ಉಪದೇಶ:** ಉಪನಯನ ಸಂಸ್ಕಾರದ ಬಹುಮುಖ್ಯವಾದ ಕರ್ಮ ಗಾಯತ್ರೀ ಉಪದೇಶ. ಈ ಕರ್ಮಭಾಗದ ವಿವರಗಳನ್ನು ಭಾಗ-1 ರ II - 27ನೇ ಪ್ಯಾರಾದಲ್ಲಿ ವಿವರಿಸಿದ್ದೇವೆ. ಇಲ್ಲಿಯೂ ಆ ವಿವರಗಳನ್ನು ಆಚರಣೆಯ ಅನುಕೂಲದ ದೃಷ್ಟಿಯಿಂದ ಮತ್ತೆ ಕೊಟ್ಟಿರುತ್ತೇವೆ.

(i) ಆಚಾರ್ಯನ ಆಸನಾರ್ಥವಾಗಿ ವಟುವು ಅಗ್ನಿಯ ಪಶ್ಚಿಮದಲ್ಲಿ ಉದಗಗ್ರವಾಗಿ ಒಂದು ಕೂರ್ಚೆಯನ್ನು ಇಡಬೇಕು. ಅದರ ಮೇಲೆ ಆಚಾರ್ಯನು,

"ರಾಷ್ಟ್ರಭೃದಸ್ಯಾಚಾರ್ಯಾಸನ್ದೀ ಮಾ ತ್ವದ್ಯೋಷಮ್"

ಎಂಬ ಮಂತ್ರವನ್ನು ಹೇಳುತ್ತ ಪೂರ್ವಾಭಿಮುಖವಾಗಿ ಕುಳಿತುಕೊಳ್ಳುತ್ತಾನೆ.

(ii) ಆಚಾರ್ಯನು ಆಚಮನಮಾಡಿ ಪ್ರಾಣಾಯಾಮಪೂರ್ವಕ ಈ ರೀತಿ ಸಂಕಲ್ಪ ಮಾಡುವುದು. "ಮಮ ಕುಮಾರಸ್ಯ ಗಾಯತ್ರೀ ಉಪದೇಶ ಕಾಲೇನಿರ್ವಿಘ್ನತಾ ಸಿದ್ಧ್ಯರ್ಥಂ ಮಹಾಗಣಪತಿ ಪೂಜಾಂ ಕರಿಷ್ಯೆ" (ಇಲ್ಲಿ ಕೆಲವರು ಗಾಯತ್ರೀ ಪೂಜೆ ಯನ್ನೂ, ಸುಮುಹೂರ್ತ ಸಿದ್ಧ್ಯರ್ಥೇ ಬೃಹಸ್ಪತಿ ಪೂಜೆಯನ್ನೂ ಮಾಡುತ್ತಾರೆ). ಈ ರೀತಿ ಗಣಪತ್ಯಾದಿ ದೇವತೆಗಳಿಗೆ ಷೋಡಶೋಪಚಾರಪೂಜೆ ಆದ ನಂತರ ವಟುವು ಆಚಾರ್ಯನಿಗೆ ಅಭಿಮುಖವಾಗಿ ಕುಳಿತುಕೊಂಡು ತನ್ನ ಎರಡು ಕೈಗಳಿಂದಲೂ ಆಚಾರ್ಯನ ಎರಡು ಪಾದಗಳನ್ನೂ ತೊಳೆದು, ಒರಸಿ, ಗಂಧಪುಷ್ಪಾದಿಗಳಿಂದ ಪೂಜಿಸಿ, ಪಾದೋದಕವನ್ನು ತಲೆಗೆ ಪ್ರೋಕ್ಷಿಸಿಕೊಳ್ಳಬೇಕು. ನಂತರ ತನ್ನ ಬಲಗೈಯಿಂದ ಆಚಾರ್ಯನ ಬಲಪಾದವನ್ನು ಮುಟ್ಟಿಕೊಂಡು (ಕೆಲವರು ಹೆಬ್ಬೆರಳನ್ನು ಹಿಡಿದುಕೊಳ್ಳು ತ್ತಾರೆ) **'ಸಾವಿತ್ರೀಂ ಭೋ ಅನುಬ್ರೂಹಿ'** ಎಂದು ವಿನಂತಿಸಿಕೊಳ್ಳುತ್ತಾನೆ. ಆಗ ಆಚಾರ್ಯನು ವಟುವನ್ನು ತನ್ನ ಬಲತೊಡೆಯ ಮೇಲೆ ಕೂರಿಸಿಕೊಂಡು ವಸ್ತ್ರಾಚ್ಛಾದನೆ ಮಾಡಿಕೊಂಡು ಅವನ ಬಲಕಿವಿಯಲ್ಲಿ ಗಾಯತ್ರೀ ಮಂತ್ರವನ್ನು ಕೆಳಗಿನಂತೆ ಹೇಳಿಕೊಡ ಬೇಕು (ಕೆಲವರಲ್ಲಿ ಈ ಉಪದೇಶಕ್ಕೆ ಸಭೆಯ ಅನುಜ್ಞೆಯನ್ನೂ ಕೇಳುತ್ತಾರೆ).

1. ಓಂ ಭೂಃ — ತತ್ಸವಿತುರ್ವರೇಣ್ಯಂ।
2. ಓಂ ಭುವಃ — ಭರ್ಗೋ ದೇವಸ್ಯ ಧೀಮಹಿ।
3. ಓಗ್‌ಂ ಸುವಃ — ಧಿಯೋ ಯೋ ನಃ ಪ್ರಚೋದಯಾತ್॥

4. ಓಂ ಭೂಃ — ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।

5. ಓಂ ಭುವಃ — ಧಿಯೋ ಯೋ ನಃ ಪ್ರಚೋದಯಾತ್।

6. ಓಗ್ಂ ಸುವಃ — ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ

ಧಿಯೋ ಯೋ ನಃ ಪ್ರಚೋದಯಾತ್॥

**ಗಾಯತ್ರೀ ಮಂತ್ರಾರ್ಥ: 'ಸರ್ವಪ್ರೇರಕನಾದ ಸವಿತೃ (ಸೂರ್ಯ) ದೇವನ ಸರ್ವಾಕರ್ಷಕ ತೇಜಸ್ಸನ್ನು (ಎಂದರೆ ಚೈತನ್ಯವನ್ನು) ಚಿಂತಿಸುತ್ತೇನೆ. ಆ ಚೈತನ್ಯವು ನಮ್ಮೆಲ್ಲರ ಬುದ್ಧಿಗಳನ್ನು ಸನ್ಮಾರ್ಗದಲ್ಲಿ ಪ್ರೇರಿಸಲಿ'** ಎಂದು ಭಾವಾರ್ಥ. ಈ ಮಂತ್ರದಲ್ಲಿ 'ಧಿಯೋ ಯೋ ನಃ' ಎಂಬಲ್ಲಿ 'ನಃ' ಎಂದರೆ 'ನಮ್ಮಗಳ' ಎಂಬ ಬಹುವಚನ ಪ್ರಯೋಗವು ಮಂತ್ರವನ್ನು ಜಪಿಸುವವನಲ್ಲದೆ ಅವನ ಸಂಬಂಧಪಟ್ಟ ಜನರೆಲ್ಲರ ಬುದ್ಧಿಗಳನ್ನು ಸನ್ಮಾರ್ಗದಲ್ಲಿ ಪ್ರೇರಿಸಲಿ ಎಂದು ವಿಶಾಲವಾದ ಆಕಾಂಕ್ಷೆಯನ್ನು ಬೀರುತ್ತದೆ. ಇದು ಮಂತ್ರದ್ರಷ್ಟಾರರ ಲೋಕಸಂಗ್ರಹ ದೃಷ್ಟಿಯನ್ನೂ ತೋರಿಸುತ್ತದೆ. ಈ ಗಾಯತ್ರೀ ಮಂತ್ರಕ್ಕೆ ಮಂತ್ರದ್ರಷ್ಟಾರರು ವಿಶ್ವಾಮಿತ್ರರು. ಮಂತ್ರದ ಛಂದಸ್ಸು 'ಗಾಯತ್ರೀ' — ಈ ಛಂದಸ್ಸಿನಲ್ಲಿ ಮೂರು ಪಾದಗಳೂ, ಒಂದೊಂದು ಪಾದದಲ್ಲಿ ಎಂಟು ಎಂಟು ಅಕ್ಷರಗಳಿದ್ದು ಒಟ್ಟು 24 ಅಕ್ಷರದ ಮಂತ್ರವಾಗಿದೆ. ಹಾಗೂ ಈ ಮಂತ್ರಕ್ಕೆ ಅಭಿಮಾನಿದೇವತೆ ಸವಿತೃ (ಸೂರ್ಯ). ಸೂರ್ಯನ ಹಿರಿಮೆಯನ್ನು ನಾವು ಬಣ್ಣಿಸಲು ಸಾಧ್ಯವೇ ಇಲ್ಲ. ಅವನು ಪ್ರತ್ಯಕ್ಷ ದೈವ. 'ನಮಃ ಸವಿತ್ರೇ ಜಗದೇಕಚಕ್ಷುಷೇ ಜಗತ್ಪ್ರಸೂತಿಸ್ಥಿತಿನಾಶಹೇತವೇ। ತ್ರಯೀ ಮಯಾಯ ತ್ರಿಗುಣಾತ್ಮಧಾರಿಣೇ ವಿರಿಂಚಿನಾರಾಯಣಶಂಕರಾತ್ಮನೇ॥' ಎಂದು ಶ್ಲೋಕವಿದೆ. ಇಂತಹ ದೇವೋತ್ತಮನು ನಮ್ಮ ಬುದ್ಧಿಗಳನ್ನು ಪ್ರೇರೇಪಿಸಿದರೆ ನಾವು ಕೃತಾರ್ಥರಾಗುವುದರಲ್ಲಿ ಸಂದೇಹವೇ ಇಲ್ಲ. ಹಾಗಾಗಿ ಈ ಗಾಯತ್ರಿಯು ಸಕಲಮಂಗಲ ದಾಯಕವಾದ 'ಮಂತ್ರರಾಜ'ವಾಗಿದೆ.

ಮೇಲೆ ಬರೆದಿರುವಂತೆ ಆರು ಸಾಲುಗಳ ಕ್ರಮದಲ್ಲಿ ಗಾಯತ್ರೀ ಮಂತ್ರವನ್ನು ಉಚ್ಚರಿಸುವುದಕ್ಕೆ 'ಪಚ್ಛೋಽರ್ಧರ್ಚಶೋಽನವಾನ'ವೆಂದು ಹೆಸರು. 'ಓಂ' ಎಂಬುದು ಎಲ್ಲ ಸಾಲಿನಲ್ಲಿ ಬರುವುದಾಗಿದೆ. ಪ್ರಣವವು ಸರ್ವವೇದಸಾರ ಮತ್ತು ಬ್ರಹ್ಮವಾಚಕವಾಗಿದೆ. ನಂತರದ ಭೂಃ, ಭುವಃ, ಸುವಃ ಎಂಬವು ಲೋಕತ್ರಯವನ್ನೂ,

ಅಗ್ನಿ, ವಾಯು, ಆದಿತ್ಯರನ್ನೂ ತಿಳಿಸುವ ವ್ಯಾಹೃತಿಗಳಾಗಿವೆ. ಓಂಕಾರ ಮತ್ತು ವ್ಯಾಹೃತಿಗಳ ವ್ಯಾಖ್ಯಾನವೇ ಗಾಯತ್ರೀ ಮಂತ್ರವಾಗಿದೆ.

ಗಾಯತ್ರೀ ಉಪದೇಶವನ್ನು ಮೇಲೆ ತೋರಿಸಿರುವಂತೆ ಆರು ಸಾಲುಗಳಲ್ಲಿ ಕೊಡುವುದರ ವಿವರಣೆ ಹೀಗಿದೆ.

(i) ಒಂದು, ಎರಡು ಮತ್ತು ಮೂರನೆ ಸಾಲುಗಳು ಒಂದೊಂದೂ ಗಾಯತ್ರೀ ಮಂತ್ರದ ಒಂದೊಂದು ಪಾದಗಳು. ಇದಕ್ಕೆ 'ಪಚ್ಛ-ಪಾದಶಃ' — ಪಾದ ಪಾದವಾಗಿ ಉಚ್ಚರಿಸುವ ಕ್ರಮವೆಂದು ಹೆಸರು.

(ii) ನಾಲ್ಕನೆಯ ಮತ್ತು ಐದನೆಯ ಸಾಲುಗಳಲ್ಲಿ ಗಾಯತ್ರೀ ಮಂತ್ರವನ್ನು ಅರ್ಧಋಕ್ಕಿನ ಕ್ರಮದಿಂದ ಕೊಟ್ಟಿದೆ. ಇದಕ್ಕೆ 'ಅರ್ಧರ್ಚಶ' (ಅರ್ಧಋಕ್ಕಿನ) ಕ್ರಮವೆಂದು ಹೆಸರು.

(iii) ಕೊನೆಯದಾದ ಆರನೇ ಸಾಲಿನಲ್ಲಿ ಗಾಯತ್ರೀ ಮಂತ್ರವನ್ನು ಎಲ್ಲೂ ಪಾದಚ್ಛೇದ ಅಥವಾ ಋಕ್ಛೇದ ಮಾಡದೆ ವಿರಾಮವಿಲ್ಲದೇ ಪೂರಾಮಂತ್ರವನ್ನು ಉಚ್ಚರಿಸಬೇಕು. ಇದಕ್ಕೆ 'ಅನವಾನ' ಕ್ರಮವೆಂದು ಹೆಸರು.

ಹೀಗೆ ಗಾಯತ್ರೀ ಉಪದೇಶವಾದಮೇಲೆ ಮುಂದೆ ಕುಮಾರನು ಸಂಧ್ಯಾಂಗ ಜಪಕಾಲಗಳಲ್ಲಿ,

'ಓಂ ಭೂರ್ಭುವಸ್ಸುವಃ। ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।

ಧಿಯೋ ಯೋ ನಃ ಪ್ರಚೋದಯಾತ್'

—ಎಂದು ಮಂತ್ರೋಚ್ಚಾರಣೆ (ಪುರಶ್ಚರಣೆ) ಮಾಡತಕ್ಕದ್ದು. ಈ ಮಂತ್ರದ ಹಿರಿಮೆಯನ್ನು ಇನ್ನೂ ವಿವರವಾಗಿ ತಿಳಿಯಲಿಚ್ಛಿಸುವವರು ಬೃಹದಾರಣ್ಯಕೋಪನಿಷತ್ತಿನ ಐದನೆಯ ಅಧ್ಯಾಯದ ಹದಿನಾಲ್ಕನೆಯ ಬ್ರಾಹ್ಮಣವನ್ನು ಅವಗಾಹನೆ ಮಾಡಬಹುದು. (ಬೃ. 5-14-1ರಿಂದ 8 ಮಂತ್ರಗಳು)

ಮೇಲೆ ವಿವರಿಸಿದಂತೆ ಗಾಯತ್ರೀ ಉಪದೇಶಾನಂತರ ಆಚಾರ್ಯನು ಆಚ್ಛಾದಿತ ವಸ್ತ್ರವನ್ನು ತೆಗೆಯಬೇಕು. ಬ್ರಾಹ್ಮಣರಿಂದ ವಟುವು 'ಗಾಯತ್ರೀ ಉಪದೇಶ ಮುಹೂರ್ತಸ್ಸುಮುಹೂರ್ತೋಽಸ್ತು' ಎಂದು ಆಶೀರ್ವಾದ ಪಡೆಯಬೇಕು.

**19. ಓಷ್ಠ ಮತ್ತು ಕರ್ಣಸ್ಪರ್ಶನ:** ಗಾಯತ್ರೀ ಉಪದೇಶಾನಂತರ ಕುಮಾರನು

'ಅವೃಧಮಸೌ ಸೌಮ್ಯ ಪ್ರಾಣ ಸ್ವಂ ಮೇ ಗೋಪಾಯ'

ಎಂಬ ಮಂತ್ರದಿಂದ ತನ್ನ ಎರಡು ತುಟಿಗಳನ್ನೂ ಎಡಭಾಗದಿಂದ ಬಲ ಕಿವಿಯ ವರೆವಿಗೂ ಬಲಗೈಯಿಂದ ಸವರಿಕೊಳ್ಳಬೇಕು. 'ಈಗ ನಾನು ಸಾವಿತ್ರೀ ಗ್ರಹಣದಿಂದ ಶ್ರೀಮಂತನಾಗಿದ್ದೇನೆ. ಈಗಷ್ಟೇ ನನ್ನ ಒಳಗೆ ಪ್ರವೇಶಮಾಡಿರುವ ಸಾವಿತ್ರೀ ಸ್ವರೂಪದ ಧನವನ್ನು ನನ್ನ ಪ್ರಿಯ ಅಂತರಾತ್ಮನೇ, ಕಾಪಾಡು' ಎಂದು ಮಂತ್ರಾರ್ಥ. ಇದೇ ರೀತಿ

'ಬ್ರಹ್ಮಣ ಆಣೀ ಸ್ಥಃ'

ಎಂಬ ಮಂತ್ರದಿಂದ ಕುಮಾರನು ತನ್ನ ಎರಡು ಕಿವಿಗಳನ್ನೂ ಒಂದೇ ಬಾರಿಗೆ ಕೈಗಳಿಂದ ಮುಚ್ಚಿಕೊಳ್ಳಬೇಕು. ಇಲ್ಲೂ ತಾನು ಶ್ರವಣ ಮಾಡಿದ ಗಾಯತ್ರಿಯು ಕರ್ಣ ದ್ವಾರ ಹೊರಹೋಗದಿರಲೆಂದು ಪ್ರಾರ್ಥನೆ ಮಾಡಿರುವುದಾಗಿದೆ. ಓಷ್ಠಸ್ಪರ್ಶನ ಮತ್ತು ಕರ್ಣಸ್ಪರ್ಶನವಾದಮೇಲೆ ಪ್ರತ್ಯೇಕ ಪ್ರತ್ಯೇಕವಾಗಿ ಆಚಮನ ಮಾಡಬೇಕು.

## 20. ಪಾಲಾಶದಂಡ ಸ್ವೀಕಾರಃ

**ಮಂತ್ರಃ** ಸುಶ್ರವಸ್ಸುಶ್ರವಸಂ ಮಾ ಕುರು ಯಥಾ ತ್ವಗ್ಂ ಸುಶ್ರವಸ್ಸುಶ್ರವಾ ಅಸ್ಯೇವ ಮಹಗ್ಂ ಸುಶ್ರವಸ್ಸುಶ್ರವಾ ಭೂಯಾಸಂ ಯಥಾ ತ್ವಗ್ಂ ಸುಶ್ರವಸುಶ್ರವೋ ದೇವಾನಾಂ ನಿಧಿಗೋಪೋಽಸ್ಯೇವಮಹಂ ಬ್ರಾಹ್ಮಣಾನಾಂ ಬ್ರಹ್ಮಣೋ ನಿಧಿ ಗೋಪೋ ಭೂಯಾಸಮ್॥

ಈ ಮಂತ್ರವನ್ನು ಹೇಳುತ್ತ ಕುಮಾರನು ಆಚಾರ್ಯನು ಕೊಡುವ ಪಾಲಾಶ (ಮುತ್ತುಗ) ದಂಡವನ್ನು ಬಲಗೈಯಲ್ಲಿ ಸ್ವೀಕರಿಸಬೇಕು. ಮಂತ್ರಾರ್ಥ ಹೀಗಿದೆ, 'ಎಲೈ ಸುಶ್ರವಸ್ಸೇ' (ಮುತ್ತುಗದ ದಂಡವೇ), ನೀನು ಹಿಂದೆ ಯಾವ ರೀತಿ (ದೇವತೆಗಳು ಮಾಡಿದ) ವೇದ ಪಾಠವನ್ನು ಚೆನ್ನಾಗಿ ಶ್ರವಣ ಮಾಡಿದೆಯೋ ಹಾಗೆ ನನ್ನನ್ನೂ ಶ್ರವಣ ಮಾಡುವಂತೆ ಮಾಡು. ಇದರಿಂದ ನೀನು ದೇವತೆಗಳ ನಿಧಿರೂಪವಾದ ಯಜ್ಞವನ್ನು ಜುಹ್ವಾದಿರೂಪದಿಂದ ಕಾಪಾಡುವಂತೆ ನಿನ್ನ ದಂಡಧಾರಣೆಯಿಂದ ಬ್ರಾಹ್ಮಣರ ನಿಧಿ ಯಾದ ವೇದವನ್ನು ನಾನು ಕಾಪಾಡುವಂತಾಗಲೀ ಎಂದು ಪ್ರಾರ್ಥನೆಯಿದೆ. ಈ ಕರ್ಮ ಭಾಗದ ಹೆಚ್ಚಿನ ವಿವರಣೆಯನ್ನು ಭಾಗ-2ರ II-29 ಪ್ಯಾರಾದಲ್ಲಿ ಕೊಟ್ಟಿರುತ್ತೇವೆ.

**21. ಬ್ರಹ್ಮಚಾರೀ ವ್ರತ ಸ್ವೀಕಾರಃ** ವಟುವು ಬ್ರಹ್ಮಚಾರಿಯಾಗಿರುವಾಗ ಪಾಲಿಸಬೇಕಾದ ವ್ರತಗಳನ್ನು ಕೆಳಗಿನ ಒಂಬತ್ತು ಮಂತ್ರಗಳಲ್ಲಿ ಅನುಶಾಸನ ಮಾಡಿ ಕುಮಾರನಿಂದ ಹೇಳಿಸಬೇಕು.

**ಮಂತ್ರ:** 1. ಸ್ಮೃತಂ ಚ ಮೇऽಸ್ಮೃತಂ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 2. ನಿಂದಾ ಚ ಮೇऽನಿಂದಾ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 3. ಶ್ರದ್ಧಾ ಚ ಮೇऽಶ್ರದ್ಧಾ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 4. ವಿದ್ಯಾ ಚ ಮೇऽವಿದ್ಯಾ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 5. ಶ್ರುತಂ ಚ ಮೇऽಶ್ರುತಂ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 6. ಸತ್ಯಂ ಚ ಮೇऽನೃತಂ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 7. ತಪಶ್ಚ ಚ ಮೇऽತಪಶ್ಚ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 8. ವ್ರತಂ ಚ ಮೇऽವ್ರತಂ ಚ ಮೇ ತನ್ಮ ಉಭಯಂ ವ್ರತಂ॥

**ಮಂತ್ರ:** 9. ಯದ್ಬ್ರಾಹ್ಮಣಾನಾಂ ಬ್ರಹ್ಮಣಿ ವ್ರತಂ ಯದಗ್ನೇಸ್ಸೇಂದ್ರಸ್ಯ ಸ ಪ್ರಜಾಪತಿ
ಕಸ್ಯ ಸ ದೇವಸ್ಯ ಸ ದೇವರಾಜಸ್ಯ ಸ ಮನುಷ್ಯಸ್ಯ ಸಮನುಷ್ಯರಾಜಸ್ಯ
ಸ ಪಿತೃಕಸ್ಯ ಸ ಪಿತೃರಾಜಸ್ಯ ಸ ಗಂಧರ್ವಾಪ್ಸರಸ್ಕಸ್ಯ। ಯನ್ಮ ಆತ್ಮನ
ಆತ್ಮನಿ ವ್ರತಂ ತೇನಾಹಗ್ಂ ಸರ್ವವ್ರತೋ ಭೂಯಾಸಮ್॥

(ತಾತ್ಪರ್ಯ: ಮೇಲಿನ ಮೊದಲ ಎಂಟು ಮಂತ್ರಗಳಲ್ಲಿ ಕುಮಾರನು ತನಗೆ ಯಾವುದು ವ್ರತ — ಎಂದರೆ ನಿಯಮ, ಪಾಲಿಸತಕ್ಕದ್ದು ಎಂಬುದನ್ನು ಹೇಳುತ್ತಾನೆ. ಮನುಷ್ಯನಿಗೆ ಧರ್ಮವೂ ಅಧರ್ಮವೂ ಎರಡೂ ತಿಳಿದಿರಬೇಕು. ಧರ್ಮವು ಆಚರಣೆಗಾದರೆ ಅಧರ್ಮವು ನಿರಾಕರಣೆಗಾಗಿ ಜಿಜ್ಞಾಸೆ ಮಾಡತಕ್ಕದ್ದಾಗಿದೆ. ಎಂದರೆ ಎರಡೂ ವ್ರತಗಳೇ.)

ಈ ಅಭಿಪ್ರಾಯದಿಂದ ವಟು ಹೇಳುವ ಮಂತ್ರದ ಅರ್ಥ ಹೀಗಿದೆ:

(i) ವಿಧಿವತ್ತಾಗಿ ಕರ್ಮಗಳನ್ನು ಆಚರಿಸಬೇಕೆಂಬುದೂ ಆಪತ್ಕಾಲದಲ್ಲಿ ಆ ವಿಧಿಗಳನ್ನು ಅನುಸರಿಸದೆ ಇರುವುದೂ ಎರಡೂ ನನ್ನ ವ್ರತಗಳಾಗಿವೆ. ಇದೇ ರೀತಿ,

(ii) ತುಚ್ಛ ವಿಷಯದಲ್ಲಿ ನಿಂದೆಯೂ, ಉಚ್ಚ ವಿಷಯದಲ್ಲಿ ಶ್ಲಾಘನೆಯೂ,

(iii) ಶ್ರದ್ಧೆಯಿಂದ ನಡೆಯುವುದೂ ಹಾಗೆಯೇ ಅಶ್ರದ್ಧೆಯಿಂದ ನಡೆದುಕೊಳ್ಳುವುದೂ,

(iv) ಯೋಗ್ಯ ವಿಷಯಗಳ ಜ್ಞಾನವೂ ಹಾಗೇ ಅಯೋಗ್ಯ ವಿಷಯಗಳ ಅಜ್ಞಾನವೂ

(v) ವೇದಸಮ್ಮತವಾದ್ದನ್ನು ಕೇಳುವುದೂ ಅದಕ್ಕೆ ವಿರುದ್ಧವಾದ ಪಾಖಂಡ ಮತವನ್ನು ಕೇಳದಿರುವುದೂ,

(vi) ಸತ್ಯವನ್ನೇ ನುಡಿಯುವುದು ಹಾಗೂ ಪ್ರಾಣಾಪಾಯಕಾಲದಲ್ಲಿ ಸುಳ್ಳನ್ನು ಹೇಳುವುದೂ,

(vii) ಭಿಕ್ಷಾದಿವ್ರತಗಳನ್ನು ತಪ್ಪದೇ ಮಾಡುವುದೂ ಅಶಕ್ತನಾದಾಗ ಅದನ್ನು ಮಾಡದೆ ಇರುವುದೂ

(viii) ಎಲ್ಲ ನಿಯಮಗಳನ್ನೂ ಕಟ್ಟುನಿಟ್ಟಾಗಿ ಆಚರಿಸುವುದೂ ಆಪತ್ಕಾಲದಲ್ಲಿ ಅವುಗಳನ್ನು ಸಡಿಲಮಾಡುವುದೂ — ಈ ಎರಡೂ ನನ್ನ ವ್ರತಗಳಾಗಿವೆ.

(ix) ಹಾಗೆಯೇ ವೇದಗಳ ವಿಷಯದಲ್ಲಿ ಬ್ರಾಹ್ಮಣನಿಗೆ ಇರುವ ನಿಯಮವೂ, ಅಗ್ನಿ, ಇಂದ್ರ, ಮನುಷ್ಯ, ರಾಜ, ಪಿತೃದೇವತೆ, ಯಮಧರ್ಮರಾಜ, ಗಂಧರ್ವ, ಅಪ್ಸರಸ್ಸುಗಳು ಮುಂತಾದವರಲ್ಲಿ ಇರುವ ಪ್ರತ್ಯೇಕ ಪ್ರತ್ಯೇಕ ವ್ರತಗಳೂ ಆಚಾರ್ಯನು ಹೇಳಿದ ಕೆಲಸ ಸಾಧನೆಯ ವ್ರತವೇ ಆದಿಯಾಗಿ ಸರ್ವಪ್ರಕಾರದಿಂದ ಸರ್ವವ್ರತಗಳನ್ನೂ ಧರಿಸುವವನಾಗಿದ್ದೇನೆ ಎಂದು ಒಂಬತ್ತನೇ ಮಂತ್ರದ ತಾತ್ಪರ್ಯ.

22. **ಗುರುದಕ್ಷಿಣೆ ಮತ್ತು ಬ್ರಹ್ಮನಿಗೆ ದಕ್ಷಿಣೆ:** ಗಾಯತ್ರೀ ಮಂತ್ರವನ್ನು ಉಪದೇಶ ಮಾಡಿದ್ದಕ್ಕಾಗಿ ವಟುವು ಆಚಾರ್ಯನಿಗೆ ಯಥಾಶಕ್ತಿ ದಕ್ಷಿಣೆಯನ್ನು ಕೊಡಬೇಕು (ಹಿಂದೆ ಗೋವನ್ನೇ ದಕ್ಷಿಣೆಯಾಗಿ ಕೊಡುತ್ತಿದ್ದರು). ಆಚಾರ್ಯನು ಹದಿನೇಳುಸಾರಿ ಪ್ರಾಣಾಯಾಮವನ್ನು ಮಾಡಿ (ಆಚಾರ್ಯಃ ಸಪ್ತದಶಕೃತ್ವೋಽಪಾನ್ಯಃ) ಆ ದಕ್ಷಿಣೆಯನ್ನು ಕೆಳಗಿನ ಮಂತ್ರಪೂರ್ವಕ ಸ್ವೀಕರಿಸಬೇಕು.

**ಮಂತ್ರ:** ದೇವಸ್ಯ ತ್ವಾ ಸವಿತುಃ ಪ್ರಸವೇ। ಅಶ್ವಿನೋರ್ಬಾಹುಭ್ಯಾಂ। ಪೂಷ್ಣೋ ಹಸ್ತಾಭ್ಯಾಂ ಪ್ರತಿಗೃಹ್ಣಾಮಿ। ರಾಜಾ ತ್ವಾ ವರುಣೋ ನಯತು ದೇವಿ ದಕ್ಷಿಣೇ ರುದ್ರಾಯ ಗಾಂ। ತೇನಾಮೃತತ್ವಮಶ್ಯಾಂ। ವಯೋ ದಾತ್ರೇ। ಮಯೋ ಮಹ್ಯಮಸ್ತು ಪ್ರತಿಗ್ರಹೀತ್ರೇ। ಕ ಇದಂ ಕಸ್ಮಾ ಅದಾತ್। ಕಾಮಃ ಕಾಮಾಯ। ಕಾಮೋ ದಾತಾ। ಕಾಮಃ ಪ್ರತಿಗ್ರಹೀತಾ। ಕಾಮಗ್ಂ ಸಮುದ್ರಮಾವಿಶ। ಕಾಮೇ-

ನ ತ್ವಾ ಪ್ರತಿಗೃಹ್ಣಾಮಿ। ಕಾಮೈತತ್ತೇ। ಏಷಾ ತೇ ಕಾಮ ದಕ್ಷಿಣಾ।
ಉತ್ತಾನಸ್ತ್ವಾಂಗೀರಸಃ ಪ್ರತಿಗೃಹ್ಣಾತು॥

ಆಚಾರ್ಯ ದಕ್ಷಿಣಾನಂತರ ಬ್ರಹ್ಮತ್ವದ್ವಿಜನಿಗೂ ಯಥಾಶಕ್ತಿ ದಕ್ಷಿಣೆಯನ್ನು ಕೊಟ್ಟು (ಬ್ರಹ್ಮಣೇ ವರಂ ದತ್ವಾ) ಬ್ರಹ್ಮನನ್ನು ಉದ್ವಾಸನೆಮಾಡುವುದು.

(ಮೇಲಿನ ಮಂತ್ರಾರ್ಥ: ಸರ್ವಪ್ರೇರಕನಾದ ಸವಿತೃವಿನ ಪ್ರೇರಣೆಯಿಂದಲೂ, ಅಶ್ವಿನೀದೇವತೆಗಳ ತೋಳುಗಳಿಂದಲೂ, ಪೂಷ್ಣದೇವತೆಯ ಹಸ್ತದಿಂದಲೂ ದಕ್ಷಿಣೆಯನ್ನು ಸ್ವೀಕರಿಸುತ್ತೇನೆ. ನನ್ನ ಬುದ್ಧಿಯಿಂದಾಗಲೀ, ನನ್ನ ಬಾಹು, ಹಸ್ತಗಳಿಂದ ಸ್ವೀಕರಿಸುತ್ತಿಲ್ಲ ಎಂದು ಭಾವ.)

23. **ಆದಿತ್ಯೋಪಸ್ಥಾನ:** ಆಚಾರ್ಯನು ಮೇಲಿನಂತೆ ದಕ್ಷಿಣೆ ಸ್ವೀಕಾರಾನಂತರ ಕುಮಾರನನ್ನು ಈ ಮಂತ್ರದಿಂದ ಎಬ್ಬಿಸಬೇಕು.

**ಮಂತ್ರ:** ಉದಾಯುಷಾ ಸ್ವಾಯುಷೋದೋಷಧೀನಾಗ್ಂ ರಸೇನೋತ್ಪರ್ಜನ್ಯಸ್ಯ ಶುಷ್ಮೇಣೋದಸ್ಥಾಮಮೃತಾಗ್ಂ ಅನು॥

ಈ ಮಂತ್ರವನ್ನು ಕುಮಾರನಿಂದಲೂ ಹೇಳಿಸಬೇಕು.

(ತಾತ್ಪರ್ಯ: ದೇವತೆಗಳನ್ನು ಕುರಿತು ನನ್ನ ಸ್ವಂತವಾದ ನೂರು ವರ್ಷಗಳ ಆಯುಸ್ಸಿನೊಂದಿಗೆ ಮತ್ತು ಬಲಕ್ಕೆ ಕಾರಣವಾದ ಓಷಧಿರಸಗಳೊಡನೆ ಮಳೆಗೆ ಸಮಾನವಾದ ಬಲದೊಂದಿಗೆ ಮೇಲಕ್ಕೆ ಏಳುತ್ತೇನೆ ಎಂದು ಅರ್ಥ.)

ಮುಂದಿನ ಹತ್ತು ಮಂತ್ರಗಳಿಂದ ಆಚಾರ್ಯನು ವಟುವನ್ನು ಆದಿತ್ಯನ ಅಭಿಮುಖವಾಗಿ ನಿಲ್ಲಿಸುತ್ತಾನೆ. ಉಪಸ್ಥಾನವೆಂದರೆ ಮಂತ್ರಪೂರ್ವಕವಾಗಿ ದೇವತೆಯ ಬಳಿ ನಿಲ್ಲುವುದು (ಹೆಚ್ಚಿನ ವಿವರಗಳಿಗೆ ಭಾಗ-1ರ II-31ನೇ ಪ್ಯಾರಾ ನೋಡಿರಿ).

**ಮಂತ್ರ:** ತಚ್ಚಕ್ಷುರ್ದೇವಹಿತಂ ಪುರಸ್ತಾತ್ ಚ್ಛುಕ್ರಮುಚ್ಚರತ್। ಪಶ್ಯೇಮ ಶರದಶ್ಶತಂ। ಜೀವೇಮ ಶರದಶ್ಶತಂ। ನಂದಾಮ ಶರದಶ್ಶತಂ। ಮೋದಾಮ ಶರದಶ್ಶತಂ।

ಭವಾಮ ಶರದಶ್ಶತಂ। ಶೃಣವಾಮ ಶರದಶ್ಶತಂ। ಪ್ರಬ್ರವಾಮ ಶರದಶ್ಶತಂ।

ಅಜೀತಾ ಸ್ಯಾಮ ಶರದಶ್ಶತಂ। ಜ್ಯೋಕ್ಚ ಸೂರ್ಯಂ ದೃಶೇ॥

(ತಾತ್ಪರ್ಯ: ಇಲ್ಲಿ ಆದಿತ್ಯನು (ಸೂರ್ಯನು) ಒಬ್ಬ ದೇವತೆಯೆಂದೂ ದೇವತೆಗಳಿಗೆ ಒಡೆಯನಾದ ಇಂದ್ರನಿಂದ ಸೂರ್ಯನು ಜಗತ್ತಿಗೇ ನೇತ್ರಸ್ಥಾನದಲ್ಲಿ ಇಡಲ್ಪಟ್ಟಿದ್ದಾನೆಂದೂ ಹೊಗಳಿದೆ. ಅಂತಹ ಪೂರ್ವದಿಕ್ಕಿನಲ್ಲಿ ಹುಟ್ಟುವ ಪರಿಶುದ್ಧ ಜ್ಯೋತಿಸ್ವರೂಪನಾದ ಸೂರ್ಯನನ್ನು ನೂರಾರು ವರ್ಷ ನೋಡೋಣ. ಹಾಗೆ ಮಾಡುತ್ತ ನೂರು ವರ್ಷಗಳನ್ನು ಆನಂದದಿಂದಲೂ, ಐಶ್ವರ್ಯದಿಂದಲೂ, ಇಂದ್ರಿಯ ಪಾಟವವುಳ್ಳವರಾಗಿಯೂ, ಪುತ್ರ ಪೌತ್ರರಿಂದ ಕೂಡಿದವರಾಗಿ, ಸಮಸ್ತ ಉಪದ್ರವರಹಿತರಾಗಿ ಬಾಳೋಣ.)

24. **ಕಾಮ್ಯವಿಧಿ:** ಉಪನೀತವಾದ ವಟುವು ಆಚಾರ್ಯನಲ್ಲಿ ವೇದಶಾಸ್ತ್ರಾದಿಗಳನ್ನು ಸಾಂಗವಾಗಿ ಅಧ್ಯಯನಮಾಡಲೆಂಬ ಆಶೆಯಿಂದ (ಕಾಮದಿಂದ) ಆಚಾರ್ಯನು ಕುಮಾರನ ಬಲಗೈಯನ್ನು ಹಿಡಿದು ಈ ಕೆಳಗಿನ ಮಂತ್ರವನ್ನು ಹೇಳುತ್ತಾನೆ. ಇದೇ ಕಾಮ್ಯವಿಧಿ.

**ಮಂತ್ರ:** ಯಸ್ಮಿನ್ಭೂತಂ ಚ ಭವ್ಯಂ ಚ ಸರ್ವೇ ಲೋಕಾಸ್ಸಮಾಹಿತಾಃ। ತೇನ ಗೃಹ್ಣಾಮಿ ತ್ವಾಮಹಂ ಮಹ್ಯಂ ಗೃಹ್ಣಾಮಿ ತ್ವಾಮಹಂ ಪ್ರಜಾಪತಿನಾ ತ್ವಾ ಮಹ್ಯಂ ಗೃಹ್ಣಾಮಿ (ನಾರಾಯಣ) ಶರ್ಮನ್॥

(ತಾತ್ಪರ್ಯ: ಯಾವ ಪರಮಾತ್ಮನಲ್ಲಿ ಭೂತಭವಿಷ್ಯದ್ವರ್ತಮಾನ ಕಾಲಗಳು ಇವೆಯೋ, ಯಾವನಲ್ಲಿ ಎಲ್ಲ ಲೋಕಗಳೂ ಇವೆಯೋ ಅಂತಹ ಪರಮಾತ್ಮನ ಆದೇಶದಂತೆ ನಿನ್ನನ್ನು ಗ್ರಹಣಮಾಡುತ್ತಿದ್ದೇನೆ. ನಾನು ನಿನಗೆ ಎಲ್ಲ ಶಾಸ್ತ್ರವನ್ನೂ ಹೇಳಿಕೊಡುತ್ತೇನೆ ಎಂದು ಆಚಾರ್ಯನು ಭರವಸೆ ನೀಡುತ್ತಾನೆ.)

ಈ ಕಾಮ್ಯವಿಧಿಯಲ್ಲಿ ತಂದೆಯೇ ವಿದ್ವಾಂಸನಾಗಿದ್ದರೆ ಮೇಲಿನಂತೆ ಮಾಡಬಹುದು. ಇಲ್ಲದಿದ್ದರೆ ಬೇರೆ ವಿದ್ವಾಂಸರುಗಳಿಂದಲೂ ಕುಮಾರನ ಹಸ್ತಗ್ರಹಣ ಮಾಡಿಸಬಹುದು.

25. **ಸಮಿದಾಧಾನ (ಅಗ್ನಿಕಾರ್ಯ):** ಉಪನೀತನಾದ ವಟುವು ನಿತ್ಯವೂ ಎರಡುಬಾರಿ ಆಚರಿಸಬೇಕಾದ ಈ ವಿಧಿಯ ವಿವರಗಳನ್ನು ಭಾಗ-1ರ II - 33ನೇ ಪ್ಯಾರಾದಲ್ಲಿ ಕೊಟ್ಟಿದ್ದೇವೆ. ಸಸ್ವರಮಂತ್ರ ಮತ್ತು ಆಚರಣೆಯ ಕ್ರಮವನ್ನು ಈ ಗ್ರಂಥದ ಕೊನೆಯಲ್ಲಿ ಪ್ರತ್ಯೇಕವಾಗಿ ಕೊಟ್ಟಿರುತ್ತೇವೆ.

26. **ಅನುಶಾಸನ:** ವಟುವು ಅಗ್ನಿಕಾರ್ಯ ಮಾಡಿದಮೇಲೆ ಆಚಾರ್ಯನು ಬ್ರಹ್ಮಚಾರೀವ್ರತಗಳನ್ನು ಬೋಧಿಸುತ್ತಾನೆ. ಎಲ್ಲಕ್ಕೂ ಕುಮಾರನು "ಬಾಢಮ್" (ಹೌದು, ಹಾಗೆಯೇ ಇರುತ್ತೇನೆ) ಎಂದು ಪ್ರತಿವಚನವನ್ನು ನುಡಿಯುತ್ತಾನೆ. ಆ ಮಂತ್ರಗಳು ಹೀಗಿವೆ:

| | **ಆಚಾರ್ಯ** | **ಕುಮಾರ** |
| --- | --- | --- |
| (i) | ಬ್ರಹ್ಮಚಾರ್ಯಸಿ।<br>(ನೀನು ಬ್ರಹ್ಮಚಾರಿಯಾಗಿದ್ದೀಯೆ) | ಬಾಢಮ್। (ಅಸ್ಮಿ)<br>(ಹೌದು, ಆಗಿದ್ದೇನೆ) |
| (ii) | ಅಪೋಶಾನ।<br>(ನನ್ನ ಅನುಜ್ಞೆಯನ್ನು ಹೊಂದಿ ನೀರನ್ನು ಕುಡಿ; ಸಂಧ್ಯಾದಿಗಳನ್ನು ಮಾಡತಕ್ಕದ್ದು) | ಬಾಢಮ್। (ಅಶ್ನಾಮಿ)<br>(ಹಾಗೇ ಮಾಡುತ್ತೇನೆ) |
| (iii) | ಕರ್ಮ ಕುರು।<br>(ನಾನು ಹೇಳಿದ ಕೆಲಸಗಳನ್ನು ಮಾಡು) | ಬಾಢಮ್। (ತಥಾ ಕರೋಮಿ)<br>(ಆಗಲಿ, ಮಾಡುತ್ತೇನೆ) |
| (iv) | ಮಾ ಸುಷುಪ್ಥಾಃ।<br>(ಆಚಾರ್ಯರಿಗಿಂತ ಮುಂಚೆ ಮಲಗಬೇಡ ಮತ್ತು ಅವರು ಎದ್ದ ನಂತರ ಏಳಬೇಡ) | ಬಾಢಮ್। (ತಥಾ ನ ಸ್ವಪಾಮಿ)<br>(ಹಾಗೇ ಆಗಲಿ) |
| (v) | ಭಿಕ್ಷಾಚರ್ಯಂ ಚರ।<br>(ನಿನ್ನನ್ನು ಯಾರಾದರೂ ಭೋಜನಕ್ಕೆ ಆಹ್ವಾನಿಸಿದರೆ ನನಗೋಸ್ಕರವಾಗಿ ಭಿಕ್ಷೆಯನ್ನು ಎತ್ತಬೇಕು) | ಬಾಢಮ್। (ಚರಾಮಿ)<br>(ಹಾಗೇ ಆಗಲಿ) |

| | |
|---|---|
| (vi) ಆಚಾರ್ಯಾಧೀನೋ ಭವ। | ಬಾಢಮ್। (ಭವಾಮಿ) |
| (ನನ್ನ ಅಧೀನನಾಗಿಯೇ ಇರುವುದು. ನನ್ನ ಅನುಮತಿ ಇಲ್ಲದೆ ಯಾವ ಅಧ್ಯಾಪನ, ಯಾಜನ ಪ್ರತಿಗ್ರಹಗಳನ್ನೂ ಮಾಡಬಾರದು) | (ಹಾಗೇ ಆಗಲಿ) ಭವದ್ಭಿಃ ಅನುಜ್ಞಾತಸ್ಸನ್ನೇವ ಯಾಜನಾದಿ ಕರ್ಮ ಕರೋಮಿ |

ಹೀಗೆ ಆಚಾರ್ಯನ ಅನುಶಾಸನಗಳನ್ನು ಒಪ್ಪಿಕೊಂಡ ವಟುವು ಹಾಗೆಯೇ ನಡೆದುಕೊಂಡು ಗುರುಗಳ ಪೂರ್ಣಾನುಗ್ರಹಕ್ಕೆ ಪಾತ್ರನಾಗಿ ಮುಂದೆ ಶ್ರೇಯಃ ಪರಂಪರೆಗಳನ್ನು ಪಡೆದುಕೊಳ್ಳಬೇಕು. ಇದೇ ಉಪನಯನ ಸಂಸ್ಕಾರದ ಪರಮ ಲಾಭ. ಈ ವಟುಧರ್ಮಗಳನ್ನು ಉಲ್ಲಂಘನೆಮಾಡುವುದಂತಿರಲಿ, ಅದರ ಯೋಚನೆಯು ಕೂಡ ಮನಸ್ಸಿನಲ್ಲಿ ಸುಳಿಯದಂತೆ ಕಟ್ಟುನಿಟ್ಟಾಗಿ ಆಶ್ರಮ ಧರ್ಮಾಚರಣೆಯನ್ನು ಆಚಾರ್ಯನು ಹೇಳಿದಂತೆ ಪಾಲಿಸಬೇಕು.

27. **ಭಿಕ್ಷಾಸ್ವೀಕಾರ:** ಮೇಲಿನ ಅನುಶಾಸನಗಳಲ್ಲಿ ಐದನೆಯ ನಿಯಮವಾಗಿ 'ಭಿಕ್ಷಾಚರ್ಯಂ ಚರ' ಎಂದು ಆಚಾರ್ಯನ ಅಪ್ಪಣೆಯ ಅನುಸಾರವಾಗಿ ಕುಮಾರನು ಭಿಕ್ಷೆಯನ್ನು ಎತ್ತುತ್ತಾನೆ. ಈ ಕಾರ್ಯಕ್ರಮದ ವಿವರಣೆಯನ್ನು ಭಾಗ-1ರ II-35ನೇ ಪ್ಯಾರಾದಲ್ಲಿ ಕೊಟ್ಟಿರುತ್ತೇವೆ. ಅದರಂತೆ ಮಾತೃಭಿಕ್ಷಾಪೂರ್ವಕವಾಗಿ ಕುಮಾರನು ಭಿಕ್ಷಾಚರ್ಯೆ ಮಾಡುವುದು. ಬರಿದಾದ ಭಿಕ್ಷಾಪಾತ್ರೆಯಲ್ಲಿ ಭಿಕ್ಷೆ ಎತ್ತಬಾರದು. ಭಿಕ್ಷೆ ಎತ್ತಿದ ಮೇಲೆ ಎಲ್ಲವನ್ನೂ ಆಚಾರ್ಯರ ಮುಂದೆ ಇಟ್ಟು "ಇದು ಭಿಕ್ಷೆಯಾಗಿದೆ" ಎಂದು ಹೇಳಬೇಕು. ಆಗ ಆಚಾರ್ಯನು ಒಳ್ಳೆಯ ಭಿಕ್ಷುವು — "ಸುಭೈಕ್ಷಂ" ಎಂದು ಹೇಳುತ್ತಾನೆ. ಹೀಗೆ ಮೂರು ದಿನಗಳೂ ಅಕ್ಕಿ ಮುಂತಾದ ಹಸೀ ಪದಾರ್ಥಗಳನ್ನು ಭಿಕ್ಷೆ ಎತ್ತಿ ನಾಲ್ಕನೇ ದಿನದಿಂದ ಅನ್ನವೇ ಮುಂತಾದ ಪಕ್ವಪದಾರ್ಥಗಳ ಭಿಕ್ಷೆ ಎತ್ತಬೇಕು ಎನ್ನುವುದು ಶಾಸ್ತ್ರಸಮ್ಮತವು.

28. **ಪಾಲಾಶಕರ್ಮ:** ಈ ಕರ್ಮವನ್ನು ಉಪನಯನವಾದ ನಾಲ್ಕನೆಯ ದಿನ ಊರಿನ ಪೂರ್ವ ಅಥವಾ ಉತ್ತರದಿಕ್ಕಿಗೆ ಉಪನಯನಾಗ್ನಿಸಮೇತ ಹೋಗಿ ಅಲ್ಲಿ ಒಂದು ಮುತ್ತುಗದ ಮರದ ಕೆಳಗೆ ಗಣಪತಿಪೂಜಾಪೂರ್ವಕ ಪುಣ್ಯಾಹ ಮಾಡಿ ಕೊಂಡು, ಅಲ್ಲೇ ಚರುವನ್ನು ಮಾಡಿಕೊಂಡು ಪ್ರಣವ, ಶ್ರದ್ಧಾ, ಮೇಧಾ ಸಿದ್ಧ್ಯರ್ಥ ವಾಗಿ ಪ್ರಣವ, ಶ್ರದ್ಧಾ, ಮೇಧಾ ಪೂಜಾಪೂರ್ವಕ ಹೋಮಾದಿಗಳನ್ನು ಮಾಡಿ, ದಂಡಾದಿ ವಿಸರ್ಜನೆ ಮಾಡಿ ಬರಬೇಕು. ಈಗಿನ ಕಾಲದಲ್ಲಿ ಕಾಲಸ್ಥಳಾವಕಾಶಗಳು ದುರ್ಲಭವಾಗಿರುವುದರಿಂದ ಗೃಹದಲ್ಲಿಯೇ ಹಸೀ ಮಣ್ಣಿನಿಂದ ಒಂದು ಕಟ್ಟೆಯನ್ನು

(ಮೂರು ಮೆಟ್ಟಿಲಿರುವಂತೆ ಚಚ್ಚೌಕವಾಗಿ) ಹಲಗೆಯ ಮೇಲೆ ಮಾಡಿ ಅದರ ಮಧ್ಯದಲ್ಲಿ ಒಂದು ಹಸಿಯ ಎಲೆ ಇರುವ ಮುತ್ತುಗದ ಕೊಂಬೆ ಸಿಕ್ಕಿಸಿ ಅದನ್ನೇ ಮರವೆಂದು ಭಾವಿಸಿ ಪೂಜಾದಿಗಳನ್ನು ಮಾಡಬಹುದಾಗಿರುತ್ತದೆ. ಇದರ ಮುಂದೆ ಒಂದು ಬಾಳೆ ಎಲೆಯ ಮೇಲೆ ಅಕ್ಕಿಯನ್ನು ಹಾಕಿ ಮೇಲ್ಮುಖವಾಗಿ, ಪಶ್ಚಿಮದಿಂದ ಪ್ರಾಕ್‌ಸಂಸ್ಥವಾಗಿ ಮೂರು ಭಾಗಮಾಡಿಕೊಂಡು ಅದರಲ್ಲಿ ಪ್ರಣವ, ಶ್ರದ್ಧಾ, ಮೇಧಾದೇವತೆಗಳ ಆವಾಹನಾದಿ ಪೂಜೆಗಳನ್ನು ಮಾಡಬೇಕು. ಆವಾಹನಾದಿ ಮಂತ್ರಗಳು ಹೀಗಿವೆ.

ಪ್ರಾಣಾನಾಮ್ಯ। ಏವಂ..... ಶುಭತಿಥೌ। ಮಮ ಕುಮಾರಸ್ಯ ಆಯುಷ್ಯಾಭಿ ವೃದ್ಧ್ಯರ್ಥಂ ಮೇಧಾಜನನ ಸಿದ್ಧ್ಯರ್ಥಂ ಪಾಲಾಶಕರ್ಮ ಕರಿಷ್ಯೇ।

ಪಶ್ಚಿಮದ ಕೊನೆಯಿಂದ ಪೂರ್ವದ ಕಡೆಗೆ ಅಕ್ಕಿಗುಡ್ಡೆಗಳಲ್ಲಿ ಕ್ರಮವಾಗಿ ಪ್ರಣವ, ಶ್ರದ್ಧಾ, ಮೇಧಾದೇವತೆಗಳ ಪೂಜೆ ಮಾಡಬೇಕು.

### (i) ಪ್ರಣವದೇವತಾ ಮಂತ್ರ:

ಯಶ್ಛಂದಸಾಮೃಷಭೋ ವಿಶ್ವರೂಪಃ। ಛಂದೋಭ್ಯೋಧ್ಯಮೃತಾತ್ಸಂಬಭೂವ। ಸಮೇಂದ್ರೋ ಮೇಧಯಾ ಸ್ಪೃಣೋತು। ಅಮೃತಸ್ಯ ದೇವ ಧಾರಣೋ ಭೂಯಾಸಂ। ಶರೀರಂ ಮೇ ವಿಚರ್ಷಣಂ। ಜಿಹ್ವಾ ಮೇ ಮಧುಮತ್ತಮಾ। ಕರ್ಣಾಭ್ಯಾಂ ಭೂರಿ ವಿಶ್ರುವಂ। ಬ್ರಹ್ಮಣಃ ಕೋಶೋಸಿ ಮೇಧಯಾಪಿಹಿತಃ। ಶ್ರುತಂ ಮೇ ಗೋಪಾಯ।। (ಇತಿ ಪ್ರಥಮ ಸ್ಥಂಡಿಲೇ ಪ್ರಣವಮಾವಾಹ್ಯ।)

### (ii) ಶ್ರದ್ಧಾದೇವತಾ ಮಂತ್ರ:

ಶ್ರದ್ಧಯಾಗ್ನಿಸ್ಸಮಿಧ್ಯತೇ। ಶ್ರದ್ಧಯಾ ವಿಂದತೇ ಹವಿಃ। ಶ್ರದ್ಧಾಂ ಭಗಸ್ಯ ಮೂರ್ಧನಿ। ವಚಸಾ ವೇದಯಾಮಸಿ। ಪ್ರಿಯಗ್ಗ್ಂ ಶ್ರದ್ಧೇ ದದತಃ। ಪ್ರಿಯಗ್ಗ್ಂ ಶ್ರದ್ಧೇ ದಿದಾಸತಃ। ಪ್ರಿಯಂ ಭೋಜೇಷು ಯಜ್ವಸು। ಇದಂ ಮ ಉದಿತಂ ಕೃಧಿ। ಯಥಾ

ದೇವಾ ಅಸುರೇಷು। ಶ್ರದ್ಧಾಮುಗ್ರೇಷು ಚಕ್ರಿರೇ। ಏವಂ ಭೋಜೇಷು ಯಜ್ವಸು। ಅಸ್ಮಾಕಮುದಿತಂ ಕೃಧಿ। ಶ್ರದ್ಧಾಂ ದೇವಾ ಯಜಮಾನಾಃ। ವಾಯುಗೋಪಾ ಉಪಾಸತೇ। ಶ್ರದ್ಧಾಗ್ಂ ಹೃದಯ್ಯಯಾಕೂತ್ಯಾ। ಶ್ರದ್ಧಯಾ ಹೂಯತೇ ಹವಿಃ। ಶ್ರದ್ಧಾಂ ಪ್ರಾತರ್ಹವಾಮಹೇ। ಶ್ರದ್ಧಾಂ ಮಧ್ಯಂದಿನಂಪರಿ। ಶ್ರದ್ಧಾಗ್ಂ ಸೂರ್ಯಸ್ಯ ನಿಮ್ರುಚಿ। ಶ್ರದ್ಧೇ ಶ್ರದ್ಧಾಪಯೇಹ ಮಾ। ಶ್ರದ್ಧಾ ದೇವಾನಧಿವಸ್ತೇ। ಶ್ರದ್ಧಾ ವಿಶ್ವಮಿದಂ ಜಗತ್। ಶ್ರದ್ಧಾಂ ಕಾಮಸ್ಯ ಮಾತರಂ। ಹವಿಷಾ ವರ್ಧಯಾಮಸಿ॥

(ಇತಿ ಶ್ರದ್ಧಾಮಾವಾಹ್ಯ।)

### (ii) ಮೇಧಾದೇವತಾ ಮಂತ್ರಃ

ಮೇಧಾ ದೇವೀ ಜುಷಮಾಣಾನ ಆಗಾದ್ವಿಶ್ವಾಚೀ ಭದ್ರಾ ಸುಮನಸ್ಯಮಾನಾ। ತ್ವಯಾ ಜುಷ್ಟಾ ನುದಮಾನಾದುರುಕ್ತಾನ್ಬೃಹದ್ವದೇಮ ವಿದಥೇ ಸುವೀರಾಃ॥ ತ್ವಯಾ ಜುಷ್ಟ ಋಷಿರ್ಭವತಿ ದೇವಿ ತ್ವಯಾ ಬ್ರಹ್ಮಾಗತ ಶ್ರೀರುತ ತ್ವಯಾ। ತ್ವಯಾ ಜುಷ್ಟಶ್ಚಿತ್ರಂ ವಿಂದತೇ ವಸು ಸಾ ನೋ ಜುಷಸ್ವ ದ್ರವಿಣೋ ನ ಮೇಧೇ। ಮೇಧಾಂ ಮ ಇಂದ್ರೋ ದದಾತು ಮೇಧಾಂ ದೇವೀ ಸರಸ್ವತೀ। ಮೇಧಾಂ ಮೇ ಅಶ್ವಿನಾವುಭಾವಾಧತ್ತಾಂ ಪುಷ್ಕರಸ್ರಜಾ। ಅಪ್ಸರಾಸು ಚ ಯಾ ಮೇಧಾ ಗಂಧರ್ವೇಷು ಚ ಯನ್ಮನಃ। ದೈವೀಂ ಮೇಧಾ ಸರಸ್ವತೀ ಸಾ ಮಾಂ ಮೇಧಾ ಸುರಭಿರ್ಜುಷತಾಗ್ಂ ಸ್ವಾಹಾ। ಆ ಮಾಂ ಮೇಧಾ ಸುರಭಿರ್ವಿಶ್ವರೂಪಾ ಹಿರಣ್ಯವರ್ಣಾ ಜಗತೀಜಗಮ್ಯಾ। ಊರ್ಜಸ್ವತೀ ಪಯಸಾ ಪಿನ್ವಮಾನಾ ಸಾ ಮಾಂ

ಮೇಧಾ ಸುಪ್ರತೀಕಾ ಜುಷಂತಾಮ್। ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋ ದಧಾತು॥ (ಇತಿ ಮೇಧಾಮಾವಾಹ್ಯ।)

ಹೀಗೆ ಆವಾಹನೆ ಮಾಡಿ ಆಸನ ಪಾದ್ಯಾದಿ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಕೊನೆಯಲ್ಲಿ "ಮಮ ಕುಮಾರಸ್ಯ ಮೇಧಾಜನನಸಿದ್ಧಿರಸ್ತ್ವಿತಿ ಭವಂತೋ ಬ್ರುವಂತು" ಎಂದು ಬ್ರಾಹ್ಮಣರನ್ನು ಪ್ರಾರ್ಥಿಸಿ "ಮೇಧಾ ಜನನ ಸಿದ್ಧಿರಸ್ತು" ಎಂದು ಪ್ರತಿವಚನ ಪಡೆಯಬೇಕು. ನಂತರ ವಸ್ತ್ರ, ಮೇಖಲ, ಅಜಿನ, ದಂಡಗಳನ್ನು ವಿಸರ್ಜನೆ ಮಾಡಿ ಬೇರೆ ಹೊಸ ವಸ್ತ್ರ, ಮೇಖಲ, ಅಜಿನ ದಂಡಾದಿಗಳನ್ನು ವಟುವಿಗೆ ಅಶ್ಮಾರೋಹಣದಲ್ಲಿ ಧರಿಸಿದಂತೆ ಉಕ್ತಮಂತ್ರಪೂರ್ವಕ ವಾಗಿ ಧಾರಣೆ ಮಾಡಿಸಬೇಕು.

ಅನಂತರ, ಕಾರ್ಯಾರಂಭದಲ್ಲಿ ಆವಾಹನೆ ಮಾಡಿದ ಇಷ್ಟದೇವತೆ, ಕುಲದೇವತೆ, ನಾಂದೀ, ಮಂಟಪದೇವತೆಗಳಿಗೆ ಉತ್ತರಪೂಜೆಯನ್ನು ಮಾಡಿ ಕಂಕಣವಿಸರ್ಜನೆ ಮಾಡಿಸಬೇಕು.

**ಕಂಕಣವಿಸರ್ಜನೆ: ಸಂಕಲ್ಪ:** ಪೂರ್ವೋಚ್ಚರಿತ.................. ಪ್ರೀತ್ಯರ್ಥಂ ಮಮ ಕುಮಾರಸ್ಯ ಉಪನಯನದೀಕ್ಷಾ ಪರಿಪೂರ್ಣತಾ ಸಿದ್ಧ್ಯರ್ಥಂ ಕಂಕಣ ವಿಸರ್ಜನಂ ಕರಿಷ್ಯೇ।

**ಮಂತ್ರ:** ಕಂಕತೋನಕಂಕತೋಽಥೋಸತೀನು ಕಂಕತಃ।
ದ್ವಾವಿತಿ ಪೃಷೀ ಇತಿ ನ್ಯಾ ಅದೃಷ್ಟಾ ಅಲಿಪ್ಸತ॥

**ಶ್ಲೋಕ:** ಕಂಕಣಂ ಮೋಚಯಾಮ್ಯದ್ಯ ರಕ್ಷಾಸ್ಮಿ ನ ಕದಾಚನ।
ಮಯಿ ರಕ್ಷಾಂ ಸ್ಥಿರಾಂ ಬಧ್ವಾ ದೇವತ್ವಂ ಗಚ್ಛ ಕಂಕಣ॥

— ಎಂದು ಕಂಕಣದ ಗಂಟನ್ನು ಬಿಚ್ಚಿ ಹಾಲಿನ ಪಾತ್ರೆಯಲ್ಲಿ ಹಾಕಬೇಕು.

ಕುಮಾರನು ಉಟ್ಟಿದ್ದ ವಸ್ತ್ರವನ್ನು ಆಚಾರ್ಯನಿಗೆ ಸಮರ್ಪಿಸಬೇಕು. ಆಚಾರ್ಯನು ಅದನ್ನು ಮಂತ್ರಪೂರ್ವಕವಾಗಿ ಪ್ರತಿಗ್ರಹಣಮಾಡಬೇಕು.

**ಮಂತ್ರ:** ಯಸ್ಯ ತೇ ಪ್ರಥಮವಾಸ್ಯಗ್ಂ ಹರಾಮಸ್ತಂ ತ್ವಾ ವಿಶ್ವೇ ಅವಂತು ದೇವಾಃ। ತಂ ತ್ವಾ ಭ್ರಾತರಃ ಸುವೃಧೋ ವರ್ಧಮಾನಮನುಜಾಯಂತಾಂ ಬಹವಸ್ಸುಜಾತಮ್॥

(ತಾತ್ಪರ್ಯ: ಎಲೈ ವಟುವೇ, ನೀನು ಮೊದಲು ಧರಿಸಿದ್ದ ವಸ್ತ್ರವನ್ನು ತೆಗೆದುಕೊಳ್ಳುತ್ತೇನೆ, ನಿನ್ನನ್ನು ವಿಶ್ವೇದೇವತೆಗಳು ಕಾಪಾಡಲಿ. ನೀನು ಈ ಮಂಗಳಕರವಾದ ದ್ವಿಜತ್ವವನ್ನು ಹೊಂದಿರುವಂತೆ ನಿನ್ನ ಸೋದರರೂ ದ್ವಿಜತ್ವವನ್ನು ಹೊಂದಿ ಪ್ರವರ್ಧಮಾನಕ್ಕೆ ಬರಲಿ. "ಹೇ ಗುರೋ, ವಾಸಸ್ತೇ ದದಾಮಿ" ಎಂದು ಕುಮಾರನು ತನ್ನ ವಸ್ತ್ರಗಳನ್ನು ಕೊಟ್ಟು ನಮಸ್ಕರಿಸಬೇಕು.)

**29.** ಹೀಗೆ ವಸ್ತ್ರ ಕಂಕಣಾದಿ ವಿಸರ್ಜನಾನಂತರ ಸಾಂಪ್ರದಾಯಿಕವಾದ ಫಲ ಪೂಜೆ, ಸಭಾಪೂಜೆ, ಗುರುಪೂಜೆ ಇತ್ಯಾದಿಗಳನ್ನು ಮಾಡಿ ವಟುವಿಗೆ ಆರತಿ ಎತ್ತಿ ಹಿರಿಯರಿಂದ ಆಶೀರ್ವಚನಗಳನ್ನು ಹೇಳಿಸಿ ಪಾರಿತೋಷಕಗಳನ್ನು ಕೊಡಬಹುದು.

**30.** ವಟುವನ್ನು ಮಂಗಳವಾದ್ಯ ವೇದಘೋಷ ಸಮೇತ ಅಶ್ವತ್ಥಕಟ್ಟೆಗೆ ಕರೆದುಕೊಂಡು ಹೋಗಿ ಅಲ್ಲಿ ವೃಕ್ಷರಾಜನೂ ತ್ರಿಮೂರ್ತ್ಯಾತ್ಮನೂ ಆದ ಅಶ್ವತ್ಥನಾರಾಯಣನ ಪೂಜೆಯನ್ನೂ, ದೀಕ್ಷಾಪರಿಪೂರ್ಣಾರ್ಥ ವಸಂತಮಾಧವನ ಪೂಜೆಯನ್ನೂ ಮಾಡಬೇಕು.

**ಮಂತ್ರ:** ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿ ದಧೇ ಪದಮ್।
ಸಮೂಢಮಸ್ಯ ಪಾಗ್ಂಸುರೇ॥

ಈ ಮಂತ್ರದಿಂದ ಒಂದು ಕಲಶದಲ್ಲಿ ವಸಂತಮಾಧವನ ಧ್ಯಾನ ಆವಾಹನಾದಿ ಮಾಡಿ ಷೋಡಶೋಪಚಾರ ಪೂಜೆ ಮಾಡುವುದು. ನೈವೇದ್ಯಕ್ಕೆ ಪಾನಕ, ಕೋಸಂಬರಿ ಇಟ್ಟುಕೊಳ್ಳುವ ಪರಿಪಾಠವಿದೆ. ಪೂಜಾ ನಂತರ ಆ ಕಲಶೋದಕವನ್ನು ವಟು, ತಂದೆತಾಯಿ, ಎಲ್ಲರಿಗೂ

**ಮಂತ್ರ:** ವಸಂತೇನರ್ತುನಾ ದೇವಾಃ। ವಸವಃ ಸ್ತ್ರಿವೃತಾಸ್ತುತಮ್।
ರಥಂತರೇಣ ತೇಜಸಾ। ಹವಿರಿಂದ್ರೇ ವಯೋ ದಧುಃ॥

ಎಂಬ ಮಂತ್ರಪೂರ್ವಕ ಪ್ರೋಕ್ಷಣೆ ಮಾಡಬೇಕು.

ತೀರ್ಥಪ್ರಸಾದಗಳನ್ನು ಎಲ್ಲರಿಗೂ ಕೊಟ್ಟು ಮಂಗಳವಾದ್ಯ ವೇದಘೋಷ ದೊಂದಿಗೆ ಹಿಂತಿರುಗಿ ಬಂದು ವಟುವನ್ನು ಬಾಗಿಲಲ್ಲಿ ಮಣೆಯ ಮೇಲೆ ನಿಲ್ಲಿಸಿ ನೀರಿನಲ್ಲಿ ಕಾಲು ತೊಳೆದು ಇಡುಗಾಯಿ ಹಾಕುವುದು. ನಂತರ ಹಸೆಮಣೆಯಲ್ಲಿ ಕುಮಾರನನ್ನು ಕೂರಿಸಿ ಅವನ ಸಹೋದರಿಯರು ಹಾಲುತುಪ್ಪದಲ್ಲಿ ಕಾಲು ತೊಳೆಯುತ್ತಾರೆ. ಅವರುಗಳಿಗೆ ಅರಿಶಿನಕುಂಕುಮಾದಿಗಳನ್ನು ಉಡುಗೊರೆಯನ್ನೂ ಕೊಡುತ್ತಾರೆ. ಇವೆಲ್ಲ ಕೇವಲ ಶಿಷ್ಟಾಚಾರಕ್ಕೆ ಸಂಬಂಧಪಟ್ಟಿದ್ದು.

31. **ಬ್ರಹ್ಮಭೋಜನ:** ಬ್ರಾಹ್ಮಣ ಸುವಾಸಿನಿಯರಿಗೆ ಭೋಜನ ಸಮಾರಾಧನೆ ನಡೆಯಬೇಕು. ಸಂಪ್ರದಾಯದಂತೆ ವಟುವು ಪರಿಷೇಚನಕ್ಕೆ ಮೊದಲು ನಾಲ್ಕು ಜನ ಬ್ರಾಹ್ಮಣರಿಂದ "ಭವಾನ್ ಭಿಕ್ಷಾಂ ದಧಾತು" ಎಂತಲೂ ನಾಲ್ಕು ಜನ ಮುತ್ತೈದೆಯ ರಿಂದ "ಭವತಿ ಭಿಕ್ಷಾಂ ದೇಹಿ" ಎಂತಲೂ ಭಿಕ್ಷೆ ಎತ್ತಿ ಪೂರ್ವಾಭಿಮುಖವಾಗಿ ಹಾಕಿರುವ ತನ್ನ ಎಲೆಗೆ ಹಾಕಿಕೊಳ್ಳಬೇಕು. ನಂತರ ತನ್ನ ಪಕ್ಕದಲ್ಲಿ ಕುಳಿತಿರುವ ಆಚಾರ್ಯನಿಂದ ಪರಿಷೇಚನ, ಚಿತ್ರಾಹುತಿ ಮಂತ್ರಗಳನ್ನು ಹೇಳಿಸಿಕೊಂಡು ಆಪೋಶನಪೂರ್ವಕ ಪ್ರಾಣಾಹುತಿಗಳನ್ನು ವಿಧಿಪೂರ್ವಕ ತೆಗೆದುಕೊಳ್ಳಬೇಕು. ಮೌನ ದಿಂದ ಖಾರ, ಲವಣವರ್ಜಿತ ಆಹಾರವನ್ನೇ ತೆಗೆದುಕೊಂಡು ಊಟಮುಗಿಸಿ ಉತ್ತರಾಪೋಶನ ತೆಗೆದುಕೊಂಡು ಕೈಕಾಲು ತೊಳೆದುಕೊಳ್ಳಬೇಕು. ನಂತರ ಶುದ್ಧಾಚಮನ ಮಾಡಬೇಕು.

32. **ಭೋಜನ, ತಾಂಬೂಲ ಮತ್ತು ವಟುವಿಗೆ ಆಶೀರ್ವಾದ:** ಭೋಜನಾ ನಂತರ ತಂದೆತಾಯಿ ಮತ್ತು ವಟು ಒಂದು ಹಜಾರದಲ್ಲಿ ಚಾಪೆ ಅಥವಾ ಜಮಖಾನದ ಮೇಲೆ ಬ್ರಾಹ್ಮಣರ ಸಹಿತ ಕುಳಿತುಕೊಂಡು ವಟುವಿಗೆ ವೇದೋಕ್ತ ಆಶೀರ್ವಾದ ಮಾಡಿಸಬೇಕು. ನಂತರ ಬ್ರಾಹ್ಮಣರಿಗೆ ದಕ್ಷಿಣೆ ತಾಂಬೂಲಗಳನ್ನು ಕೊಟ್ಟು ಕರ್ಮವನ್ನು ಭಗವದರ್ಪಣೆ ಮಾಡುವುದು.

ಇಷ್ಟು ಕಲಾಪಗಳನ್ನು ನೆರವೇರಿಸಿದರೆ ಯಥಾಶಕ್ತಿ ಶಾಸ್ತ್ರೀಯವಾಗಿ ಉಪನಯನ ಸಂಸ್ಕಾರವನ್ನು ವಟುವಿಗೆ ಮಾಡಿದಂತೆ ಆಗುತ್ತದೆ ಎಂದು ತಿಳಿಯಬಹುದು. ಸಾಮಾನ್ಯವಾದ ಆಸ್ತಿಕ ಶ್ರದ್ಧೆ ಮತ್ತು ನಂಬಿಕೆ ಉಳ್ಳ ಗೃಹಸ್ಥರಿಗೆ ಮತ್ತು ಪುರೋಹಿತರಿಗೆ ಈ ಅಲ್ಪಗ್ರಂಥವು ಕರ್ಮಶ್ರದ್ಧೆಯನ್ನು ಉಂಟುಮಾಡಿದರೆ ನಮ್ಮ ಶ್ರಮ ಸಾರ್ಥಕ ಎಂದು ನಂಬುತ್ತೇವೆ.

॥ ಇತಿ ಶಿವಗ್ಂ ಶಿವಮ್॥

# ಭಾಗ - 3

## ತ್ರಿಕಾಲ ಸಂಧ್ಯಾವಂದನ ಮಂತ್ರಾಃ

ಈ ಭಾಗದಲ್ಲಿ ಬ್ರಹ್ಮಚಾರಿಯು ಪ್ರತಿನಿತ್ಯವೂ ಆಚರಿಸಬೇಕಾದ ಸಂಧ್ಯಾವಂದನೆ, ಅಗ್ನಿಕಾರ್ಯ ಮತ್ತು ಬ್ರಹ್ಮಯಜ್ಞ ಇವುಗಳ ಸ್ಥೂಲಪರಿಚಯವನ್ನೂ ಮತ್ತು ಆಚರಿಸುವ ಕ್ರಮವನ್ನು ಸಸ್ವರಮಂತ್ರಗಳೊಂದಿಗೆ ಕೊಟ್ಟಿರುತ್ತೇವೆ. ಒಂದೆರಡುಬಾರಿ ತಿಳಿದವರಿಂದ ಈ ನಿತ್ಯಕರ್ಮಗಳನ್ನು ಹೇಳಿಸಿಕೊಂಡ ನಂತರ ಪುಸ್ತಕದ ಸಹಾಯದಿಂದ ಮಾಡುತ್ತ ಇದ್ದರೆ ಹಾಗೆಯೇ ಮಂತ್ರಗಳು ಕಂಠಸ್ಥವಾಗುತ್ತವೆ. ಈ ಕೆಳಗಿನ ಕೆಲವು ವಿಷಯಗಳನ್ನು ವಟುಗಳು ಗಮನಿಸಬೇಕು:

(i) 'ಸಂಧ್ಯಾವಂದನೆ' ಎಂದರೆ ಸಂಧ್ಯೆಯಕಾಲದಲ್ಲಿ ಆಚರಿಸುವ ಕರ್ಮವು. ಒಂದು ದಿನದಲ್ಲಿ ಪ್ರಾತಃಸಂಧ್ಯೆ, ಮಾಧ್ಯಂದಿನ ಸಂಧ್ಯೆ ಮತ್ತು ಸಾಯಂಸಂಧ್ಯೆ ಎಂದು ಮೂರು ಸಂಧ್ಯೆಗಳು (ಸಂಗಮ ಕಾಲಗಳು) ಇರುತ್ತವೆ. ಈ ಸಂಧ್ಯಾಕಾಲಗಳಲ್ಲಿ 'ಸಂಧ್ಯಾವಂದನೆ'(ಸಂಧ್ಯಾ ಉಪಾಸನೆ)ಯನ್ನು ಬಿಟ್ಟು ಬೇರೆ ಏನನ್ನೂ ಮಾಡಬಾರದು.

**ಸಂಧ್ಯಾವಂದನೆಗೆ ಮುಖ್ಯಕಾಲಗಳು:**

(ii) **ಪ್ರಾತಃಸಂಧ್ಯೆ:** ಸೂರ್ಯೋದಯಕ್ಕೆ ಮುಂಚಿನ ಮೂರು ಘಟಿಕಾ ಎಂದರೆ 24 x 3 = 72 ನಿಮಿಷಗಳು. (1 ಘಂ. 24 ನಿಮಿಷಗಳು) ಇಲ್ಲಿಂದ ಸೂರ್ಯೋದಯದ ನಂತರ 48 ನಿಮಿಷಗಳವರೆಗೆ ಮುಖ್ಯಕಾಲ.

**ಅ) ಮಾಧ್ಯಾಹ್ನಿಕ ಸಂಧ್ಯೆ:** ಹಗಲಿನ ಮಧ್ಯದ ಮೂರು ಘಟಿಕಾಕಾಲ (ಮಧ್ಯಾಹ್ನ 12 ಘಂಟೆಯಿಂದ 1 ಘಂಟೆ 24 ನಿಮಿಷಗಳವರೆಗೆ) ಮುಖ್ಯಕಾಲ.

**ಆ) ಸಾಯಂಸಂಧ್ಯೆ:** ಸೂರ್ಯಾಸ್ತಕ್ಕಿಂತ 12 ನಿಮಿಷ ಮುಂಚೆ ಆರಂಭವಾಗಿ ಅಸ್ತವಾದ ನಂತರ ಮೂರು ಘಳಿಗೆಗಳು (1 ಘಂ. 24 ನಿಮಿಷಗಳವರೆಗೆ) ಮುಖ್ಯಕಾಲ.

**ಇ)** ಮುಖ್ಯಕಾಲವೆಂದರೆ ಅರ್ಘ್ಯಪ್ರದಾನ ಮಾಡಬೇಕಾದ ಕಾಲ ಎಂದರ್ಥ.

(iii) ಪ್ರಾತಃಸಂಧ್ಯೋಪಾಸನೆಗೆ ಸ್ನಾನದ ಆವಶ್ಯಕತೆ ಇದೆ. ಮಧ್ಯಾಹ್ನ ಮತ್ತು ಸಾಯಂ ಸಂಧ್ಯೋಪಾಸನೆಗೆ ಮತ್ತೆ ಸ್ನಾನದ ಆವಶ್ಯಕತೆ ಇಲ್ಲ. ಮೈಲಿಗೆಯಾಗಿದ್ದರೆ ಸ್ನಾನ ಮಾಡಿ ಮಾಡಬೇಕು.

(iv) ಉಷಃಕಾಲದಲ್ಲಿ ಶೌಚ ಸ್ನಾನಾದಿಗಳನ್ನು ಮುಗಿಸಿ ಬ್ರಹ್ಮಚಾರಿಗಳು ಕೌಪೀನದೊಂದಿಗೆ ಎರಡು ಶುಭ್ರವಸ್ತ್ರಗಳನ್ನು ಧರಿಸಬೇಕು. ಹಣೆಗೆ ಗೋಪಿಚಂದನ ಅಥವಾ ವಿಭೂತಿ/ತಿಲಕಗಳನ್ನುನ್ನಿಟ್ಟುಕೊಂಡು ಜಟಾಬದ್ಧರಾಗಿರಬೇಕು.

(v) ಪೂರ್ವಾಭಿಮುಖವಾಗಿ ಮಣೆ ಅಥವಾ ಚಾಪೆ ಮೇಲೆ ಕುಳಿತು ಬಲ ಭಾಗಕ್ಕೆ ಪಂಚಪಾತ್ರೆಯನ್ನೂ ಅದರ ಪಕ್ಕದಲ್ಲಿ ಎಡಭಾಗಕ್ಕೆ ಅರ್ಘ್ಯದ ಪಾತ್ರೆಯನ್ನೂ ಇಟ್ಟುಕೊಳ್ಳಬೇಕು.

(vi) ಸಂಧ್ಯಾವಂದನೆಯನ್ನು ಆಚರಿಸದಿದ್ದರೆ ಬೇರೆ ಯಾವ ಕರ್ಮಗಳ ಅಧಿಕಾರ ಸಿದ್ಧಿಯಾಗುವುದಿಲ್ಲ. ಹಾಗೆ ಮಾಡಿದ ಕರ್ಮಫಲವನ್ನೂ ನೀಡುವುದಿಲ್ಲ.

(vii) ಅಶೌಚ ಬಂದಾಗಲೂ ಸಂಧ್ಯೆಯನ್ನು ಆಚರಿಸಲೇಬೇಕು. ಸಂಧ್ಯಾಸಂಕಲ್ಪ ಮಾಡಿ ಅರ್ಘ್ಯವನ್ನು ಕೊಟ್ಟು ಮಾನಸಿಕವಾಗಿಯೇ ಸಂಧ್ಯಾವಂದನೆ ಮಾಡಬೇಕು.

(viii) ಪ್ರಯಾಣಕಾಲಗಳಲ್ಲಿ ಸಂಧ್ಯಾಕಾಲ ಪ್ರಾಪ್ತವಾದಾಗ ಮನಸ್ಸಿನಲ್ಲೇ ವಿಷ್ಣು ಸ್ಮರಣೆ ಮಾಡಿ ಸಂಧ್ಯಾಮಂತ್ರಗಳನ್ನು ಜಪಮಾಡಬೇಕು. ಅನಾರೋಗ್ಯ ಕಾಲದಲ್ಲಿ ಬಿಸಿನೀರಿನಲ್ಲಿ ಮಾಡಬಹುದು. ಏಳಲೂ ಆಗದಿದ್ದರೆ ಬೇರೆ ಯಾರಾದರೂ ಕರ್ತೃವಿನ ಬದಲಿಗೆ ಮಾಡಬಹುದು. ಹಾಗೆ ಮಾಡುವಾಗ ಸಂಕಲ್ಪಕಾಲದಲ್ಲಿ "ಸಂಧ್ಯಾನುಷ್ಠಾನ ಅಶಕ್ತಸ್ಯ ಯಜಮಾನಸ್ಯ ಉಪಾತ್ತ ಸಮಸ್ತದುರಿಕ್ಷಯದ್ವಾರಾ.... ಸಂಧ್ಯಾಮುಪಾಸ್ಯೆ" ಎಂದು ಹೇಳಿಕೊಳ್ಳ ಬೇಕು. ಕರ್ಮಸಮರ್ಪಣ ಕಾಲದಲ್ಲಿ ಸೂಕ್ತ ಬದಲಾವಣೆ ಮಾಡಿ ಕೊಳ್ಳಬೇಕು. (ಅಶಕ್ತಸ್ಯ ಅಸ್ಯಯಜಮಾನಸ್ಯ ಕೃತೇ ಆಚರಿತ... ಸಂಧ್ಯಾವಂದನೇನ ಭಗವಾನ್..... ಮಸ್ತು)

(ix) "ಸಂಧ್ಯಾವಂದನೆ ಸಾವಿರ ಪಾಠ" ಎಂದು ಹೇಳುವುದುಂಟು. ಇದು ದಿಟವೇ. ಈ ಗ್ರಂಥಭಾಗದಲ್ಲಿ ಕೊಟ್ಟಿರುವ ಸಂಧ್ಯಾವಂದನ ಕ್ರಮ ಅತ್ಯಂತ ಸರಳವೂ, ಸಂಧ್ಯಾಮುಖ್ಯಾಂಗಗಳಾದ ಮಾರ್ಜನೆ, ಅರ್ಘ್ಯ, ಗಾಯತ್ರೀ ಜಪ ಮತ್ತು ಉಪಸ್ಥಾನ ಇವುಗಳನ್ನು ಒಳಗೊಂಡು ಬೇರೆ ಮುದ್ರಾದಿ ತಾಂತ್ರಿಕ ಭಾಗಗಳನ್ನು ಬಿಡಲಾಗಿದೆ. ಈ ಕ್ರಮವನ್ನು ನೋಡಿದ ಹಿರಿಯರು ಇಷ್ಟು ಸಾಕೆಂದು ಹೇಳಿದ್ದರಿಂದ ಆ ಪಾಠವನ್ನು ಇಲ್ಲಿ ಕೊಡಲಾಗಿದೆ. ಬೇರೆ ಯಾವ ಪಾಠವಾದರೂ ಸರಿಯೆ. ಒಟ್ಟಿನಲ್ಲಿ ಸಂಧ್ಯಾವಂದನೆಯನ್ನು ಬಿಡದೆ ಎಲ್ಲರೂ ಆಚರಿಸಬೇಕು ಎಂದು ಆಶಿಸುತ್ತೇವೆ.

## ಪ್ರಾತಃಸಂಧ್ಯಾವಂದನೆ

ಮೇಲಿನ ಪ್ಯಾರಾ (೩) (iii), (iv) ಮತ್ತು (v) ರಲ್ಲಿ ತಿಳಿಸಿರುವಂತೆ ಬ್ರಹ್ಮಚಾರಿಯು ಸಿದ್ಧನಾಗಿ ಸಂಧ್ಯಾವಂದನೆಯನ್ನು ವಿಷ್ಣುಸ್ಮರಣೆಯೊಂದಿಗೆ ಪ್ರಾರಂಭಿಸ ಬೇಕು.

## 1. ಶ್ರೀವಿಷ್ಣುಸ್ಮರಣಮ್

ಅಪವಿತ್ರಃ ಪವಿತ್ರೋ ವಾ ಸರ್ವಾವಸ್ಥಾಂ ಗತೋಽಪಿ ವಾ।
ಯಃ ಸ್ಮರೇತ್ ಪುಂಡರೀಕಾಕ್ಷಂ ಸ ಬಾಹ್ಯಾಭ್ಯಂತರಃ ಶುಚಿಃ॥

ಮಂತ್ರವನ್ನು ಹೇಳಿಕೊಂಡು ಉದ್ಧರಣೆ ನೀರಿನಿಂದ ಅಂಗುಷ್ಠ, ಮಧ್ಯಮ, ಅನಾಮಿಕ ಬೆರಳುಗಳ ಸಹಾಯದಿಂದ ಶಿರಸ್ಸಿಗೂ ಮತ್ತು ಶರೀರಕ್ಕೂ ಪ್ರೋಕ್ಷಿಸಿ ಕೊಳ್ಳುವುದು. ಮೂರು ಬಾರಿ "ಪುಂಡರೀಕಾಕ್ಷ" ಎಂದು ಹೇಳಿಕೊಳ್ಳುವುದು.

## 2. ಆಚಮನಮ್

ಕೇಶವಾಯ ಸ್ವಾಹಾ। ನಾರಾಯಣಾಯ ಸ್ವಾಹಾ। ಮಾಧವಾಯ ಸ್ವಾಹಾ। ಎಂದು ಉಚ್ಚರಿಸಿ ಬಲಹಸ್ತದಿಂದ ಮೂರುಸಲ ಮೂರು ಉದ್ಧರಣೆ ನೀರನ್ನು ಬ್ರಹ್ಮತೀರ್ಥ ದಿಂದ ಕುಡಿಯುವುದು (ನೀರು ಕುಡಿಯುವಾಗ ಶಬ್ದಮಾಡಬಾರದು).

**ಗೋವಿಂದಾಯ ನಮಃ।**

ಎಂದು ಉಚ್ಚರಿಸಿ ಬಲಹಸ್ತದಿಂದ ನೀರನ್ನು ಕೆಳಕ್ಕೆ ಬಿಡುವುದು.

| | |
|---|---|
| ವಿಷ್ಣವೇ ನಮಃ। | ಎಡಹಸ್ತದಿಂದ ಬಲಹಸ್ತವನ್ನು ಸವರುವುದು |
| ಮಧುಸೂದನಾಯ ನಮಃ। | ತುಟಿಯ ಮೇಲುಭಾಗವನ್ನು ಸ್ಪರ್ಶಿಸುವುದು |
| ತ್ರಿವಿಕ್ರಮಾಯ ನಮಃ। | ತುಟಿಯ ತಳಭಾಗವನ್ನು ಸ್ಪರ್ಶಿಸುವುದು |
| ವಾಮನಾಯ ನಮಃ। | ಬಲಕೆನ್ನೆಯನ್ನು ಸ್ಪರ್ಶಿಸುವುದು |
| ಶ್ರೀಧರಾಯ ನಮಃ। | ಎಡಕೆನ್ನೆಯನ್ನು ಸ್ಪರ್ಶಿಸುವುದು |
| ಹೃಷೀಕೇಶಾಯ ನಮಃ। | ಬಲಮಂಡಿಯನ್ನು ಸ್ಪರ್ಶಿಸುವುದು |
| ಪದ್ಮನಾಭಾಯ ನಮಃ। | ಎಡಮಂಡಿಯನ್ನು ಸ್ಪರ್ಶಿಸುವುದು |
| ದಾಮೋದರಾಯ ನಮಃ। | ನೆತ್ತಿಯನ್ನು ಸ್ಪರ್ಶಿಸುವುದು |
| ಸಂಕರ್ಷಣಾಯ ನಮಃ। | ಗಲ್ಲದ ಕೆಳಭಾಗವನ್ನು ಸ್ಪರ್ಶಿಸುವುದು |
| ವಾಸುದೇವಾಯ ನಮಃ। | ಮೂಗಿನ ಬಲಭಾಗವನ್ನು ಸ್ಪರ್ಶಿಸುವುದು |
| ಪ್ರದ್ಯುಮ್ನಾಯ ನಮಃ। | ಮೂಗಿನ ಎಡಭಾಗವನ್ನು ಸ್ಪರ್ಶಿಸುವುದು |
| ಅನಿರುದ್ಧಾಯ ನಮಃ। | ಬಲಗಣ್ಣನ್ನು ಸ್ಪರ್ಶಿಸುವುದು |
| ಪುರುಷೋತ್ತಮಾಯ ನಮಃ। | ಎಡಗಣ್ಣನ್ನು ಸ್ಪರ್ಶಿಸುವುದು |
| ಅಧೋಕ್ಷಜಾಯ ನಮಃ। | ಬಲಗಿವಿಯನ್ನು ಸ್ಪರ್ಶಿಸುವುದು |
| ನಾರಸಿಂಹಾಯ ನಮಃ। | ಎಡಗಿವಿಯನ್ನು ಸ್ಪರ್ಶಿಸುವುದು |

| | |
|---|---|
| ಅಚ್ಯುತಾಯ ನಮಃ। | ನಾಭಿಯನ್ನು ಸ್ಪರ್ಶಿಸುವುದು |
| ಜನಾರ್ದನಾಯ ನಮಃ। | ಹೃದಯವನ್ನು ಸ್ಪರ್ಶಿಸುವುದು |
| ಉಪೇಂದ್ರಾಯ ನಮಃ। | ಶಿರಸ್ಸನ್ನು ಸ್ಪರ್ಶಿಸುವುದು |
| ಹರಯೇ ನಮಃ। | ಬಲಭುಜವನ್ನು ಸ್ಪರ್ಶಿಸುವುದು |
| ಶ್ರೀಕೃಷ್ಣಾಯ ನಮಃ। | ಎಡಭುಜವನ್ನು ಸ್ಪರ್ಶಿಸುವುದು |

**3. ಆಚಮನವನ್ನು ಎರಡು ಬಾರಿ ಮಾಡಬೇಕು.**

**4. ಪ್ರಾಣಾಯಾಮ:**

ಪ್ರಣವಸ್ಯ ಪರಬ್ರಹ್ಮ ಋಷಿಃ। ಪರಮಾತ್ಮಾ ದೇವತಾ।
ದೈವೀ ಗಾಯತ್ರೀ ಛಂದಃ। ಪ್ರಾಣಾಯಾಮೇ ವಿನಿಯೋಗಃ॥

ಓಂ ಭೂಃ। ಓಂ ಭುವಃ। ಓಗ್ಂ ಸುವಃ। ಓಂ ಮಹಃ। ಓಂ ಜನಃ। ಓಂ ತಪಃ। ಓಗ್ಂ ಸತ್ಯಮ್। ಓಂ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಧಿಯೋ ಯೋ ನಃ ಪ್ರಚೋದಯಾತ್॥ ಓಮಾಪೋ ಜ್ಯೋತೀ ರಸೋಽಮೃತಂ ಬ್ರಹ್ಮ ಭೂರ್ಭುವಸ್ಸುವರೋಮ್॥

ಹೀಗೆ ಮಂತ್ರವನ್ನು ಉಚ್ಚರಿಸಿ ಮೂರು ಸಲ ಪ್ರಾಣಾಯಾಮವನ್ನು ಮಾಡುವುದು (ಪ್ರಾಣಾಯಾಮದ ಕ್ರಮವನ್ನು ಬಲ್ಲವರಿಂದ ಹೇಳಿಸಿಕೊಳ್ಳಬೇಕು).

**5. ಸಂಕಲ್ಪ:** ಮಮೋಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಪ್ರಾತಸ್ಸಂಧ್ಯಾಮುಪಾಸ್ಯೇ॥

ಎಂದು ಹೇಳಿ ಒಂದು ಉದ್ಧರಣೆ ನೀರನ್ನು ಬಿಡುವುದು.

**6. ಮಾರ್ಜನಮ್:**

ಆಪೋ ಹಿ ಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ। ಮಹೇ ರಣಾಯ ಚಕ್ಷಸೇ। ಯೋ ವಶ್ಶಿವತಮೋ ರಸಸ್ತಸ್ಯ ಭಾಜಯತೇಹ ನಃ। ಉಶತೀರಿವ

ಮಾತರಃ। ತಸ್ಮಾ ಅರಂಗಮಾಮ ವೋ ಯಸ್ಯ ಕ್ಷಯಾಯ ಜಿನ್ವಥ। ಆಪೋ ಜನಯಥಾ ಚ ನಃ॥

ಮಂತ್ರವನ್ನು ಹೇಳಿಕೊಂಡು ಉದ್ಧರಣೆಯ ನೀರಿನಿಂದ ಪಾದಗಳಿಗೂ ಶರೀರಕ್ಕೂ ಮತ್ತು ಶಿರಸ್ಸಿಗೂ ಪ್ರೋಕ್ಷಿಸಿಕೊಳ್ಳುವುದು.

### 7. ಜಲಪ್ರಾಶನಮ್

ಬಲಗೈಯಲ್ಲಿ ಒಂದು ಉದ್ಧರಣೆ ನೀರನ್ನು ಹಾಕಿಕೊಂಡು ಈ ಕೆಳಗಿನ ಮಂತ್ರವನ್ನು ಉಚ್ಚರಿಸಿ ಕುಡಿಯುವುದು. (ಕುಡಿಯುವಾಗ ಶಬ್ದಮಾಡಬಾರದು.)

ಸೂರ್ಯಶ್ಚ ಮಾ ಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ। ಪಾಪೇಭ್ಯೋ ರಕ್ಷಂತಾಮ್। ಯದ್ರಾತ್ರಿಯಾ ಪಾಪಮಕಾರ್ಷಮ್। ಮನಸಾ ವಾಚಾ ಹಸ್ತಾಭ್ಯಾಮ್। ಪದ್ಭ್ಯಾಮುದರೇಣ ಶಿಶ್ನಾ। ರಾತ್ರಿಸ್ತದವಲುಂಪತು। ಯತ್ಕಿಂ ಚ ದುರಿತಂ ಮಯಿ। ಇದಮಹಂ ಮಾಮಮೃತಯೋನೌ। ಸೂರ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ॥

### 8. ಆಚಮನಮ್

### 9. ಪುನರ್ಮಾರ್ಜನಮ್

ದಧಿಕ್ರಾವ್ಣ್ಣೋ ಅಕಾರಿಷಂ ಜಿಷ್ಣೋರಶ್ವಸ್ಯ ವಾಜಿನಃ।
ಸುರಭಿ ನೋ ಮುಖಾಕರತ್ಪ್ರಣ ಆಯೂಗ್‌ಂಷಿ ತಾರಿಷತ್॥

ಆಪೋ ಹಿಷ್ಠಾ ಮಯೋಭುವಸ್ತಾ ನ ಊರ್ಜೇ ದಧಾತನ। ಮಹೇ ರಣಾಯ ಚಕ್ಷಸೇ। ಯೋ ವಶ್ಶಿವತಮೋ ರಸಸ್ತಸ್ಯ ಭಾಜಯತೇಹ ನಃ। ಉಶತೀರಿವ

ಮಾತರಃ। ತಸ್ಮಾ ಅರಂಗಮಾಮ ವೋ ಯಸ್ಯಕ್ಷಯಾಯ ಜಿನ್ವಥ। ಆಪೋ ಜನಯಥಾ ಚ ನಃ॥

ಹಿರಣ್ಯವರ್ಣಾಃ ಶುಚಯಃ ಪಾವಕಾ ಯಾಸು ಜಾತಃ ಕಶ್ಯಪೋ ಯಾಸ್ವಿಂದ್ರಃ। ಅಗ್ನಿಂ ಯಾ ಗರ್ಭಂ ದಧಿರೇ ವಿರೂಪಾಸ್ತಾ ನ ಆಪಶ್ಶಗ್ಗ್ ಸ್ಯೋನಾ ಭವಂತು॥

ಯಾಸಾಗ್ಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯಂ ಜನಾನಾಮ್। ಮಧುಶ್ಚುತಶ್ಶುಚಯೋ ಯಾಃ ಪಾವಕಾಸ್ತಾ ನ ಆಪಶ್ಶಗ್ಗ್ ಸ್ಯೋನಾ ಭವಂತು॥

ಯಾಸಾಂ ದೇವಾ ದಿವಿ ಕೃಣ್ವಂತಿ ಭಕ್ಷಂ ಯಾ ಅಂತರಿಕ್ಷೇ ಬಹುಧಾ ಭವಂತಿ। ಯಾಃ ಪೃಥಿವೀಂ ಪಯಸೋಂದಂತಿ ಶುಕ್ರಾಸ್ತಾ ನ ಆಪಶ್ಶಗ್ಗ್ ಸ್ಯೋನಾ ಭವಂತು॥

ಶಿವೇನ ಮಾ ಚಕ್ಷುಷಾ ಪಶ್ಯತಾಪಶ್ಶಿವಯಾ ತನುವೋಪಸ್ಪೃಶತ ತ್ವಚಂ ಮೇ। ಸರ್ವಾಗ್ಂ ಅಗ್ನೀಗ್ಂ ರಪ್ಸುಷದೋ ಹುವೇ ವೋ ಮಯಿ ವರ್ಚೋ ಬಲಮೋಜೋ ನಿಧತ್ತ॥

ಮಂತ್ರಗಳನ್ನು ಪಠಿಸುತ್ತ ಉದ್ಧರಣೆ ನೀರನ್ನು ಶಿರಸ್ಸಿಗೆ ಪ್ರೋಕ್ಷಿಸಿಕೊಳ್ಳುವುದು.

## 10. ಪಾಪನಿರಸನಮ್

ದ್ರುಪದಾದಿವ ಮುಂಚತು। ದ್ರುಪದಾದಿವೇನ್ಮುಮುಚಾನಃ। ಸ್ವಿನ್ನಃ ಸ್ನಾತ್ವೀ ಮಲಾದಿವ। ಪೂತಂ ಪವಿತ್ರೇಣೇವಾಜ್ಯಮ್। ಆಪಶ್ಶುಂಧಂತು ಮೈನಸಃ॥

ಒಂದು ಉದ್ಧರಣೆ ನೀರನ್ನು ತೆಗೆದುಕೊಂಡು ಮಂತ್ರವನ್ನು ಪಠಿಸಿ ಆ ನೀರನ್ನು ಒಮ್ಮೆ ಮೂಸಿ ಎಡಭಾಗದ ನೆಲದ ಮೇಲೆ ದೂರಕ್ಕೆ ಎರಚಬೇಕು ಹಾಗೂ ಆ ನೀರನ್ನು ನೋಡಬಾರದು. ಇದರಿಂದ ಪಾಪದೋಷಗಳು ಪರಿಹೃತವಾಗುತ್ತವೆ.

**11. ಆಚಮನಮ್**

**12. ಪ್ರಾಣಾಯಾಮಃ**

**13. ಸಂಕಲ್ಪಃ**

ಮಮೋಪಾತ್ತಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಪ್ರಾತಃ ಸಂಧ್ಯಾಯಾಃ ಅರ್ಘ್ಯಪ್ರದಾನಂ ಕರಿಷ್ಯೇ॥

**14. ಅರ್ಘ್ಯಪ್ರದಾನಮ್**

ಓಂ ಭೂರ್ಭುವಸ್ಸುವಃ। ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।
ಧಿಯೋ ಯೋ ನಃ ಪ್ರಚೋದಯಾತ್॥

ಈ ಮಂತ್ರವನ್ನು ಪಠಿಸಿ ಅರ್ಧಬಾಗಿದ ಶರೀರವುಳ್ಳವನಾಗಿ, ಎರಡು ಅಂಗೈ ಜೋಡಿಸಿ ಬೊಗಸೆಯಲ್ಲಿ ನೀರನ್ನು ಮೂರು ಸಲ ಪ್ರತ್ಯೇಕ ಪ್ರತ್ಯೇಕ ಬಿಡಬೇಕು. ಹೀಗೆ ಮೂರು ಅರ್ಘ್ಯಗಳನ್ನು ಕೊಟ್ಟ ಬಳಿಕ ಕಾಲಾತೀತವಾಗಿದ್ದರೆ ಇನ್ನೊಂದು ಅರ್ಘ್ಯವನ್ನು ಪ್ರಾಯಶ್ಚಿತ್ತಕ್ಕಾಗಿ ಕೊಡುವುದು.

ಕಾಲಾತಿಕ್ರಮಣದೋಷಪರಿಹಾರಾರ್ಥಂ ಪ್ರಾಯಶ್ಚಿತ್ತಾರ್ಘ್ಯಪ್ರದಾನಂ ಕರಿಷ್ಯೇ॥

ಎಂದು ಹೇಳಿ ಗಾಯತ್ರೀ ಮಂತ್ರವನ್ನು ಉಚ್ಚರಿಸಿ ಇನ್ನೊಂದು ಅರ್ಘ್ಯವನ್ನು ಕೊಡುವುದು. (ಈ ಪ್ರಾಯಶ್ಚಿತ್ತಾರ್ಥ ಅಧಿಕಾರ್ಘ್ಯವನ್ನು ಮೊದಲೇ ಕೊಟ್ಟು ನಂತರ ಸಂಧ್ಯಾಂಗವಾದ ಅರ್ಘ್ಯಪ್ರದಾನ ಮಾಡುವ ಪಾಠವೂ ಇದೆ.)

ಉತ್ತಿಷ್ಠ ದೇವಿ ಗಂತವ್ಯಂ ಪುನರಾಗಮನಾಯ ಚ।
ಪ್ರಸೀದ ದೇವಿ ತುಷ್ಟ್ಯರ್ಥಂ ಪ್ರವಿಶ್ಯ ಹೃದಯಂ ಮಮ॥

ಈ ಮಂತ್ರವನ್ನು ಪಠಿಸಿ ದಕ್ಷಿಣ ಹಸ್ತವನ್ನು ಸೂರ್ಯನ ಎದುರಿಗೆ ತೋರಿಸುತ್ತ ಹೃದಯವನ್ನು ಸ್ಪರ್ಶಿಸಿಕೊಳ್ಳುವುದು.

ಅಸಾವಾದಿತ್ಯೋ ಬ್ರಹ್ಮ॥ ಅಹಂ ಬ್ರಹ್ಮಾಸ್ಮಿ॥ ಬ್ರಹ್ಮೈವಾಹಮಸ್ಮಿ॥

ಈ ಮಂತ್ರವನ್ನು ಪಠಿಸಿ ಉದ್ಧರಣೆ ನೀರನ್ನು ತೆಗೆದುಕೊಂಡು ಒಂದು ಪ್ರದಕ್ಷಿಣೆ ಮಾಡಿ, ಆ ನೀರನ್ನು ತಲೆಯ ಸುತ್ತಲೂ ಸುತ್ತಿಸಿ ಕೆಳಕ್ಕೆ ಬಿಡುವುದು.

**15. ಆಚಮನಮ್**

**16. ಭೂತ ಮತ್ತು ಆಸನಶುದ್ಧಿಃ** ಉತ್ತರೀಯದಿಂದ ಒಂದು ನೂಲು ಎಳೆಯನ್ನು ತೆಗೆದುಕೊಂಡು ಅದನ್ನು ನೆನೆಸಿ ಬೆರಳಿನಿಂದ ಮಣೆ, ಚಾಪೆಯ ಕೆಳಗೆ ನೆಲಕ್ಕೆ ಒತ್ತಿಹಿಡಿದುಕೊಂಡು ಈ ಶ್ಲೋಕಗಳನ್ನು ಹೇಳುವುದು.

ವಿಷ್ಣುಶಕ್ತಿ ಸಮುದ್ಭೂತೇ ಸರ್ವವರ್ಣೇ ಮಹೀತಲೇ
ಅನೇಕ ರತ್ನ ಸಂಭೂತೇ ಭೂಮಿದೇವಿ ನಮೋಽಸ್ತು ತೇ॥

ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿಸಂಸ್ಥಿತಾಃ।
ಯೇ ಭೂತಾ ವಿಘ್ನಕರ್ತಾರಃ ತೇ ನಶ್ಯಂತು ಶಿವಾಜ್ಞಯಾ॥

ಅಪಕ್ರಾಮಂತು ಭೂತಾದ್ಯಾಃ ಸರ್ವೇ ತೇ ಭೂಮಿಭಾರಕಾಃ।
ಸರ್ವೇಷಾಮವಿರೋಧೇನ ಬ್ರಹ್ಮಕರ್ಮ ಸಮಾರಭೇ॥

ಪೃಥ್ವಿ ತ್ವಯಾ ಧೃತಾ ಲೋಕಾ ದೇವಿ ತ್ವಂ ವಿಷ್ಣುನಾ ಧೃತಾ।
ತ್ವಂ ಚ ಧಾರಯ ಮಾಂ ದೇವಿ ಪವಿತ್ರಂ ಕುರು ಚಾಸನಮ್।
ಲಂ ಪೃಥಿವ್ಯೈ ನಮಃ। ಆಸನಂ ಕಲ್ಪಯಾಮಿ।

ಎಂದು ಹೇಳುತ್ತ ಕೈಯಲ್ಲಿರುವ ನೂಲನ್ನು ತನ್ನ ಕೆಳಕ್ಕೆ ಹಾಕಿಕೊಳ್ಳಬೇಕು.

## 17. ಗಾಯತ್ರೀಹೃದಯಮ್

ಓಮಿತ್ಯೇಕಾಕ್ಷರಂ ಬ್ರಹ್ಮ। ಅಗ್ನಿರ್ದೇವತಾ ಬ್ರಹ್ಮ ಇತ್ಯಾರ್ಷಮ್। ಗಾಯತ್ರಂ ಛಂದಂ ಪರಮಾತ್ಮಂ ಸರೂಪಮ್। ಸಾಯುಜ್ಯಂ ವಿನಿಯೋಗಮ್॥

ಆಯಾತು ವರದಾದೇವೀ ಅಕ್ಷರಂ ಬ್ರಹ್ಮ ಸಂಮಿತಮ್। ಗಾಯತ್ರೀಂ ಛಂದಸಾಂ ಮಾತೇದಂ ಬ್ರಹ್ಮ ಜುಷಸ್ವ ಮೇ। ಯದಹ್ನಾತ್ಕುರುತೇ ಪಾಪಂ ತದಹ್ನಾತ್ಪ್ರತಿಮುಚ್ಯತೇ। ಯದ್ರಾತ್ರಿಯಾತ್ಕುರುತೇ ಪಾಪಂ ತದ್ರಾತ್ರಿಯಾತ್ಪ್ರತಿ-ಮುಚ್ಯತೇ। ಸರ್ವವರ್ಣೇ ಮಹಾದೇವಿ ಸಂಧ್ಯಾವಿದ್ಯೇ ಸರಸ್ವತಿ। ಓಜೋಽಸಿ ಸಹೋಽಸಿ ಬಲಮಸಿ ಭ್ರಾಜೋಽಸಿ ದೇವಾನಾಂ ಧಾಮನಾಮಾಸಿ ವಿಶ್ವಮಸಿ ವಿಶ್ವಾಯುಸ್ಸರ್ವಮಸಿ ಸರ್ವಾಯುರಭಿಭೂರೋಂ ಗಾಯತ್ರೀಮಾವಾಹಯಾಮಿ ಸಾವಿತ್ರೀಮಾವಾಹಯಾಮಿ ಸರಸ್ವತೀಮಾವಾಹಯಾಮಿ ಛಂದರ್ಷೀನಾವಾಹ-

ಯಾಮಿ ಶ್ರಿಯಮಾವಾಹಯಾಮಿ ಗಾಯತ್ರಿಯಾ ಗಾಯತ್ರೀಚ್ಛಂದೋ ವಿಶ್ವಾಮಿತ್ರ

ಋಷಿಸ್ಸವಿತಾದೇವತಾಗ್ನಿರ್ಮುಖಂ ಬ್ರಹ್ಮಾ ಶಿರೋ ವಿಷ್ಣುರ್ಹೃದಯಗ್ಂ

ರುದ್ರಶ್ಶಿಖಾ ಪೃಥಿವೀ ಯೋನಿಃ ಪ್ರಾಣಾಪಾನವ್ಯಾನೋದಾನಸಮಾನಾ ಸಪ್ರಾಣಾ

ಶ್ವೇತವರ್ಣಾ ಸಾಂಖ್ಯಾಯನ ಸಗೋತ್ರಾ ಗಾಯತ್ರೀ ಚತುರ್ವಿಗ್ಂಶತ್ಯಕ್ಷರಾ ತ್ರಿಪದಾ

ಷಟ್‌ಕುಕ್ಷಿಃ ಪಂಚಶೀರ್ಷೋಪನಯನೇ ವಿನಿಯೋಗಃ॥

('ಓಜೋಽಸಿ'ಯಿಂದ ಹಿಡಿದು ಈ ಮಂತ್ರಗಳಿಗೆ ಕೈ ಕರಣಗಳಿವೆ. ಇವನ್ನು ಆಚಾರ್ಯರಿಂದ ಒಂದೆರೆಡು ಬಾರಿ ಹೇಳಿಸಿಕೊಳ್ಳಬೇಕು.)

18. **ಪ್ರಾಣಾಯಾಮ** (ಕ್ರ. ಸಂ. 4 ರಂತೆ) ಮತ್ತು **ಸಂಕಲ್ಪ** (ಕ್ರ.ಸಂ. 26)

ಮಮೋಪಾತ್ತ-ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ-ಪ್ರೀತ್ಯರ್ಥಂ ಪ್ರಾತಃ ಸಂಧ್ಯಾ ಯಾಂ ಯಥಾ ಸಂಭವ - ಗಾಯತ್ರೀಮಂತ್ರಜಪಂ ಕರಿಷ್ಯೇ॥

19. **ಕರನ್ಯಾಸಃ**

ಓಂ ತತ್ಸವಿತುರ್ಬ್ರಹ್ಮಾತ್ಮನೇ ಅಂಗುಷ್ಠಾಭ್ಯಾಂ ನಮಃ।
ವರೇಣ್ಯಂ ವಿಷ್ಣ್ವಾತ್ಮನೇ ತರ್ಜನೀಭ್ಯಾಂ ನಮಃ
ಭರ್ಗೋ ದೇವಸ್ಯ ರುದ್ರಾತ್ಮನೇ ಮಧ್ಯಮಾಭ್ಯಾಂ ನಮಃ।
ಧೀಮಹಿ ಸತ್ಯಾತ್ಮನೇ ಅನಾಮಿಕಾಭ್ಯಾಂ ನಮಃ।
ಧೀಯೋ ಯೋ ನಃ ಜ್ಞಾನಾತ್ಮನೇ ಕನಿಷ್ಠಿಕಾಭ್ಯಾಂ ನಮಃ।
ಪ್ರಚೋದಯಾತ್ಸರ್ವಾತ್ಮನೇ ಕರತಲ ಕರಪೃಷ್ಠಾಭ್ಯಾಂ ನಮಃ॥

20. **ಹೃದಯಾದಿನ್ಯಾಸಃ**

ಓಂ ತತ್ಸವಿತುರ್ಬ್ರಹ್ಮಾತ್ಮನೇ ಹೃದಯಾಯ ನಮಃ।
ವರೇಣ್ಯಂ ವಿಷ್ಣ್ವಾತ್ಮನೇ ಶಿರಸೇ ಸ್ವಾಹಾ।
ಭರ್ಗೋದೇವಸ್ಯ ರುದ್ರಾತ್ಮನೇ ಶಿಖಾಯೈ ವಷಟ್।
ಧೀಮಹಿ ಸತ್ಯಾತ್ಮನೇ ಕವಚಾಯ ಹುಮ್।
ಧಿಯೋ ಯೋ ನಃ ಜ್ಞಾನಾತ್ಮನೇ ನೇತ್ರತ್ರಯಾಯ ವೌಷಟ್।
ಪ್ರಚೋದಯಾತ್ಸರ್ವಾತ್ಮನೇ ಅಸ್ತ್ರಾಯ ಫಟ್॥

21. **ದಿಗ್ಬಂಧಃ**

ಭೂರ್ಭುವಸ್ಸುವರೋಮಿತಿ ದಿಗ್ಬಂಧಃ॥

22. **ಧ್ಯಾನಮ್:**

ಮುಕ್ತಾವಿದ್ರುಮ ಹೇಮ ನೀಲ ಧವಲಚ್ಛಾಯೈರ್ಮುಖೈಸ್ತ್ರೀಕ್ಷಣೈ-
ರ್ಯುಕ್ತಾಮಿಂದುಕಲಾನಿಬದ್ಧರತ್ನಮಕುಟಾಂ ತತ್ತ್ವಾರ್ಥವರ್ಣಾತ್ಮಿಕಾಮ್।
ಗಾಯತ್ರೀಂ ವರದಾಭಯಾಂಕುಶಕಶಾಂ ಶುಭ್ರಂ ಕಪಾಲಂ ಗದಾಂ
ಶಂಖಂಚಕ್ರಮಥಾರವಿಂದಯುಗಲಂ ಹಸ್ತೈರ್ವಹಂತೀಂ ಭಜೇ॥

23. **ಗಾಯತ್ರಿ-ಮಂತ್ರ-ಜಪಃ**

ಓಂ ಭೂರ್ಭುವಸ್ಸುವಃ। ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ।
ಧಿಯೋ ಯೋ ನಃ ಪ್ರಚೋದಯಾತ್॥

ಪೂರ್ವಾಭಿಮುಖವಾಗಿ ನಿಂತುಕೊಂಡು, ಅಖಂಡವಾಗಿಯೇ ಗಾಯತ್ರೀಮಂತ್ರ ಜಪವನ್ನು ಎಣಿಸುತ್ತಲೇ ಮಾಡಬೇಕು. ಅನಾಮಿಕ ಬೆರಳಿನ ಮಧ್ಯದ ಗೆಣ್ಣಿನಿಂದ ಆರಂಭಿಸಿ ಪ್ರದಕ್ಷಿಣೆಯಾಗಿ ಗೆಣ್ಣುಗಳನ್ನು ಆಧಾರಮಾಡಿಕೊಂಡು ಎಣಿಸುತ್ತ ಮೊದಲನೆ ತರ್ಜನೀ ಬೆರಳಿನ ಕೆಳಗಡೆಯ ಗೆಣ್ಣಿನವರೆಗೆ ಎಣಿಸಿದರೆ ಹತ್ತು ಜಪಗಳಾಗುತ್ತವೆ. ಅಲ್ಲಿಂದ ಆರಂಭಿಸಿ ಹಿಂತಿರುಗಿಸಿ ಎಣಿಸುತ್ತ ಅನಾಮಿಕೆಯ ಮಧ್ಯದ ಗೆಣ್ಣಿಗೆ ಬರಬೇಕು. ಇದು ಪುನಃ ಹತ್ತು ಜಪಗಳಾಗುತ್ತವೆ. ಅನಾಮಿಕೆಯ ಮಧ್ಯದ ಗೆಣ್ಣು ಮೇರುವಾಗಿದೆ. ಜಪ ಮಾಡುವಾಗ ಮೇರುವನ್ನು ದಾಟಬಾರದು. ಬಲಹಸ್ತವನ್ನು ನಾಭಿ ಪ್ರದೇಶದಲ್ಲಿ ಇಟ್ಟುಕೊಂಡು ಜಪಿಸಬೇಕು. ಹೀಗೆ ಜಪವನ್ನು 1008 / 108 / 64 / 32 / ಸಲ ಕೊನೆಯ ಪಕ್ಷ 10 ಬಾರಿಯಾದರೂ ಮಾಡಬೇಕು.

24. **ಹೃದಯಾದಿನ್ಯಾಸಃ** (ಮೇಲಿನ ಕ್ರ.ಸಂ. 20ರಂತೆ)

25. **ದಿಗ್ಬಂಧವಿಮೋಚನಮ್**

ಭೂರ್ಭುವಸ್ಸುವರೋಮಿತಿ ದಿಗ್ವಿಮೋಕಃ॥ ತತ್ಸತ್ ಬ್ರಹ್ಮಾರ್ಪಣಮ್॥
ಎಂದು ಒಂದು ಉದ್ಧರಣೆ ನೀರನ್ನು ಬಿಡುವುದು.

26. **ಪ್ರಾತಸ್ಸಂಧ್ಯೋಪಸ್ಥಾನಮ್**

ಸೂರ್ಯಾಭಿಮುಖವಾಗಿ ನಿಂತುಕೊಂಡು ಉಪಸ್ಥಾನ ಮಂತ್ರವನ್ನು ಹೇಳುವುದು.

ಮಿತ್ರಸ್ಯ ಚರ್ಷಣೀ ಧೃತಃ ಶ್ರವೋ ದೇವಸ್ಯ ಸಾನಸಿಮ್। ಸತ್ಯಂ ಚಿತ್ರಶ್ರವಸ್ತಮಮ್॥

ಮಿತ್ರೋ ಜನಾನ್ ಯಾತಯತಿ ಪ್ರಜಾನನ್ಮಿತ್ರೋ ದಾಧಾರ ಪೃಥಿವೀಮುತ ದ್ಯಾಮ್। ಮಿತ್ರಃ ಕೃಷ್ಟೀರನಿಮಿಷಾಭಿಚಷ್ಟೇ ಸತ್ಯಾಯ ಹವ್ಯಂ ಘೃತವದ್ವಿಧೇಮ॥

ಪ್ರ ಸ ಮಿತ್ರ ಮರ್ತೋ ಅಸ್ತು ಪ್ರಯಸ್ವಾನ್, ಯಸ್ತ ಆದಿತ್ಯ ಶಿಕ್ಷತಿ ವ್ರತೇನ। ನ ಹನ್ಯತೇ ನ ಜೀಯತೇ ತ್ವೋತೋ ನೈನಮಗ್ಂಹೋ ಅಶ್ನೋತ್ಯಂತಿತೋ ನ ದೂರಾತ್॥

## 27. ದಿಗ್ದೇವತಾ - ನಮಸ್ಕಾರಃ

ದಿಕ್ಕುಗಳಿಗೂ, ದಿಕ್ಕುಗಳಲ್ಲಿರುವ ಎಲ್ಲ ದೇವತೆಗಳಿಗೂ ಪ್ರತ್ಯೇಕವಾಗಿ ವಂದನೆಯನ್ನು ಸಲ್ಲಿಸುವುದು.

ಓಂ ನಮಃ ಪ್ರಾಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋ ದಕ್ಷಿಣಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮಃ ಪ್ರತೀಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮ ಉದೀಚ್ಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮ ಊರ್ಧ್ವಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋಽಧರಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ

ನಮೋಽವಾಂತರಾಯೈ ದಿಶೇ ಯಾಶ್ಚ ದೇವತಾ ಏತಸ್ಯಾಂ ಪ್ರತಿವಸಂತ್ಯೇತಾಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮಧ್ಯೇ ಯೇ ವಸಂತಿ ತೇ ಮೇ ಪ್ರಸನ್ನಾತ್ಮಾನಶ್ಚಿರಂಜೀವಿತಂ ವರ್ಧಯಂತಿ ನಮೋ ಗಂಗಾಯಮುನಯೋರ್ಮುನಿ-ಭ್ಯಶ್ಚ ನಮೋ ನಮೋ ಗಂಗಾಯಮುನಯೋರ್ಮುನಿಭ್ಯಶ್ಚ ನಮಃ॥

ಓಂ ಸಂಧ್ಯಾಯೈ ನಮಃ। (ಪೂರ್ವ ದಿಕ್ಕು) ಓಂ ಗಾಯತ್ರ್ಯೈ ನಮಃ। (ದಕ್ಷಿಣದಿಕ್ಕು) ಓಂ ಸಾವಿತ್ರ್ಯೈ ನಮಃ। (ಪಶ್ಚಿಮ ದಿಕ್ಕು) ಓಂ ಸರಸ್ವತ್ಯೈ ನಮಃ। (ಉತ್ತರ ದಿಕ್ಕು) ಓಂ ಸರ್ವಾಭ್ಯೋ ದೇವತಾಭ್ಯೋ ನಮಃ। ಓಂ ಮಾತೃಭ್ಯೋ ನಮಃ। ಓಂ ಪಿತೃಭ್ಯೋ ನಮಃ। ಓಂ ಗುರುಭ್ಯೋ ನಮಃ। ಓಂ ದೇವೇಭ್ಯೋ ನಮಃ।

ಓಂ ಕಾಮೋಽಕಾರ್ಷೀನ್ಮನ್ಯುರಕಾರ್ಷೀನ್ನಮೋ ನಮಃ॥

ಪೃಥಿವ್ಯಾಪಸ್ತೇಜೋ ವಾಯುರಾಕಾಶಾತ್।
ಓಂ ನಮೋ ಭಗವತೇ ವಾಸುದೇವಾಯ॥

ಯಾಗ್ಂ ಸದಾ ಸರ್ವಭೂತಾನಿ ಚರಾಣಿ ಸ್ಥಾವರಾಣಿ ಚ ।
ಸಾಯಂ ಪ್ರಾತರ್ನಮಸ್ಯಂತಿ ಸಾ ಮಾ ಸಂಧ್ಯಾ ಅಭಿರಕ್ಷತು।
ಶ್ರೀ ಸಾ ಮಾ ಸಂಧ್ಯಾಭಿರಕ್ಷತು

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ।
ಶಿವಸ್ಯ ಹೃದಯಂ ವಿಷ್ಣುಃ ವಿಷ್ಣೋಶ್ಚ ಹೃದಯಗ್ಂ ಶಿವಃ॥

ಯಥಾ ಶಿವಮಯೋ ವಿಷ್ಣುರೇವಂ ವಿಷ್ಣುಮಯಃ ಶಿವಃ।
ಯಥಾಂತರಂ ನ ಪಶ್ಯಾಮಿ ತಥಾ ಮೇ ಸ್ವಸ್ತಿರಾಯುಷಿ॥

ನಮೋ ಬ್ರಹ್ಮಣ್ಯದೇವಾಯ ಗೋಬ್ರಾಹ್ಮಣಹಿತಾಯ ಚ ।
ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋ ನಮಃ।

ಉತ್ತಮೇ ಶಿಖರೇ ಜಾತೇ ಭೂಮ್ಯಾಂ ಪರ್ವತ ಮೂರ್ಧನಿ।

ಬ್ರಾಹ್ಮಣೇಭ್ಯೋऽಭ್ಯನುಜ್ಞಾತಾ ಗಚ್ಛ ದೇವಿ ಯಥಾಸುಖಮ್। ಸ್ತುತೋ ಮಯಾ

ವರದಾ ವೇದಮಾತಾ ಪ್ರಚೋದಯಂತೀ ಪವನೇ ದ್ವಿಜಾತಾ। ಆಯುಃ ಪೃಥಿವ್ಯಾಂ

ದ್ರವಿಣಂ ಬ್ರಹ್ಮವರ್ಚಸಂ ಮಹ್ಯಂ ದತ್ವಾ ಪ್ರಜಾತುಂ ಬ್ರಹ್ಮಲೋಕಮ್॥

ನಮೋऽಸ್ತ್ವನಂತಾಯ ಸಹಸ್ರಮೂರ್ತಯೇ
ಸಹಸ್ರಪಾದಾಕ್ಷಿಶಿರೋರುಬಾಹವೇ।
ಸಹಸ್ರನಾಮ್ನೇ ಪುರುಷಾಯ ಶಾಶ್ವತೇ
ಸಹಸ್ರಕೋಟಿಯುಗಧಾರಿಣೇ ನಮಃ॥

ಆಕಾಶಾತ್ಪತಿತಂ ತೋಯಂ ಯಥಾ ಗಚ್ಛತಿ ಸಾಗರಮ್।
ಸರ್ವದೇವನಮಸ್ಕಾರಃ ಕೇಶವಂ ಪ್ರತಿಗಚ್ಛತಿ॥

ವಾಸನಾದ್ವಾಸುದೇವಸ್ಯ ವಾಸಿತಂ ತೇ ಜಗತ್ತ್ರಯಮ್।
ಸರ್ವಭೂತ ನಿವಾಸೋऽಸಿ ವಾಸುದೇವ ನಮೋऽಸ್ತು ತೇ।
ಶ್ರೀವಾಸುದೇವ ನಮೋऽಸ್ತು ತೇ॥

ಸರ್ವವೇದೇಷು ಯತ್ಪುಣ್ಯಂ ಸರ್ವತೀರ್ಥೇಷು ಯತ್ಫಲಮ್।
ತತ್ಫಲಂ ಸಮಮಾಪ್ನೋತಿ ಸ್ತುತ್ವಾ ದೇವಂ ಜನಾರ್ದನಮ್।

## 28. ಅಭಿವಾದನಮ್

ಚತುಸ್ಸಾಗರಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು। ಅಭಿವಾದಯೇ। ಆಂಗೀರಸ ಬಾರಹಸ್ಪತ್ಯ ಭಾರದ್ವಾಜ ತ್ರಯಾರ್ಷೇಯ ಪ್ರವರಾನ್ವಿತ ಭಾರದ್ವಾಜ ಸಗೋತ್ರಃ ಆಪಸ್ತಂಬ ಸೂತ್ರಃ ಯಜುಶ್ಶಾಖಾ ಧ್ಯಾಯೀ ಶ್ರೀ ವಿಷ್ಣುಶರ್ಮಾ-ನಾಮಾಹಂ ಅಸ್ಮಿ ಭೋಃ ಅಭಿವಾದಯೇ॥

ಇಲ್ಲಿ ಕೊಟ್ಟಿರುವ ಆಂಗೀರಸ, ಬಾರಹಸ್ಪತ್ಯ, ಭಾರದ್ವಾಜ ಮತ್ತು ವಿಷ್ಣುಶರ್ಮಾ ಎಂಬುದು ಒಂದು ಮಾದರಿಯಷ್ಟೆ. ಈ ಜಾಗಗಳಲ್ಲಿ ತಮ್ಮ ತಮ್ಮ ಗೋತ್ರ, ಪ್ರವರ ಮತ್ತು ಹೆಸರನ್ನು ಹೇಳಿಕೊಂಡು ಮಂತ್ರವನ್ನು ಪಠಿಸಿ ತಮ್ಮ ಪಾದಗಳನ್ನೂ ಮತ್ತು ಭೂಮಿಯನ್ನೂ ಸ್ಪರ್ಶಿಸಬೇಕು.

## 29. ಆಚಮನಮ್ / ಕರ್ಮಸಮರ್ಪಣಮ್

ಯಸ್ಯಸ್ಮೃತ್ಯಾ ಚ ನಾಮೋಕ್ತ್ಯಾ ತಪಸ್ಸಂಧ್ಯಾಕ್ರಿಯಾದಿಷು
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಮ್।
ಮಂತ್ರಹೀನಂ ಕ್ರಿಯಾಹೀನಂ ಭಕ್ತಿಹೀನಂ ಜನಾರ್ದನ
ಯತ್ಕೃತಂ ತು ಮಯಾ ದೇವ ಪರಿಪೂರ್ಣಂ ತದಸ್ತು ಮೇ॥

ಅನೇನ ಪ್ರಾತಸ್ಸಂಧ್ಯಾವಂದನೇನ ಭಗವಾನ್ ಸರ್ವಾತ್ಮಕಃ ಶ್ರೀವಾಸುದೇವಃ ಪ್ರೀಣಾತು॥ ಎಂದು ಪಠಿಸಿ ಕರ್ಮಸಮರ್ಪಣೆಗಾಗಿ ಒಂದು ಉದ್ಧರಣೆ ನೀರನ್ನು ಬಿಡುವುದು.

ಮಧ್ಯೇ ಮಂತ್ರ - ತಂತ್ರ - ಸ್ವರ - ವರ್ಣ - ನ್ಯೂನಾತಿರಿಕ್ತ - ಲೋಪ - ದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಹಾ ಮಂತ್ರಜಪಂ ಕರಿಷ್ಯೇ॥

ಅಚ್ಯುತಾಯ ನಮಃ। ಅನಂತಾಯ ನಮಃ। ಗೋವಿಂದಾಯ ನಮಃ।

ಮೂರು ಸಲ ನಾಮತ್ರಯವನ್ನು ತರ್ಜನಿ, ಮಧ್ಯದ ಬೆರಳು ಮತ್ತು ಅನಾಮಿಕಾ ಇವುಗಳನ್ನು ಹೆಬ್ಬೆಟ್ಟಿನಿಂದ ಸವರುತ್ತ ಉಚ್ಚರಿಸುವುದು.

ಕಾಯೇನ ವಾಚಾ ಮನಸೇಂದ್ರಿಯೈರ್ವಾ ಬುದ್ಧ್ಯಾತ್ಮನಾ ವಾ ಪ್ರಕೃತೇಸ್ಸ್ವಭಾವಾತ್।
ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ॥

ಪುನಃ ಒಂದು ಉದ್ಧರಣೆ ನೀರನ್ನು ಬಿಡುವುದು.

## 30. ಭೂಪ್ರಾರ್ಥನಾ

ಅದ್ಯಾ ನೋ ದೇವ ಸವಿತಃ ಪ್ರಜಾವಥ್ಸಾವೀಸ್ಸೌಭಗಮ್। ಪರಾದುಷ್ಟ್ವಪ್ನಿಯಗ್ಂ ಸುವ। ವಿಶ್ವಾನಿ ದೇವ ಸವಿ-ತರ್ದುರಿತಾನಿ ಪರಾಸುವ। ಯದ್ಭದ್ರಂ ತನ್ಮ ಆಸುವ॥

ಜಪಮಾಡಿದ ಪ್ರದೇಶದಲ್ಲಿ ಒಂದು ಉದ್ಧರಣೆ ನೀರನ್ನು ಬಿಟ್ಟು ಮಧ್ಯಮ ಅನಾಮಿಕ ಬೆರಳುಗಳಿಂದ ಭೂಮಿಯನ್ನು ಸ್ಪರ್ಶಿಸಿ, ಹೃದಯವನ್ನೂ ಮತ್ತು ಕಣ್ಣುಗಳನ್ನೂ ಸ್ಪರ್ಶಿಸಿಕೊಳ್ಳುವುದು.

**ಓಂ ತತ್ಸದ್ಬ್ರಹ್ಮಾರ್ಪಣಮಸ್ತು॥**

**ಇತಿ ಪ್ರಾತಸ್ಸಂಧ್ಯಾವಂದನಮ್॥**

# ಮಾಧ್ಯಾಹ್ನಿಕ ಸಂಧ್ಯಾವಂದನಮ್

1. **ಶ್ರೀವಿಷ್ಣು ಸ್ಮರಣಮ್**

2. **ಆಚಮನಮ್**

3. **ಪ್ರಾಣಾಯಾಮಃ**

4. **ಸಂಕಲ್ಪಃ**

ಮಮೋಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಮಾಧ್ಯಾಹ್ನಿಕ ಸಂಧ್ಯಾಮುಪಾಸ್ಯೇ॥

5. **ಮಾರ್ಜನಮ್**

6. **ಜಲಪ್ರಾಶನಮ್**

ಆಪಃ ಪುನಂತು ಪೃಥಿವೀಂ ಪೃಥಿವೀ ಪೂತಾ ಪುನಾತು ಮಾಮ್। ಪುನಂತು ಬ್ರಹ್ಮಣಸ್ಪತಿರ್ಬ್ರಹ್ಮ ಪೂತಾ ಪುನಾತು ಮಾಮ್। ಯದುಚ್ಛಿಷ್ಟಮಭೋಜ್ಯಂ ಯದ್ವಾ ದುಶ್ಚರಿತಂ ಮಮ। ಸರ್ವಂ ಪುನಂತು ಮಾಮಾಪೋಽಸತಾಂ ಚ ಪ್ರತಿಗ್ರಹಗ್ಂ ಸ್ವಾಹಾ॥

7. **ಆಚಮನಮ್**

8. **ಪುನರ್ಮಾರ್ಜನಮ್**

9. **ಪಾಪನಿರಸನಮ್**

10. **ಆಚಮನಮ್**

11. **ಪ್ರಾಣಾಯಾಮಃ**

12. **ಸಂಕಲ್ಪಃ**

ಮಮೋಪಾತ್ತ - ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ - ಪ್ರೀತ್ಯರ್ಥಂ ಮಾಧ್ಯಾಹ್ನಿಕ - ಸಂಧ್ಯಾರ್ಘ್ಯ - ಪ್ರದಾನಂ ಕರಿಷ್ಯೇ॥ — ಇಲ್ಲಿಯೂ ಕಾಲಾತೀತವಾಗಿದ್ದರೆ ಒಂದು ಪ್ರಾಯಶ್ಚಿತ್ತಾರ್ಘ್ಯವನ್ನು ಗಾಯತ್ರೀಮಂತ್ರದಿಂದ ಕೊಡಬೇಕು.

13. **ಅರ್ಘ್ಯಪ್ರದಾನಮ್**

ಹಗ್ಂಸಶ್ಶುಚಿಷದ್ವಸುರನ್ತರಿಕ್ಷಸದ್ಧೋತಾ ವೇದಿಷದತಿಥಿ

ರ್ದುರೋಣಸತ್। ನೃಷದ್ವರಸದೃತಸದ್ವ್ಯೋಮಸದಬ್ಜಾಗೋಜಾ

ಋತಜಾ ಅದ್ರಿಜಾ ಋತಂ ಬೃಹತ್॥

ಈ ಮಂತ್ರವನ್ನು ಪಠಿಸಿ ಸೂರ್ಯನಿಗೆ ಒಂದು ಸಲ ಅರ್ಘ್ಯವನ್ನು ನೆಟ್ಟಗೆ ನಿಂತು ಕೊಂಡು ಕೊಡುವುದು. ಬಳಿಕ ಪ್ರಾತಃ ಸಂಧ್ಯಾವಂದನೆಯಲ್ಲಿರುವ ಉತ್ತಿಷ್ಠದೇವಿ ಇತ್ಯಾದಿ ಮಂತ್ರಗಳನ್ನು ಹೇಳುವುದು.

14. **ಆಚಮನಮ್**

15. **ಆಸನಶುದ್ಧಿಃ**

16. **ಗಾಯತ್ರೀಹೃದಯಮ್**

17. **ಪ್ರಾಣಾಯಾಮಃ**

18. **ಸಂಕಲ್ಪಃ**

ಮಮೋಪಾತ್ತ - ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ - ಪ್ರೀತ್ಯರ್ಥಂ ಮಾಧ್ಯಾಹ್ನಿಕ - ಸಂಧ್ಯಾ - ಯಥಾಸಂಭವ ಗಾಯತ್ರೀಮಂತ್ರಜಪಂ ಕರಿಷ್ಯೇ॥

19. **ಕರನ್ಯಾಸ**

20. **ದಿಗ್ಬಂಧ**

21. **ಧ್ಯಾನಮ್**

'ಮುಕ್ತಾವಿದ್ರುಮ' ಇತ್ಯಾದಿ

22. **ಗಾಯತ್ರೀಮಂತ್ರಜಪ**

ಮಾಧ್ಯಾಹ್ನಿಕದಲ್ಲಿ ಹೃದಯಪ್ರದೇಶದಲ್ಲಿ ಬಲಹಸ್ತವನ್ನು ಮೇಲುಮುಖವಾಗಿ ಹರಡಿದಂತೆ ಇಟ್ಟುಕೊಂಡು ಗಾಯತ್ರೀಮಂತ್ರಜಪವನ್ನು ಹತ್ತು ಸಂಖ್ಯೆಗೆ ಕಡಿಮೆ ಇಲ್ಲದಂತೆ, 32, 64, 108 ಹೀಗೆ ಯಥಾಶಕ್ತಿ ಮಾಡುವುದು.

23. **ಹೃದಯಾದಿನ್ಯಾಸ**

24. **ದಿಗ್ಬಂಧವಿಮೋಚನಮ್**

25. **ಮಾಧ್ಯಾಹ್ನಿಕ-ಸಂಧ್ಯೋಪಸ್ಥಾನಮ್**

ಆ ಸತ್ಯೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ। ಹಿರಣ್ಯಯೇನ ಸವಿತಾ ರಥೇನಾದೇವೋ ಯಾತಿ ಭುವನಾ ವಿಪಶ್ಯನ್॥

ಉದ್ವಯಂ ತಮಸಸ್ಪರಿ ಪಶ್ಯಂತೋ ಜ್ಯೋತಿರುತ್ತರಮ್। ದೇವಂ ದೇವತ್ರಾ ಸೂರ್ಯಮಗನ್ಮ ಜ್ಯೋತಿರುತ್ತಮಮ್॥

ಉದುತ್ಯಂ ಜಾತವೇದಸಂ ದೇವಂ ವಹನ್ತಿ ಕೇತವಃ। ದೃಶೇ ವಿಶ್ವಾಯ ಸೂರ್ಯಮ್॥

ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ। ಆ ಪ್ರಾ ದ್ಯಾವಾಪೃಥಿವೀ ಅಂತರಿಕ್ಷಗ್ಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ॥

ತಚ್ಚಕ್ಷುರ್ದೇವಹಿತಂ ಪುರಸ್ತಾಚ್ಛುಕ್ರಮುಚ್ಚರತ್। ಪಶ್ಯೇಮ ಶರದಃ ಶತಂ ಜೀವೇಮ ಶರದಃ ಶತಂ ನಂದಾಮ ಶರದಃ ಶತಂ ಮೋದಾಮ ಶರದಃ ಶತಂ ಭವಾಮ ಶರದಃ ಶತಗ್ಂ ಶೃಣವಾಮ ಶರದಃ ಶತಂ ಪ್ರಬ್ರವಾಮ ಶರದಃ ಶತಮಜೀತಾಸ್ಸ್ಯಾಮ ಶರದಃ ಶತಂ ಜ್ಯೋಕ್ಚ ಸೂರ್ಯಂ ದೃಶೇ॥

ಯ ಉದಗಾನ್ಮಹತೋಽರ್ಣವಾದ್ವಿಭ್ರಾಜಮಾನಃ ಸರಿರಸ್ಯ ಮಧ್ಯಾತ್ ಸ ಮಾ ವೃಷಭೋ ಲೋಹಿತಾಕ್ಷಃ ಸೂರ್ಯೋ ವಿಪಶ್ಚಿನ್ಮನಸಾ ಪುನಾತು॥

26. **ದಿಗ್ದೇವತಾ ನಮಸ್ಕಾರಃ**

27. **ಸ್ತುತಿಃ**

28. **ಅಭಿವಾದನಮ್**

29. **ಆಚಮನಮ್**

30. **ಭಗವದರ್ಪಣಮ್**

'ಯಸ್ಯ ಸ್ಮೃತ್ಯಾ ಚ' ಇತ್ಯಾದಿ.

ಅನೇನ ಮಾಧ್ಯಾಹ್ನಿಕಸಂಧ್ಯಾವಂದನೇನ ಭಗವಾನ್
ಸರ್ವಾತ್ಮಕಃ ಶ್ರೀವಾಸುದೇವಃ ಪ್ರೀಣಾತು॥

'ಮಧ್ಯೇ ಮಂತ್ರ ತಂತ್ರ' ಇತ್ಯಾದಿ.

31. **ಭೂಪ್ರಾರ್ಥನಾ**

**॥ ಇತಿ ಮಾಧ್ಯಾಹ್ನಿಕ ಸಂಧ್ಯಾವಂದನಮ್॥**

## ಸಾಯಂ ಸಂಧ್ಯಾವಂದನಮ್

1. **ಶ್ರೀವಿಷ್ಣುಸ್ಮರಣಮ್**
2. **ಆಚಮನಮ್**
3. **ಪ್ರಾಣಾಯಾಮಃ**
4. **ಸಂಕಲ್ಪಃ**

ಮಮೋಪಾತ್ತಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರಪ್ರೀತ್ಯರ್ಥಂ ಸಾಯಂ ಸಂಧ್ಯಾಮುಪಾಸ್ಯೇ॥

5. **ಮಾರ್ಜನಮ್**
6. **ಜಲಪ್ರಾಶನಮ್**

ಅಗ್ನಿಶ್ಚ ಮಾಮನ್ಯುಶ್ಚ ಮನ್ಯುಪತಯಶ್ಚ ಮನ್ಯುಕೃತೇಭ್ಯಃ। ಪಾಪೇಭ್ಯೋ ರಕ್ಷಂತಾಮ್। ಯದಹ್ನಾ ಪಾಪಮಕಾರ್ಷಮ್। ಮನಸಾ ವಾಚಾ ಹಸ್ತಾಭ್ಯಾಮ್।

ಪದ್ಭ್ಯಾಮುದರೇಣ ಶಿಶ್ನಾ। ಅಹಸ್ತದವಲುಂಪತು। ಯತ್ಕಿಂ ಚ ದುರಿತಂ ಮಯಿ।

ಇದಮಹಂ ಮಾಮಮೃತಯೋನೌ। ಸತ್ಯೇ ಜ್ಯೋತಿಷಿ ಜುಹೋಮಿ ಸ್ವಾಹಾ॥

7. **ಆಚಮನಮ್**

8. **ಪುನರ್ಮಾರ್ಜನಮ್**

9. **ಪಾಪನಿರಸನಮ್**

10. **ಆಚಮನಮ್**

11. **ಪ್ರಾಣಾಯಾಮಃ**

12. **ಸಂಕಲ್ಪಃ**

ಮಮೋಪಾತ್ತ ಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಸಾಯಂಸಂಧ್ಯಾಯಾಃ ಅರ್ಘ್ಯಪ್ರದಾನಂ ಕರಿಷ್ಯೇ॥ ಸಾಯಂಸಂಧ್ಯಾರ್ಘ್ಯವನ್ನು ಪಶ್ಚಿಮಾಭಿಮುಖವಾಗಿ ಕುಳಿತುಕೊಂಡು ಕೊಡಬೇಕು. ಕಾಲಾತೀತವಾಗಿದ್ದರೆ ಪ್ರಾಯಶ್ಚಿತ್ತಾರ್ಥ ಒಂದು ಅರ್ಘ್ಯವನ್ನು ಮೊದಲು ಕೊಡುವುದು.

13. **ಅರ್ಘ್ಯಪ್ರದಾನಮ್**

14. **ಆಚಮನಮ್**

15. **ಆಸನಶುದ್ಧಿಃ**

16. **ಗಾಯತ್ರೀ ಹೃದಯಮ್**

17. **ಪ್ರಾಣಾಯಾಮ, ಸಂಕಲ್ಪ**

18. **ಕರನ್ಯಾಸಃ**

19. **ಹೃದಯಾದಿನ್ಯಾಸಃ**

20. **ದಿಗ್ಬಂಧಃ**

21. **ಧ್ಯಾನಮ್ — "ಮುಕ್ತಾವಿದ್ರುಮ" ಇತ್ಯಾದಿ**

22. **ಗಾಯತ್ರೀಮಂತ್ರಜಪಃ**

ಬಲಹಸ್ತವನ್ನು ನಾಸಿಕಾಸಮೀಪದಲ್ಲಿ ಕೆಳಮುಖ ಮಾಡಿಕೊಂಡು ಪಶ್ಚಿಮಾಭಿಮುಖವಾಗಿ ಆಸನದಲ್ಲಿ ಕುಳಿತುಕೊಂಡು ಯಥಾಶಕ್ತಿ ಗಾಯತ್ರೀ ಜಪವನ್ನು ಮಾಡಬೇಕು.

**23. ಹೃದಯಾದಿನ್ಯಾಸಃ**

**24. ದಿಗ್ಬಂಧವಿಮೋಚನಮ್**

**25. ಸಾಯಂ ಸಂಧ್ಯೋಪಸ್ಥಾನಮ್**

ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಡಯ। ತ್ವಾಮವಸ್ಯುರಾಚಕೇ॥ ತತ್ತ್ವಾಯಾಮಿ ಬ್ರಹ್ಮಣಾ ವಂದಮಾನಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ। ಅಹೇಡಮಾನೋ ವರುಣೇಹ ಬೋಧ್ಯುರುಶಗ್‍ಂ ಸ ಮಾ ನ ಆಯುಃ ಪ್ರಮೋಷೀಃ॥

ಯಚ್ಚಿದ್ಧಿ ತೇ ವಿಶೋ ಯಥಾ ಪ್ರ ದೇವ ವರುಣ ವ್ರತಮ್। ಮಿನೀಮಸಿ ದ್ಯವಿ ದ್ಯವಿ॥

ಯತ್ಕಿಂಚೇದಂ ವರುಣ ದೈವ್ಯೇ ಜನೇಽಭಿದ್ರೋಹಂ ಮನುಷ್ಯಾಶ್ಚರಾಮಸಿ। ಅಚಿತ್ತೀ ಯತ್ತವ ಧರ್ಮಾ ಯುಯೋಪಿಮ ಮಾ ನಸ್ತಸ್ಮಾದೇನಸೋ ದೇವ ರೀರಿಷಃ॥

ಕಿತವಾಸೋ ಯದ್ರಿರಿಪುರ್ನದೀವಿ ಯದ್ವಾ ಘಾ ಸತ್ಯಮುತಯನ್ನ ವಿದ್ಮ। ಸರ್ವಾ ತಾ ವಿಷ್ಯ ಶಿಥಿರೇವ ದೇವಾಥಾ ತೇ ಸ್ಯಾಮ ವರುಣ ಪ್ರಿಯಾಸಃ॥

26. **ದಿಗ್ದೇವತಾನಮಸ್ಕಾರಃ**

27. **ಸ್ತುತಿಃ**

28. **ಅಭಿವಾದನಮ್**

29. **ಆಚಮನಮ್**

30. **ಭಗವದರ್ಪಣಮ್**

(26–30) ಎಲ್ಲ ಪ್ರಾತಃಸಂಧ್ಯಾ ಪ್ರಕಾರವೇ ಮಾಡುವುದು.

'ಯಸ್ಯಸ್ಮೃತ್ಯಾ ಚ' ಇತ್ಯಾದಿ

ಅನೇನ ಸಾಯಂ ಸಂಧ್ಯಾವಂದನೇನ ಭಗವಾನ್ ಸರ್ವಾತ್ಮಕಃ
ಶ್ರೀವಾಸುದೇವಃ ಪ್ರೀಣಾತು॥

'ಮಧ್ಯೇ ಮಂತ್ರತಂತ್ರ' ಇತ್ಯಾದಿ

31. **ಆಚಮನಮ್**

32. **ಭೂಪ್ರಾರ್ಥನಾ**

**ಇತಿ ಸಾಯಂಸಂಧ್ಯಾವಂದನಮ್॥**

## ಭಾಗ - 4

## ಸಮಿದಾಧಾನ ಮಂತ್ರಾಃ

ಅಗ್ನಿಕಾರ್ಯಕ್ಕೆ 16 ಸಮಿತ್ತುಗಳು ಬೇಕಾಗುತ್ತವೆ. ಪಲಾಶ (ಮುತ್ತುಗ), ಅಶ್ವತ್ಥ (ಅರಳಿ), ಔದುಂಬರ (ಅತ್ತಿ), ಖದಿರ (ಕಗ್ಗಲಿ), ಅಪಾಮಾರ್ಗ (ಉತ್ತರಣೆ), ಅರ್ಕ (ಎಕ್ಕ), ಶಮೀ (ಬನ್ನಿ) ಇವುಗಳಲ್ಲಿ ಯಾವುದನ್ನಾದರೂ ಉಪಯೋಗಿಸಬಹುದು. (ಇವಾವುವೂ ಲಭ್ಯವಿಲ್ಲದಾಗ ದರ್ಭೆಯನ್ನೇ ಸಮಿತ್ತಾಗಿ ಉಪಯೋಗಿಸಬಹುದು.) ವಿಶೇಷವಾಗಿ ಮುತ್ತುಗ ಅಥವಾ ಅರಳಿ ಕಡ್ಡಿಯನ್ನು ಬಳಸುತ್ತಾರೆ. ಸುಮಾರು ಕಿರುಬೆರಳಿನ ಗಾತ್ರದ ಮತ್ತು ಆರು ಅಂಗುಲ ಉದ್ದದ ಕಡ್ಡಿಯನ್ನು ಸಮಿದಾಧಾನಕ್ಕೆ ಉಪಯೋಗಿಸಬೇಕು.

1. **ಆಚಮನಮ್**

2. **ಪ್ರಾಣಾಯಾಮಃ**

3. **ಸಂಕಲ್ಪಃ**

ಮಮೋಪಾತ್ತಸಮಸ್ತದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಪ್ರಾತಃ / ಸಾಯಂ ಸಮಿದಾಧಾನಂ ಕರಿಷ್ಯೇ।

ಪರಿತ್ವಾಗ್ನೇ ಪರಿಮೃಜಾಮ್ಯಾಯುಷಾ ಚ ಧನೇನ ಚ। ಸುಪ್ರಜಾಃ ಪ್ರಜಯಾ ಭೂಯಾಸಗ್‌ಂ ಸುವೀರೋ ವೀರೈಸ್ಸುವರ್ಚಾ ವರ್ಚಸಾ ಸುಪೋಷಃ ಪೋಷೈಸ್ಸುಗೃಹೋ ಗೃಹೈಸ್ಸುಪತಿಃ ಪತ್ಯಾ ಸುಮೇಧಾ ಮೇಧಯಾ ಸುಬ್ರಹ್ಮಾ ಬ್ರಹ್ಮಚಾರಿಭಿಃ॥

ಈ ಮಂತ್ರದಿಂದ ಅಗ್ನಿಯ ಕಟ್ಟೆಯನ್ನು ನೀರನ್ನು ಹಾಕಿ ಕೈಯಿಂದ ತಿಕ್ಕಿ ಸುತ್ತಲೂ ನೀರಿನಿಂದ ಬಳಿಯುವುದು.

ಅದಿತೇಽನುಮನ್ಯಸ್ವ। ಅನುಮತೇಽನುಮನ್ಯಸ್ವ।
ಸರಸ್ವತೇಽನುಮನ್ಯಸ್ವ। ದೇವಸವಿತಃ ಪ್ರಸುವ॥

ಈ ನಾಲ್ಕುಮಂತ್ರಗಳಿಂದ ಅಗ್ನಿಯ ದಕ್ಷಿಣ, ಪಶ್ಚಿಮ, ಉತ್ತರ ಮತ್ತು ಸುತ್ತಲೂ ಕ್ರಮವಾಗಿ ನೀರಿನಿಂದ ಪರಿಷೇಚನೆ ಮಾಡುವುದು.

ಸಮಿಧಂ ಗೃಹೀತ್ವಾ॥

ನಂತರ ಹದಿನಾರು ಸಮಿತ್ತುಗಳನ್ನು ಎಡಗೈಯಲ್ಲಿ ಹಿಡಿದುಕೊಂಡು ಒಂದೊಂದಾಗಿ ಎಳೆದುಕೊಂಡು ಬಲಗೈಯಿಂದ ತುಪ್ಪದಲ್ಲಿ ಅದ್ದಿಕೊಂಡು ಕೆಳಗಿನ 16 ಮಂತ್ರಗಳಿಂದ "ಸ್ವಾಹಾ" ಎಂದಾಗ ಅಗ್ನಿಗೆ ಸಮಿತ್ತನ್ನು ಹಾಕಬೇಕು.

॥೧॥ ಅಗ್ನಯೇ ಸಮಿಧಮಾಹಾರ್ಷಂ ಬೃಹತೇ ಜಾತವೇದಸೇ ಯಥಾ ತ್ವಮಗ್ನೇ ಸಮಿಧಾ ಸಮಿಧ್ಯಸ ಏವಂ ಮಾಮಾಯುಷಾ ವರ್ಚಸಾ ಸನ್ಯಾ ಮೇಧಯಾ ಪ್ರಜಯಾ ಪಶುಭಿರ್ಬ್ರಹ್ಮವರ್ಚಸೇನಾನ್ನಾದ್ಯೇನ ಸಮೇಧಯ ಸ್ವಾಹಾ॥

॥೨॥ ಏಧೋಽಸ್ಯೇಧಿಷೀಮಹಿ ಸ್ವಾಹಾ ॥

॥೩॥ ಸಮಿದಸಿ ಸಮೇಧಿಷೀಮಹಿ ಸ್ವಾಹಾ ॥

॥೪॥ ತೇಜೋಽಸಿ ತೇಜೋ ಮಯಿ ಧೇಹಿ ಸ್ವಾಹಾ ॥

॥೫॥ ಅಪೋ ಅದ್ಯಾನ್ವಚಾರ್‍ಷಗ್ಂ ರಸೇನ ಸಮಸೃಕ್ಷ್ಮಹಿ। ಪಯಸ್ವಾಗ್ಂ ಅಗ್ನ ಆಗಮಂ ತಂ ಮಾ ಸಗ್ಂಸೃಜ ವರ್ಚಸಾ ಸ್ವಾಹಾ ॥

॥೬॥ ಸಂ ಮಾಗ್ನೇ ವರ್ಚಸಾ ಸೃಜ ಪ್ರಜಯಾ ಚ ಧನೇನ ಚ ಸ್ವಾಹಾ ॥

॥೭॥ ವಿದ್ಯುನ್ಮೇ ಅಸ್ಯ ದೇವಾ ಇಂದ್ರೋ ವಿದ್ಯಾತ್ಸಹ ಋಷಿಭಿಸ್ಸ್ವಾಹಾ ॥

॥೮॥ ಅಗ್ನಯೇ ಬೃಹತೇ ನಾಕಾಯ ಸ್ವಾಹಾ॥

॥೯॥ ದ್ಯಾವಾಪೃಥಿವೀಭ್ಯಾಗ್ ಸ್ವಾಹಾ॥

॥೧೦॥ ಏಷಾ ತೇ ಅಗ್ನೇ ಸಮಿತ್ತಯಾ ವರ್ಧಸ್ವ ಚಾಪ್ಯಾಯಸ್ವ ಚ ತಯಾಹಂ ವರ್ಧಮಾನೋ ಭೂಯಾಸಮಾಪ್ಯಾಯಮಾನಶ್ಚ ಸ್ವಾಹಾ॥

॥೧೧॥ ಯೋ ಮಾಗ್ನೇ ಭಾಗಿನಗ್ಂ ಸಂತಮಥಾಭಾಗಂ ಚಿಕೀರ್ಷತ್ಯ-ಭಾಗಮಗ್ನೇ ತಂ ಕುರು ಮಾಮಗ್ನೇ ಭಾಗಿನಂ ಕುರು ಸ್ವಾಹಾ॥

॥೧೨॥ ಸಮಿಧಮಾಧಾಯಾಗ್ನೇ ಸರ್ವವ್ರತೋ ಭೂಯಾಸಗ್ಂ ಸ್ವಾಹಾ॥

॥೧೩॥ ಭೂಃ ಸ್ವಾಹಾ ॥

॥೧೪॥ ಭುವಃ ಸ್ವಾಹಾ ॥

॥೧೫॥ ಸುವಃ ಸ್ವಾಹಾ ॥

॥೧೬॥ ಭೂರ್ಭುವಸ್ಸುವಸ್ಸ್ವಾಹಾ ॥

ಅದಿತೇಽನ್ವಮಗ್ಂಸ್ಥಾಃ । ಅನುಮತೇಽನ್ವಮಗ್ಂಸ್ಥಾಃ । ಸರಸ್ವತೇನ್ವಮಗ್ಂಸ್ಥಾಃ । ದೇವಸವಿತಃ ಪ್ರಾಸಾವೀಃ । — ಎಂದು ಅಗ್ನಿಂ ಸಮಂತಂ ಪರಿಷಿಚ್ಯ॥

(ಮೊದಲಿನಂತೆ ಅಗ್ನಿಯ ದಕ್ಷಿಣಾದಿಯಾಗಿ ನಾಲ್ಕೂ ಕಡೆಗೂ ನೀರನ್ನು ಬಿಡುವುದು)

**ಉಪಸ್ಥಾನ:**

ಅಗ್ನೇರುಪಸ್ಥಾನಂ ಕರಿಷ್ಯೇ॥

(ನಿಂತುಕೊಂಡು ದಂಡಕೋಲು ಇದ್ದರೆ
ಅದನ್ನೂ ಹಿಡಿದುಕೊಂಡು ಉಪಸ್ಥಾನ ಮಾಡಬೇಕು.)

ಯತ್ತೇ ಅಗ್ನೇ ತೇಜಸ್ತೇನಾಹಂ ತೇಜಸ್ವೀ ಭೂಯಾಸಂ ಯತ್ತೇ ಅಗ್ನೇ ವರ್ಚಸ್ತೇನಾಹಂ ವರ್ಚಸ್ವೀ ಭೂಯಾಸಂ ಯತ್ತೇ ಅಗ್ನೇ ಹರಸ್ತೇನಾಹಗ್ಂ ಹರಸ್ವೀ ಭೂಯಾಸಮ್॥

ಮಯಿ ಮೇಧಾಂ ಮಯಿ ಪ್ರಜಾಂ ಮಯ್ಯಗ್ನಿಸ್ತೇಜೋ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯೀಂದ್ರ ಇಂದ್ರಿಯಂ ದಧಾತು ಮಯಿ ಮೇಧಾಂ ಮಯಿ ಪ್ರಜಾಂ ಮಯಿ ಸೂರ್ಯೋ ಭ್ರಾಜೋ ದಧಾತು॥

ಮಾ ನಸ್ತೋಕೇ ತನಯೇ ಮಾ ನ ಆಯುಷಿ ಮಾ ನೋ ಗೋಷು ಮಾ ನೋ ಅಶ್ವೇಷು ರೀರಿಷಃ। ವೀರಾನ್ಮಾನೋ ರುದ್ರಭಾಮಿತೋ ವಧೀರ್ಹವಿಷ್ಮಂತೋ ನಮಸಾ ವಿಧೇಮ ತೇ॥

ಎಂಬ ಮಂತ್ರದಿಂದ ರಕ್ಷೆಯನ್ನು ಮಾಡಿಕೊಳ್ಳುವುದು. ಉದ್ಧರಣೆಯನ್ನು ಚೂರು ತುಪ್ಪದಿಂದ ಸವರಿ ಅಗ್ನಿಯಲ್ಲಿ ಅದ್ದಿದರೆ ಭಸ್ಮವು ಅಂಟಿಕೊಳ್ಳುತ್ತದೆ. ಅದನ್ನು ಅನಾಮಿಕ ಬೆರಳಿನಿಂದ ಕಲೆಸಿ ಮುಂದಿನ ಮಂತ್ರದಿಂದ ಹಣೆ, ಭುಜಗಳು, ಹೊಟ್ಟೆ, ಎದೆ, ಕುತ್ತಿಗೆ, ಕತ್ತಿನಹಿಂಭಾಗ ಮತ್ತು ತಲೆಯಲ್ಲಿ ಧರಿಸಬೇಕು.

**ರಕ್ಷಾಧಾರಣಮಂತ್ರ:**

ಮೇಧಾವೀ ಭೂಯಾಸಮ್। (ಹಣೆ), ತೇಜಸ್ವೀ ಭೂಯಾಸಮ್। (ಬಲಭುಜ), ವರ್ಚಸ್ವೀ ಭೂಯಾಸಮ್। (ಎಡಭುಜ), ಬ್ರಹ್ಮವರ್ಚಸೀ ಭೂಯಾಸಮ್। (ಹೊಟ್ಟೆ), ಆಯುಷ್ಮಾನ್ ಭೂಯಾಸಮ್। (ಎದೆ), ಅನ್ನಾದೋ ಭೂಯಾಸಮ್। (ಕುತ್ತಿಗೆ), ಯಶಸ್ವೀ ಭೂಯಾಸಮ್। (ಕುತ್ತಿಗೆ ಹಿಂಭಾಗ), ಸರ್ವಸಮೃದ್ಧೋ ಭೂಯಾಸಮ್॥ (ತಲೆ).

ಪುನಸ್ತ್ವಾದಿತ್ಯಾರುದ್ರಾವಸವಸ್ಸಮಿಂಧತಾಂ ಪುನರ್ಬ್ರಹ್ಮಾಣೋ ವಸುನೀಥ-ಯಜ್ಞೈಃ। ಘೃತೇನ ತ್ವಂ ತನುವೋ ವರ್ಧಯಸ್ವ ಸತ್ಯಾಸ್ಸಂತು ಯಜಮಾನಸ್ಯ ಕಾಮಾಸ್ಸ್ವಾಹಾ॥

ಸ್ವಸ್ತಿ, ಶ್ರದ್ಧಾಂ ಮೇಧಾಂ ಯಶಃ ಪ್ರಜ್ಞಾಂ ವಿದ್ಯಾಂ ಬುದ್ಧಿಂ ಶ್ರಿಯಂ ಬಲಮ್। ಆಯುಷ್ಯಂ ತೇಜ ಆರೋಗ್ಯಂ ದೇಹಿ ಮೇ ಹವ್ಯವಾಹನ। ಶ್ರೀಯಂ ದೇಹಿ ಮೇ ಹವ್ಯವಾಹನ ಇತ್ಯೋಂ ನಮಃ॥

**ಅಭಿವಾದನಮ್**

'ಚತುಸ್ಸಾಗರಪರ್ಯಂತಂ ಗೋಬ್ರಾಹ್ಮಣೇಭ್ಯಃ ಶುಭಂ ಭವತು'

ಇಲ್ಲಿ ಗೋತ್ರಪ್ರವರ ಹೇಳಿಕೊಂಡು ನಮಸ್ಕರಿಸಬೇಕು (ಸಂಧ್ಯಾವಂದನೆಯಲ್ಲಿ ಮಾಡುವಂತೆ).

ಹೋಮಾಂತೇ ಶ್ರೀಯಜ್ಞಪುರುಷಾಯ ನಮಃ।
ಧ್ಯಾನಾದಿ ಷೋಡಶೋಪಚಾರಾನ್ ಸಮರ್ಪಯಾಮಿ॥

ಅನೇನ ಪ್ರಾತಃ (ಸಾಯಂ) ಸಮಿದಾಧಾನ-ಹೋಮೇನ ಭಗವಾನ್
ಶ್ರೀಯಜ್ಞೇಶ್ವರಃ ಪ್ರೀಯತಾಮ್॥

**ಭಗವದರ್ಪಣಮ್**

'ಕಾಯೇನ ವಾಚಾ' ಇತ್ಯಾದಿ

## ಭಾಗ - 5

# ಬ್ರಹ್ಮಯಜ್ಞ ಮಂತ್ರಾಃ

ಇದೊಂದು ನಿತ್ಯಕರ್ಮ. ಸ್ನಾನಸಂಧ್ಯಾದಿಗಳಾದ ಮೇಲೆ ಬೆಳಗಿನ ಉಪಾಹಾರಾದಿ ಗಳನ್ನು ಸ್ವೀಕರಿಸುವ ಮುನ್ನ ಇದನ್ನು ಆಚರಿಸಬೇಕು. ಇಲ್ಲಿ ಬ್ರಹ್ಮವೆಂದರೆ ವೇದ, ಯಜ್ಞ ಎಂದರೆ ಅದರ ಅಧ್ಯಯನ. ಬೇರೆ ಯಾವ ಸಾಮಗ್ರಿಯ ಆವಶ್ಯಕತೆಯೂ ಇಲ್ಲದೆ ಕೇವಲ ವೇದಮಾತ್ರದಿಂದ ನಡೆಯುವ ವೇದಾಧ್ಯಯನ ರೂಪವಾದ ಯಜ್ಞವೇ 'ಬ್ರಹ್ಮಯಜ್ಞ'. ನಾವು ಗುರುಮುಖೇನ ಕಲಿತ ಮಂತ್ರಗಳನ್ನು 'ಬಹ್ಮಯಜ್ಞೇನ ಯಕ್ಷ್ಯಮಾಣಃ' (ತೈ. ಆ. 3, 9) ಎಂಬ ಶ್ರುತಿವಾಕ್ಯದಂತೆ ನಿಯಮ ದಿಂದ ಅಧ್ಯಯನ ಮಾಡುವುದೇ ಬ್ರಹ್ಮಯಜ್ಞದ ಸ್ವರೂಪವಾಗಿದೆ. ಒಂದು ಋಕ್ಕು, ಒಂದು ಯಜುಸ್ಸು, ಒಂದು ಸಾಮ ಇಷ್ಟನ್ನಾದರೂ ಸ್ವಾಧ್ಯಾಯ ಮಾಡುವುದರಿಂದ ಈ ವಿಧಿಯು ಮುಗಿಯುವುದರಿಂದ ಇದಕ್ಕೆ 'ಸ್ವಾಧ್ಯಾಯ ಯಜ್ಞ' ಎಂದೂ ಹೆಸರು ಇದೆ.

ಸೂರ್ಯೋದಯವಾದ ಮೇಲೆ 'ಉದಿತ ಆದಿತ್ಯೇ' (ತೈ. ಆ. 2-11) ಪೂರ್ವಾಭಿಮುಖವಾಗಿ ಕುಳಿತು ಪವಿತ್ರವನ್ನು ಧರಿಸಿ ಮನೆಯಲ್ಲೇ ಒಂದು ಶುದ್ಧವಾದ ಸ್ಥಳದಲ್ಲಿ ಈ ನಿತ್ಯಕರ್ಮವನ್ನು ಆಚರಿಸಬಹುದು.

ಈ ಕರ್ಮಾನುಷ್ಠಾನದಿಂದ ಸಮಗ್ರವೇದವನ್ನೂ ಕಂಠಸ್ಥವಾಗಿ ಮಾಡಿಕೊಳ್ಳ ಬಹುದು. ಸ್ವಾಧ್ಯಾಯದಿಂದ ದೇವತೆಗಳು ತೃಪ್ತಿಹೊಂದಿ ಆಯುಸ್ಸು, ವರ್ಚಸ್ಸು, ತೇಜಸ್ಸು, ಯಶಸ್ಸು, ಅನ್ನ ಮುಂತಾದುದೆಲ್ಲವನ್ನೂ ಅನುಗ್ರಹಿಸುತ್ತಾರೆ. ಕಾಲಾಂತರ ದಲ್ಲಿ ವೇದಾರ್ಥಜ್ಞಾನವೂ ಸಂಪಾದನೆಯಾಗುತ್ತದೆ ಮತ್ತು ಇದು ಪರಮಾರ್ಥ ತತ್ತ್ವವನ್ನು ಅರಿಯಲು ಯೋಗ್ಯತೆಯನ್ನುಂಟುಮಾಡುತ್ತದೆ. ಈ ಸ್ವಾಧ್ಯಾಯವನ್ನು ಬಿಟ್ಟವರಿಗೆ ಮಾತಿನಲ್ಲೂ ತಮ್ಮದೆಂದು ಹೇಳಿಕೊಳ್ಳಲು ಏನೂ ಇರುವುದಿಲ್ಲ.

ಇಂತಹ ಮಹಿಮಾನ್ವಿತವಾದ 'ಸ್ವಾಧ್ಯಾಯ ಯಜ್ಞ'ವನ್ನು ತಮ್ಮ ತಮ್ಮ ಶ್ರೇಯಸ್ಸಿಗೆ ಅಧಿಕಾರಿಗಳಾದವರೆಲ್ಲರೂ ಆಚರಿಸಿ ತದಂಗವಾದ ದೇವ, ಋಷಿ, ಪಿತೃಗಳಿಗೆ ಸಮೂಹರೂಪದಿಂದ ತರ್ಪಣ ಕೊಟ್ಟು ತಮ್ಮನ್ನು ಕೃತಾರ್ಥರನ್ನಾಗಿ ಮಾಡಿಕೊಳ್ಳ ಬಹುದಾಗಿದೆ.

ಇದಕ್ಕೆ ಹೆಚ್ಚಿನ ಕಾಲವೇನೂ ಬೇಕಾಗುವುದಿಲ್ಲ. ಮೊದಲು ಒಂದೆರಡು ಬಾರಿ ಬಲ್ಲವರಿಂದ ಹೇಳಿಸಿಕೊಂಡನಂತರ ಕೇವಲ 15 ರಿಂದ 20 ನಿಮಿಷಗಳಲ್ಲಿ ಇದನ್ನು ಅನುಷ್ಠಾನ ಮಾಡಬಹುದು.

## ಬ್ರಹ್ಮಯಜ್ಞ ಅನುಷ್ಠಾನಕ್ರಮ

1. ಆಚಮ್ಯ (ಎರಡು ಬಾರಿ ಆಚಮನ ಮಾಡುವುದು).

2. ಸಂಕಲ್ಪ: "ಮನು ಉಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಬ್ರಹ್ಮಯಜ್ಞಂ ಕರಿಷ್ಯೇ."

ಪೂರ್ವಾಭಿಮುಖಃ ಆಚಮ್ಯ। ಪ್ರಾಣಾನಾಯಮ್ಯ। ಮಮೋಪಾತ್ತ ಸಕಲ ದುರಿತಕ್ಷ ದ್ವಾರಾ ಶ್ರೀಪರಮೇಶ್ವರ ಪೀತ್ಯರ್ಥಂ ಬ್ರಹ್ಮಯಜ್ಞೇನ ಯಕ್ಷೇ। ವಿದ್ಯುದಸಿ ವಿದ್ಯ ಮೇ ಪಾಪ್ಮಾನಮೃತಾತ್ ಸತ್ಯಮುಪೈಮಿ ಇತ್ಯಪ ಉಪಸ್ಪೃಶ್ಯ। ತ್ರಿರಾಚಾಮೇತ್। ದ್ವಿಃಪರಿಮೃಜ್ಯ। ಸಕೃದುಪಸ್ಪೃಶ್ಯ॥೧॥

ಬ್ರಹ್ಮಯಜ್ಞದಿಂದ ಯಾಗ ಮಾಡುವೆನು ಎಂದು ಸಂಕಲ್ಪಿಸಬೇಕು. "ಹೇ ದೇವತೇ, ನೀನು ವಿದ್ಯುತ್ (ಬಿಡಿಸುವವಳಾಗಿರುವೆ) ನನ್ನ ಪಾಪಗಳನ್ನು ಬಿಡಿಸು. ಋತದಿಂದ (ಮಾನಸಿಕ ಸತ್ಯದಿಂದ) ಸತ್ಯವನ್ನು (ವಾಚಿಕ ಸತ್ಯವನ್ನು) ಹೊಂದುತ್ತೇನೆ" ಎಂದು ಕೈ ತೊಳೆದುಕೊಂಡು ಅಮಂತ್ರಕವಾಗಿ ಆಚಮನ ಮಾಡಬೇಕು (ಎಂದರೆ

ಮೂರು ಸಲ ಮಂತ್ರವಿಲ್ಲದೆ ನೀರು ಕುಡಿಯಬೇಕು). ಅಥವಾ ಕೇಶವಾದಿ ಮೂರು ನಾಮಗಳಿಂದಲೂ ಆಚಮನ ಮಾಡಬಹುದು. ಆಮೇಲೆ ಎರಡು ಸಲ ತುಟಿಯನ್ನು ನೀರಿನಿಂದ ಒರಸಬೇಕು. ಇಲ್ಲೂ 'ಗೋವಿಂದಾಯ ನಮಃ' ಎಂದು ತುಟಿಯನ್ನು ಒರಸಿಕೊಂಡು ಆಮೇಲೆ ಒಂದು ಸಲ ಕೈ ತೊಳೆಯಬೇಕು.

ಸವ್ಯಂ ಪಾಣಿಂ ಪಾದೌ ಪ್ರೋಕ್ಷ್ಯ। ಶಿರಃ, ಚಕ್ಷುಷಿ, ನಾಸಿಕೇ, ಶ್ರೋತ್ರೇ, ಹೃದಯಮಾಲಭ್ಯ। ದರ್ಭಾಣಾಂ ಮಹದುಪಸ್ತೀರ್ಯ। ದಕ್ಷಿಣೋತ್ತರೌ ಪಾಣೀ ಪಾದೌ ಕೃತ್ವಾ॥೨॥

ಎಡಗೈಯನ್ನೂ ಹಾಗೂ ಎರಡು ಕಾಲುಗಳನ್ನೂ ನೀರಿನಿಂದ ಪ್ರೋಕ್ಷಿಸಬೇಕು. ಇಲ್ಲಿಯೂ ಯಾವ ಮಂತ್ರವನ್ನು ಹೇಳದಿದ್ದರೂ ವಿಷ್ಣವೇ, ಮಧುಸೂದನಾಯ, ತ್ರಿವಿಕ್ರಮಾಯ ಎಂಬ ಮೂರು ನಾಮಗಳಿಂದ ಪ್ರೋಕ್ಷಣೆಯನ್ನು ಮಾಡಬಹುದು. ಆಮೇಲೆ ಜಲಸಹಿತವಾದ ಕೈಯಿಂದ ತಲೆ, ಎರಡು ಕಣ್ಣುಗಳು, ಎರಡು ಮೂಗುಗಳು, ಎರಡು ಕಿವಿ, ಹೃದಯ ದೇಶಗಳನ್ನು ಮುಟ್ಟಿಕೊಳ್ಳಬೇಕು. ಆಮೇಲೆ ಆಸನಕ್ಕಾಗಿ ದರ್ಭೆಗಳನ್ನು ಹರಡಿ ಅಥವಾ ದರ್ಭಾಸನದ ಮೇಲೆ ಕುಳಿತುಕೊಂಡು ಬಲಗಾಲನ್ನು ಎಡತೊಡೆಯ ಮೇಲೆ ಬಲಗೈಯನ್ನು ಎಡಗೈಯ ಮೇಲಿಟ್ಟುಕೊಳ್ಳಬೇಕು. ಕೈಯಲ್ಲಿ ಪವಿತ್ರವನ್ನು (ಎರಡು ದರ್ಭೆಗಳಿಂದ ಮಾಡಿದ್ದು) ಧರಿಸಬೇಕು. ಬಲಗೈಯಿಂದ ನೀರನ್ನು ಎಡಗೈಗೆ ಹಾಕಿಕೊಂಡು ಬಲಗೈಯಿಂದ ಮುಟ್ಟಿಕೊಂಡು 'ಓಮೃಚೋ ಅಕ್ಷರೇ' ಎಂದು ಪ್ರಾರಂಭಿಸಬೇಕು.

ಓಮೃಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುರ್ಯಸ್ತಂ ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಾಸತೇ॥೩॥

ಓಂ ಭೂಃ ತತ್ಸವಿತುರ್ವರೇಣ್ಯಂ। ಓಂ ಭುವಃ ಭರ್ಗೋ ದೇವಸ್ಯ ಧೀಮಹಿ। ಓಗ್ಂ ಸುವಃ ಧಿಯೋ ಯೋ ನಃ ಪ್ರಚೋದಯಾತ್॥ ಓಂ ಭೂಃ

ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ। ಓಂ ಭುವಃ ಧಿಯೋ ಯೋ ನಃ ಪ್ರಚೋದಯಾತ್। ಓಗ್ಂ ಸುವಃ ತತ್ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ಧಿಯೋ ಯೋ ನಃ ಪ್ರಚೋದಯಾತ್ — ಇತಿ ಗಾಯತ್ರೀಂ ಸಾವಿತ್ರೀಂ ಪಚ್ಛಃ ಅರ್ಧರ್ಚಶಃ ಅನವಾನಂ ತ್ರಿರನ್ವಾಹ॥೪॥

ಸವಿತೃದೇವನ ಗಾಯತ್ರೀ ಮಂತ್ರವನ್ನು ಮೇಲೆ ತೋರಿಸಿರುವಂತೆ ಓಂಕಾರ ಮತ್ತು ವ್ಯಾಹೃತಿಗಳ ಸಹಿತವಾಗಿ ಮೊದಲನೆಯ ಸಲ ಒಂದೊಂದು ಪಾದವಾಗಿ, ಎರಡನೆಯ ಸಲ ಅರ್ಧ ಋಕ್ಕಿನ ಕ್ರಮದಿಂದ, ಮೂರನೆಯ ಸಲ ವಿರಾಮವಿಲ್ಲದೆ ಪೂರ್ಣವಾಗಿ ಹೇಳಬೇಕು.

ಓಂ ಭೂರ್ಭುವಸ್ಸುವಃ ಸತ್ಯಂ ತಪಃ ಶ್ರದ್ಧಾಯಾಂ ಜುಹೋಮಿ॥೫॥

ಓಂಕಾರಕ್ಕೆ ಪರಮಾತ್ಮನೇ ವಾಚ್ಯನು. ಸಮಸ್ತ ವ್ಯಾಹೃತಿಗಳು ಲೋಕತ್ರಯವ್ಯಾಪಿಯಾದ ಪ್ರಜಾಪತಿಯನ್ನು ತಿಳಿಸುತ್ತವೆ. ಸತ್ಯವಾದ ಸ್ವಾಧ್ಯಾಯವೆಂಬ ತಪಸ್ಸನ್ನು ಶ್ರದ್ಧೆಯಲ್ಲಿ ಹೋಮ ಮಾಡುತ್ತೇನೆ, ಶ್ರದ್ಧೆಯಿಂದ ಅಧ್ಯಯನ ಮಾಡುತ್ತೇನೆ ಎಂದರ್ಥ.

ಪರೋ ರಜಸೇಽಸಾವದೋಽಸಮ್॥೬॥

ರಜಸ್ಸನ್ನು ಎಂದರೆ ಪಾಪವನ್ನು ಮೀರಿದ ಸೂರ್ಯನಿಗೆ ನಮಸ್ಕಾರವು. ಅಸೌ ಅದಃ ಮಾ ಪ್ರಾಪತ್ — ಈ ಪಾಪವೆಂಬ ಶತ್ರುವು ನನಗೆ ಅಡ್ಡಿಮಾಡುವ ಸಾಮರ್ಥ್ಯವನ್ನು ಹೊಂದುವುದು ಬೇಡ.

ಅಹಂ ವೃಕ್ಷಸ್ಯ ರೇರಿವಾ ಇತಿ ಮನ್ತ್ರಸ್ಯ ಋಷಿಃ ತ್ರಿಶಂಕುಃ, ಪಂಕ್ತಿಃ ಛಂದಃ, ಪರಮಾತ್ಮಾ ದೇವತಾ, ಬ್ರಹ್ಮವಿದ್ಯಾರ್ಥೇ ವಿನಿಯೋಗಃ —

ಅಹಂ ವೃಕ್ಷಸ್ಯ ರೇರಿವಾ। ಕೀರ್ತಿಃ ಪೃಷ್ಠಂ ಗಿರೇರಿವ। ಊರ್ಧ್ವ ಪವಿತ್ರೋ ವಾಜಿನೀವ ಸ್ವಮೃತಮಸ್ಮಿ। ದ್ರವಿಣಗ್ಂ ಸವರ್ಚಸಮ್। ಸುಮೇಧಾ ಅಮೃತೋಽಕ್ಷಿತಃ। ಇತಿ ತ್ರಿಶಂಕೋರ್ವೇದಾನುವಚನಮ್॥೭॥

ತ್ರಿಶಂಕು ಎಂಬ ಋಷಿಗೆ ಶಾಸ್ತ್ರೀಯ ಕರ್ಮೋಪಾಸನೆಗಳಿಂದ ಬಂದ ದಿವ್ಯಜ್ಞಾನ ದಿಂದ ಹೇಳಿದಂಥ ಮಂತ್ರವಿದು. ಇದನ್ನು ಸ್ವಾಧ್ಯಾಯಕ್ಕಾಗಿ ಹೇಳಬೇಕೆಂದು ಶಾಸ್ತ್ರದಲ್ಲಿ ತಿಳಿಸಿದೆ. ಈ ಸಂಸಾರ ವೃಕ್ಷವನ್ನು ಬೆಳೆಯಿಸುವವನು ನಾನೇ. ನನ್ನ ಕೀರ್ತಿಯು ಪರ್ವತದ ಉತ್ತುಂಗಶಿಖರದಂತೆ ಉನ್ನತವಾಗಿರುವುದು. ಪರಮಾತ್ಮನೇ ನನಗೆ ಊರ್ಧ್ವನಾದ್ದರಿಂದ, ಅಂದರೆ ಕಾರಣನಾಗಿರುವುದರಿಂದ ನಾನು ಪವಿತ್ರನು (ಅಪವಿತ್ರನಾದ ಸಂಸಾರಿಯಲ್ಲ). ವಾಜವುಳ್ಳ-ಅನ್ನವುಳ್ಳ, ಸೂರ್ಯನಲ್ಲಿ ಅಮೃತವಿರು ವಂತೆ ನಾನು ವಿಶುದ್ಧವಾದ ಆತ್ಮತತ್ತ್ವದಿಂದ ಅಮೃತನಾಗಿರುವೆನು. ತತ್ತ್ವಜ್ಞಾನ ದಿಂದ ಕಾಂತಿಯುಕ್ತವಾದ ಸಂಪತ್ತುಳ್ಳವನಾಗಿದ್ದೇನೆ. ತತ್ತ್ವಜ್ಞಾನದಿಂದ ನಾನು ಒಳ್ಳೆಯ ಮೇಧಾಶಕ್ತಿಯುಳ್ಳವನು. ಆದ್ದರಿಂದಲೇ ನಾನು ಅಮೃತನು, ನಾಶವಾಗ ದವನು ಅಥವಾ ಅಮೃತದಿಂದ ಸಿಂಪಡಿಸಲ್ಪಟ್ಟಿರುವವನು.

ಇದಾದಮೇಲೆ ಕೆಳಗೆ ಕೊಟ್ಟಿರುವ ವೇದಭಾಗಗಳನ್ನು ಹೇಳಬೇಕು.

**ಯಜುರ್ವೇದ:**

ಇಷೇ ತ್ವೋರ್ಜೇ ತ್ವಾ ವಾಯವಃ ಸ್ಥೋಪಾಯವಃ ಸ್ಥ ದೇವೋ ವಃ ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣ ಆಪ್ಯಾಯಧ್ವಮಘ್ನಿಯಾ ದೇವಭಾಗ ಮೂರ್ಜಸ್ವತೀಃ ಪಯಸ್ವತೀಃ ಪ್ರಜಾವತೀರನಮೀವಾ ಅಯಕ್ಷ್ಮಾ ಮಾ ವಃ ಸ್ತೇನ ಈಶತ ಮಾಘಶಗ್ಂಸೋ ರುದ್ರಸ್ಯ ಹೇತಿಃ ಪರಿ ವೋ ವೃಣಕ್ತು ಧ್ರುವಾ ಅಸ್ಮಿನ್ ಗೋಪತೌ ಸ್ಯಾತ ಬಹ್ವೀರ್ಯಜಮಾನಸ್ಯ ಪಶೂನ್ಪಾಹಿ॥

**ಋಗ್ವೇದ:**

ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವ ಮೃತ್ವಿಜಮ್। ಹೋತಾರಂ ರತ್ನಧಾತಮಮ್॥

**ಸಾಮವೇದಃ**

ಅಗ್ನ ಆಯಾಹಿ ವೀತಯೇ ಗೃಣಾನೋ ಹವ್ಯದಾತಯೇ। ನಿ ಹೋತಾ ಸತ್ಸಿ ಬರ್ಹಿಷಿ॥

**ಅಥರ್ವವೇದಃ**

ಶಂ ನೋ ದೇವೀರಭಿಷ್ಟಯ ಆಪೋ ಭವನ್ತು ಪೀತಯೇ। ಶಂ ಯೋರಭಿ ಸ್ರವನ್ತು ನಃ॥೮॥

ಹೀಗೆ ಇಷೇತ್ವಾದಿ ಕ್ರಮದಿಂದ (ಸಂಹಿತೆಯಿಂದ ಆರಂಭಿಸಿ) ಸ್ವಶಾಖೆಯ ಮಂತ್ರಗಳನ್ನು ಸಾಧ್ಯವಾದಷ್ಟು ಹೇಳಬೇಕು. ಆಮೇಲೆ ಋಗ್ವೇದ, ಸಾಮವೇದ, ಅಥರ್ವವೇದಗಳ ಒಂದೊಂದು ಮಂತ್ರವನ್ನು ಮೇಲಿನಂತೆ ಹೇಳಬೇಕು.

ಈ ಕೆಳಗಿನ ಮಂತ್ರವನ್ನು ಮೂರುಬಾರಿ ಹೇಳಬೇಕು.

ಓಂ ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮ ಓಷಧೀಭ್ಯಃ। ನಮೋ ವಾಚೇ ನಮೋ ವಾಚಸ್ಪತಯೇ ನಮೋ ವಿಷ್ಣವೇ ಬೃಹತೇ ಕರೋಮಿ ಓಮ್ ಇತಿ ತ್ರಿರನ್ವಾಹ। ತತಃ ಅಭಿಮನ್ತ್ರಿತಜಲೇನ ಆತ್ಮಾನಂ ಪ್ರೋಕ್ಷ್ಯ॥೯॥

ಬ್ರಹ್ಮಕ್ಕೆ ಅಂದರೆ ವೇದಗಳಿಗೆ ನಮಸ್ಕಾರ. ಅಗ್ನಿಗೆ ನಮಸ್ಕಾರವಿರಲಿ. (ಸರ್ವಾಧಾರಳಾದ) ಪೃಥಿವೀ ದೇವಿಗೆ ನಮಸ್ಕಾರ. (ಜೀವನಾಧಾರಗಳಾದ) ಔಷಧಿಗಳಿಗೆ ನಮಸ್ಕಾರ (ಸರ್ವ ವ್ಯವಹಾರಾಸ್ಪದವಾದ) ಮಾತಿಗೆ ನಮಸ್ಕಾರ. ಮಾತಿಗೊಡೆಯನಾದ ವಾಗಭಿಮಾನಿ ದೇವತೆಗೆ ನಮಸ್ಕಾರ. ಎಲ್ಲರಿಗಿಂತಲೂ ದೊಡ್ಡವನಾದ ಸರ್ವವ್ಯಾಪಿಯಾದ ವಿಷ್ಣುವಿಗೆ ನಮಸ್ಕರಿಸುತ್ತೇನೆ. ಈ ಮಂತ್ರವು ಬ್ರಹ್ಮಯಜ್ಞದ ಸಮಾಪ್ತಿದ್ಯೋತಕವು.

ಆಮೇಲೆ ಆ ಕೈಯಲ್ಲಿ ಅಭಿಮಂತ್ರಿತವಾದ ನೀರಿನಿಂದ ತನ್ನನ್ನು ಪ್ರೋಕ್ಷಿಸಿಕೊಳ್ಳಬೇಕು.

ವೃಷ್ಟಿರಸಿ ವೃಶ್ಚ ಮೇ ಪಾಪ್ಮಾನಮೃತಾತ್ಸತ್ಯಮುಪಾಗಾಮ್। ಇತ್ಯಪ ಉಪಸ್ಪೃಶ್ಯ ॥೧೦॥

"ಹೇ ದೇವತೆ, ನೀನು (ದುಃಖವನ್ನು) ಕತ್ತರಿಸುವುದಕ್ಕೆ ಕಾರಣಳಾದ ವೃಷ್ಟಿಯಾಗಿರುವೆ. ನನ್ನ ಪಾಪವನ್ನು ಕತ್ತರಿಸು. ಋತದಿಂದ ಎಂದರೆ ಮಾನಸಿಕ ಸತ್ಯದಿಂದ ಸತ್ಯವನ್ನು ಎಂದರೆ ವಾಚಿಕ ಸತ್ಯವನ್ನು ಹೊಂದಿದೆನು" ಎಂದು ಪುನಃ ಕೈ ತೊಳೆಯಬೇಕು.

ಇಲ್ಲಿಗೆ ಸ್ವಾಧ್ಯಾಯ ರೂಪವಾದ ಬ್ರಹ್ಮಯಜ್ಞವು ಮುಗಿಯಿತು.

## ದೇವರ್ಷಿಪಿತೃತರ್ಪಣ

ಅಂಗುಲ್ಯಗ್ರೇ ತೀರ್ಥಂ ದೈವಂ ಸ್ವಲ್ಪಾಂಗುಲ್ಯೋರ್ಮೂಲೇ ಆರ್ಷಮ್
ಮಧ್ಯೇಽಙ್ಗುಷ್ಠಾಂಗುಲ್ಯೋಃ ಪಿತ್ರ್ಯಂ ಮೂಲೇ ತ್ವಙ್ಗುಷ್ಠಸ್ಯ ಬ್ರಾಹ್ಮಮ್॥

ಎಂಬ ವಾಕ್ಯದಂತೆ ಬೆರಳುಗಳ ತುದಿಯು ದೇವತೀರ್ಥವು. ದೇವತರ್ಪಣವನ್ನು ಬೆರಳುಗಳ ತುದಿಯಿಂದ ಮಾಡಬೇಕು. ಕಿರುಬೆರಳಿನ ಮೂಲವು ಋಷಿತೀರ್ಥವು ಅಲ್ಲಿಂದ ನಿವೀತದಲ್ಲಿ ಋಷಿಗಳ ತರ್ಪಣ ಮಾಡಬೇಕು. ತೋರುಬೆರಳು ಹಾಗೂ ಹೆಬ್ಬೆರಳಿನ ನಡುವೆ ಪಿತೃತೀರ್ಥವು. ಆ ನಡುವಿನಿಂದ ಪಿತೃತರ್ಪಣವನ್ನು ಅಜೀವತ್ಪಿತೃಕರು ಪ್ರಾಚೀನಾವೀತದಲ್ಲಿ ಮಾಡಬೇಕು. ಹೆಬ್ಬೆರಳಿನ ಮೂಲವಾದ ಬ್ರಹ್ಮತೀರ್ಥದಿಂದ ಬ್ರಹ್ಮತರ್ಪಣ ಹಾಗೂ ಆಚಮನವನ್ನು ಸವ್ಯದಲ್ಲಿ ಮಾಡಬೇಕು.

(ಜೀವತ್ಪಿತೃಕರು ಎಡಗೈ ಹೆಬ್ಬೆಟ್ಟಿನಿಂದ ಜನಿವಾರವನ್ನು ಹಿಡಿದುಕೊಂಡು ಪಿತೃತರ್ಪಣವನ್ನು ಮಾಡಬೇಕು.)

ದೇವತೆಗಳಿಗೆ ಒಂದುಬಾರಿ, ಋಷಿಗಳಿಗೆ ಎರಡುಬಾರಿ, ಪಿತೃಗಳಿಗೆ ಮೂರು ಬಾರಿ ತರ್ಪಣವನ್ನು ಕೊಡಬೇಕು.

**ಸಂಕಲ್ಪ:**

ಬ್ರಹ್ಮಯಜ್ಞಾಂಗ ದೇವರ್ಷಿಪಿತೃತುಷ್ಟ್ಯರ್ಥಂ ದೇವರ್ಷಿಪಿತೃತರ್ಪಣಂ ಕರಿಷ್ಯೇ।

1. **ದೇವತರ್ಪಣ: (ಸವ್ಯದಲ್ಲಿ)**

ಬ್ರಹ್ಮಾದಯೋ ಯೇ ದೇವಾಸ್ತಾನ್ ದೇವಾನ್ ತರ್ಪಯಾಮಿ।
ಸರ್ವಾನ್ ದೇವಾನ್ ತರ್ಪಯಾಮಿ।
ಸರ್ವದೇವಗಣಾನ್ ತರ್ಪಯಾಮಿ।

ಸರ್ವದೇವಪತ್ನೀಸ್ತರ್ಪಯಾಮಿ।
ಸರ್ವದೇವಗಣಪತ್ನೀಸ್ತರ್ಪಯಾಮಿ।

2. **ಋಷಿತರ್ಪಣ: (ನಿವೀತಿಯಲ್ಲಿ)**

ಕೃಷ್ಣದ್ವೈಪಾಯನಾದಯೋ ಯೇ ಋಷಯಸ್ತಾನೃಷೀನ್
ತರ್ಪಯಾಮಿ ತರ್ಪಯಾಮಿ।

ಸರ್ವಾನ್ ಋಷೀನ್ ತರ್ಪಯಾಮಿ। ತರ್ಪಯಾಮಿ।
ಸರ್ವಋಷಿಗಣಾನ್ ತರ್ಪಯಾಮಿ। ತರ್ಪಯಾಮಿ।
ಸರ್ವಋಷಿಪತ್ನೀಸ್ತರ್ಪಯಾಮಿ। ತರ್ಪಯಾಮಿ।
ಸರ್ವಋಷಿಗಣಪತ್ನೀಸ್ತರ್ಪಯಾಮಿ। ತರ್ಪಯಾಮಿ।
ಪ್ರಜಾಪತೀಂ ಕಾಣ್ಡಋಷಿಂ ತರ್ಪಯಾಮಿ। ತರ್ಪಯಾಮಿ।
ಸೋಮಂ ಕಾಣ್ಡಋಷಿಂ ತರ್ಪಯಾಮಿ। ತರ್ಪಯಾಮಿ।
ಅಗ್ನಿಂ ಕಾಣ್ಡಋಷಿಂ ತರ್ಪಯಾಮಿ। ತರ್ಪಯಾಮಿ।
ವಿಶ್ವಾನ್ದೇವಾನ್ ಕಾಣ್ಡಋಷೀನ್ ತರ್ಪಯಾಮಿ। ತರ್ಪಯಾಮಿ।
ಸಾಗ್ಂಹಿತೀರ್ದೇವತಾ ಉಪನಿಷದಃ ತರ್ಪಯಾಮಿ। ತರ್ಪಯಾಮಿ।
ಯಾಜ್ಞಿಕೀರ್ದೇವತಾ ಉಪನಿಷದಃ ತರ್ಪಯಾಮಿ। ತರ್ಪಯಾಮಿ।
ವಾರುಣೀರ್ದೇವತಾ ಉಪನಿಷದಃ ತರ್ಪಯಾಮಿ। ತರ್ಪಯಾಮಿ।
ಹವ್ಯವಾಹನಂ ತರ್ಪಯಾಮಿ। ತರ್ಪಯಾಮಿ।
ವಿಶ್ವಾನ್ದೇವಾನ್ ಕಾಣ್ಡಋಷೀನ್ ತರ್ಪಯಾಮಿ। ತರ್ಪಯಾಮಿ।
ಬ್ರಹ್ಮಾಣಗ್ಂ ಸ್ವಯಂ ಭುವಂ ತರ್ಪಯಾಮಿ। ತರ್ಪಯಾಮಿ।
(ಬ್ರಹ್ಮತೀರ್ಥದಿಂದ ನೀರು ಬಿಡಬೇಕು)

ವಿಶ್ವಾನ್ದೇವಾನ್ ಕಾಣ್ಡಋಷೀನ್ ತರ್ಪಯಾಮಿ। ತರ್ಪಯಾಮಿ।
ಅರುಣಾನ್ ಕಾಣ್ಡಋಷೀನ್ ತರ್ಪಯಾಮಿ। ತರ್ಪಯಾಮಿ।
ಸದಸಸ್ಪತಿಂ ತರ್ಪಯಾಮಿ। ತರ್ಪಯಾಮಿ।
ಋಗ್ವೇದಂ ತರ್ಪಯಾಮಿ। ತರ್ಪಯಾಮಿ।
ಯಜುರ್ವೇದಂ ತರ್ಪಯಾಮಿ। ತರ್ಪಯಾಮಿ।
ಸಾಮವೇದಂ ತರ್ಪಯಾಮಿ। ತರ್ಪಯಾಮಿ।
ಅಥರ್ವಣವೇದಂ ತರ್ಪಯಾಮಿ। ತರ್ಪಯಾಮಿ।
ಇತಿಹಾಸಪುರಾಣಂ ತರ್ಪಯಾಮಿ। ತರ್ಪಯಾಮಿ।

**ಟಿಪ್ಪಣಿ:** ಇಲ್ಲಿ "ವಿಶ್ವಾನ್ದೇವಾನ್ ಕಾಣ್ಡಋಷೀನ್ ತರ್ಪಯಾಮಿ" ಎಂದು ಮೂರು ಬಾರಿ ಬಂದಿದೆ. ಮೊದಲನೆಯದು ಯಜುರ್ವೇದಿಯ ಕಾಂಡದ್ರಷ್ಟಾರರಾದ ಋಷಿಗಳು. ಎರಡನೆಯದರಲ್ಲಿ ಮಂತ್ರ-ಸೂಕ್ತ ದ್ರಷ್ಟಾರರಾದ ವಿಶ್ವೇದೇವ ಋಷಿಗಳನ್ನೂ ಮೂರನೆಯ ಬಾರಿ ಮಂತ್ರ-ಬ್ರಾಹ್ಮಣ ದ್ರಷ್ಟಾರರಾದ ವಿಶ್ವೇದೇವ ಋಷಿಗಳನ್ನೂ ಸ್ಮರಿಸಿದೆ.

3. **ಪಿತೃತರ್ಪಣ: (ತಂದೆ ಇಲ್ಲದವರು ಪ್ರಾಚೀನಾವೀತದಲ್ಲೂ ತಂದೆ ಇರುವವರು ಎಡಹೆಬ್ಬೆರಳಿಗೆ ಜನಿವಾರ ಸಿಕ್ಕಿಸಿಕೊಂಡು ತರ್ಪಣ ಕೊಡಬೇಕು.)**

ಸೋಮಃ ಪಿತೃಮಾನ್ ಯಮೋಽಙ್ಗಿರಸ್ವಾನ್ ಅಗ್ನಿಷ್ವಾತ್ತಾ ಅಗ್ನಿಃ
ಕವ್ಯವಾಹನಾದಯೋ ಯೇ ಪಿತರಃ ತಾನ್ ಪಿತೄನ್
ತರ್ಪಯಾಮಿ। ತರ್ಪಯಾಮಿ। ತರ್ಪಯಾಮಿ।
ಸರ್ವಾನ್ ಪಿತೄನ್ ತರ್ಪಯಾಮಿ। ತರ್ಪಯಾಮಿ। ತರ್ಪಯಾಮಿ।
ಸರ್ವಪಿತೃಗಣಾನ್ ತರ್ಪಯಾಮಿ। ತರ್ಪಯಾಮಿ। ತರ್ಪಯಾಮಿ।
ಸರ್ವಪಿತೃಪತ್ನೀಃ ತರ್ಪಯಾಮಿ। ತರ್ಪಯಾಮಿ। ತರ್ಪಯಾಮಿ।
ಸರ್ವಪಿತೃಗಣಪತ್ನೀಃ ತರ್ಪಯಾಮಿ। ತರ್ಪಯಾಮಿ। ತರ್ಪಯಾಮಿ।

ಊರ್ಜಂ ವಹನ್ತೀರಮೃತಂ ಘೃತಂ ಪಯಃ ಕೀಲಾಲಂ ಪರಿಸ್ರುತಮ್।
ಸ್ವಧಾಃಸ್ಥ ತರ್ಪಯತ ಮೇ ಪಿತೄನ್ ತೃಪ್ಯತ ತೃಪ್ಯತ ತೃಪ್ಯತ॥

'ಅಬ್ದೇವತೆಗಳೇ, ಬಲಕಾರಣವಾದ ರಸವನ್ನೂ, ಅಮೃತರೂಪವಾದ ಅನ್ನವನ್ನೂ, ತುಪ್ಪವನ್ನೂ ನೀವು ಹರಿಸುತ್ತಿರುವಿರಿ. ತಂಪನ್ನುಂಟುಮಾಡುವ ನೀರು ಸುತ್ತಲೂ ಹರಿದದ್ದಾಗಿದೆ. ನೀವು ಸ್ವಧಾರೂಪರಾಗಿರುವಿರಿ. ನಮ್ಮ ಪಿತೃಗಳನ್ನು ತೃಪ್ತಿಪಡಿಸಿರಿ. ಪಿತೃಗಳೇ! ನೀವು ತೃಪ್ತಿಹೊಂದಿರಿ'.

ಎಡಗೈಯಲ್ಲಿ ನೀರನ್ನಿಟ್ಟುಕೊಂಡು ಬಲಗೈನಿಂದ ಯಜ್ಞೋಪವೀತದ ಬ್ರಹ್ಮಗ್ರಂಥಿಯನ್ನು ಜೀವತ್ಪಿತೃಕರು ಪ್ರದಕ್ಷಿಣೆಯಾಗಿಯೂ, ಮೃತಪಿತೃಕರು ಅಪ್ರದಕ್ಷಿಣೆಯಾಗಿಯೂ ಮೂರು ಬಾರಿ ಸುತ್ತಿ ಆ ಗ್ರಂಥಿಯನ್ನು ಕಣ್ಣುಗಳಿಗೆ ಒತ್ತಿಕೊಳ್ಳುವುದು ಆಚಾರದಲ್ಲಿದೆ. ಕೆಲವರು ಮೂರು ಬಾರಿ ಕೈಯನ್ನು ವರ್ತುಲಾಕಾರವಾಗಿ ಸುತ್ತುತ್ತ ನೆಲದ ಮೇಲೆ ನೀರು ಬಿಡುತ್ತಾರೆ.

॥ ಇತಿ ಬ್ರಹ್ಮಯಜ್ಞಮ್ ॥

# ಭಾಗ - 6

## ಪರಿಶಿಷ್ಟ

1. ಉಪನಯನ ಪ್ರಧಾನಹೋಮದ ಮಂತ್ರಾರ್ಥ: (ಪ್ಯಾರಾ 17/ಭಾಗ - 3)

**ಮಂತ್ರ (1):** "ಯೋಗೇ ಯೋಗೇ...." ವಟುವು ಅಗ್ನಿಯನ್ನು ಕುರಿತು ಹೇಳುತ್ತಾನೆ. "ಬ್ರಹ್ಮಚರ್ಯಾಶ್ರಮ ಸಂಬಂಧವಾದ ಕಾರ್ಯಗಳು ಎಲ್ಲಿ ಎಲ್ಲಿ ಯಾವಾಗ ನಡೆದರೂ ನೀನು ಹವ್ಯವಾಹಕನಾದ್ದರಿಂದ ನಮ್ಮೊಡನೆ ಅಲ್ಲಿ ಇರಬೇಕಾಗುವುದು. ಆ ಕಾಲದಲ್ಲಿ ಮಾಡುವ ಪ್ರಯಾಣದಲ್ಲಿ ನಮಗೆ ರಕ್ಷಣೆಗಾಗಿ ನಾನು ಇಂದ್ರನನ್ನು ಸ್ತುತಿಸಿ ಅವನ ಸ್ನೇಹ ಪಡೆಯುತ್ತೇನೆ. ಆದ್ದರಿಂದ ಈ ಆಹುತಿಯು ಇಂದ್ರನಿಗೆ ಸೇರಲಿ."

**ಮಂತ್ರ (2):** "ಇಮಮಗ್ನ...." ಆಚಾರ್ಯನು ವಟುವಿಗೆ ದೀರ್ಘಾಯುಸ್ಸು ಉಂಟಾಗಲೆಂದು ಪ್ರಾರ್ಥಿಸುವ ಈ ಮಂತ್ರದಲ್ಲಿ "ಎಲೈ ಅಗ್ನಿಯೇ, ಈ ಬ್ರಹ್ಮಚಾರಿಯು ದೀರ್ಘಾಯುಷ್ಮಂತನೂ ವರ್ಚಸ್ವಿಯೂ ಆಗಲಿ. ಮುಂದೆ ಪುತ್ರವಂತನಾಗಲಿ. ಎಲೈ ಸೋಮರಾಜ ಮತ್ತು ಅದಿತಿಯರೇ, ನೀವು ಈ ವಟುವಿಗೆ ಮಾತೃವಾತ್ಸಲ್ಯವನ್ನು ನೀಡಿರಿ. ಎಲೈ ವಿಶ್ವದೇವತೆಗಳೇ, ನೀವೂ ಇವನಿಗೆ ದೀರ್ಘಾಯುಸ್ಸನ್ನೂ ಸೌಖ್ಯವನ್ನೂ ಕೊಡಿರಿ. ಈ ಆಹುತಿಯು ಅಗ್ನಿ, ವರುಣ, ಸೋಮ, ಅದಿತಿ, ವಿಶ್ವದೇವರುಗಳಿಗೆ ಸೇರಲಿ."

**ಮಂತ್ರ (3):** "ಶತಮಿನ್ನು ಶರದೋ...." ಎಂಬ ಮಂತ್ರದಲ್ಲಿ ವಟುವು ತನಗೆ ಶತವರ್ಷ ಪೂರ್ಣ ನಿರುಪಾಧಿಕವಾದ ಕರ್ಮಯೋಗ್ಯವಾದ ಜೀವನವಿರಲಿ ಎಂದು ಬೇಡುತ್ತಾನೆ. "ಎಲೈ ದೇವತೆಗಳೇ, ಮನುಷ್ಯನ ನೂರುವರ್ಷಗಳ ಆಯುಸ್ಸು ಅತ್ಯಲ್ಪವು. ಬಾಲ್ಯ, ಯೌವ್ವನದ ಪೂರ್ವಾರ್ಧವು ದಾರಾಪುತ್ರರ ರಕ್ಷಣೆಯಲ್ಲೂ ಉತ್ತರಾರ್ಧವು ಶಿಥಿಲವಾದ ದೇಹದಿಂದಲೂ ಕೂಡಿರುತ್ತದೆ. ಹೀಗಾಗಿ ನಿರುಪಾಧಿಕವಾದ ಆಯುಸ್ಸು ಬಹಳ ಸ್ವಲ್ಪವೇ ಸಿಗಬಹುದು. ಇಂತಹ ಆಯುಸ್ಸನ್ನು ನನಗೆ ಪೂರ್ಣವಾಗಿ ನೂರು ವರ್ಷಗಳು ಸದೃಢವಾಗಿರುವಂತೆ ಕರುಣಿಸಿ ಆಮೇಲೆ ತಾನಾಗಿಯೇ ಹೋಗುವಂತೆ ಆಗಲಿ. ಈ ಆಹುತಿಯು ಆ ದೇವತೆಗಳಿಗೆ ಸೇರಲಿ."

**ಮಂತ್ರ (4):** "ಅಗ್ನಿಷ್ಟ ಆಯು...." ಎಂಬ ಮಂತ್ರದಲ್ಲಿ ಆಚಾರ್ಯನು ವಟುವನ್ನು ಕುರಿತು ಹೇಳುತ್ತಾನೆ. "ಅಗ್ನಿಯು ನಿನಗೆ ದೀರ್ಘವಾದ ಆಯುಸ್ಸನ್ನು ಕೊಡಲಿ, ಪುಷ್ಟಿಯನ್ನು ಕೊಡಲಿ. ಈ ಆಹುತಿಯು ದೇವಶ್ರೇಷ್ಠರಾದ ಅಗ್ನಿ, ಇಂದ್ರ, ಮರುತ್ತುಗಳು ಮತ್ತು ಆದಿತ್ಯರಿಗೆ ಸೇರಲಿ."

**ಮಂತ್ರ (5):** "ಮೇಧಾಂಮಹ್ಯ...." ಎಂಬ ಮಂತ್ರವನ್ನು ವಟುವು ಹೇಳು ತ್ತಾನೆ. "ನನಗೆ ಅಂಗೀರಸ ಋಷಿಗಳೂ ಸಪ್ತಋಷಿಗಳೂ ಮೇಧಾಶಕ್ತಿಯನ್ನು ಕೊಟ್ಟರು. (ಬ್ರಹ್ಮಚಾರಿಗೆ ಬಹುಮುಖ್ಯವಾಗಿ ಬೇಕಾದ) ಈ ಮೇಧಾಶಕ್ತಿ (ಗ್ರಹಣ ಶಕ್ತಿ, ಗ್ರಂಥಧಾರಣ ಶಕ್ತಿ)ಯನ್ನು ಪ್ರಜಾಪತಿಯೂ ಅಗ್ನಿದೇವನೂ ಸಹ ಕೊಡಲಿ. ಈ ಆಹುತಿಯು ಅಂಗಿರಸ್ಸು, ಸಪ್ತರ್ಷಿಗಳು, ಪ್ರಜಾಪತಿ ಮತ್ತು ಅಗ್ನಿಗೂ ಸೇರಲಿ."

**ಮಂತ್ರ (6):** "ಅಪ್ಸರಾಸು ಚ ಯಾ ಮೇಧಾ...." ಎಂಬ ಮಂತ್ರವನ್ನು ವಟುವು ಹೇಳುತ್ತಾನೆ. "ಅಪ್ಸರಸ್ಸರಲ್ಲಿ ಇರುವ ಮೇಧಾಶಕ್ತಿಯೂ, ಗಂಧರ್ವರಲ್ಲಿರುವ ಯಶಸ್ಸೂ, ದೇವತೆಗಳಲ್ಲಿರುವ ದೈವಿಕವಾದ ಹಾಗೂ ಮನುಷ್ಯರಲ್ಲಿ ಇರುವ ಮಾನುಷ ಮೇಧಾಶಕ್ತಿಯೂ ನನ್ನಲ್ಲಿ ಬಂದು ಸೇರಲಿ. ಈ ಆಹುತಿಯು ಮೇಧಾದೇವಿಗೆ ಸೇರಲಿ."

**ಮಂತ್ರ (7):** "ಇಮಂ ಮೇ ವರುಣ...." ಎಂಬ ಅತ್ಯಂತ ಪ್ರಸಿದ್ಧವಾದ ವರುಣದೇವತಾಕವಾದ ಮಂತ್ರವನ್ನು ವಟುವು ಹೇಳುತ್ತಾನೆ, "ಎಲೈ ವರುಣನೇ ನನ್ನ ಪ್ರಾರ್ಥನೆಯನ್ನು ಕೇಳಿ ಈಗಲೇ ಸುಖವನ್ನು ನೀಡು. ನೀನು ಕಾಪಾಡುತ್ತೀಯೆಂದು ನಿನ್ನನ್ನು ಸ್ತುತಿಸುತ್ತಿದ್ದೇನೆ. ಈ ಆಹುತಿಯು ವರುಣನಿಗೆ ಸಲ್ಲಲಿ."

**ಮಂತ್ರ (8):** "ತತ್ತ್ವಾಯಾಮಿ ಬ್ರಹ್ಮಣಾ...." ಎಂಬ ಈ ಮಂತ್ರದಿಂದಲೂ ವರುಣನ ಪ್ರಾರ್ಥನೆಯನ್ನು ಮಾಡುತ್ತಾನೆ. "ಬಹುಸ್ತುತ್ಯನಾದ ವರುಣನೇ, ನನ್ನ ಆಯುಸ್ಸನ್ನು ಕಳೆಯಬೇಡ. ಕೋಪಗೊಳ್ಳದೆ ನಾನು ಕರ್ಮಮಾಡುವಾಗ ಹೇಳುವ ಮಂತ್ರಾರ್ಥವನ್ನು ಅರಿತುಕೊಂಡು ಅನುಗ್ರಹಿಸು. ಹೀಗೆ ಮಂತ್ರದಿಂದ ಸ್ತೋತ್ರ ಮಾಡುತ್ತಾ ಹವಿಸ್ಸನ್ನು ಅರ್ಪಿಸುವ ಎಲ್ಲ ಯಜಮಾನರೂ ಇದನ್ನೇ ಬಯಸುತ್ತಾರೆ. ಅಂದರೆ ತಮಗೆ ಯಥಾರ್ಥ ಮಂತ್ರಜ್ಞಾನವು ಉಂಟಾಗಲೆಂದು ಇಚ್ಛೆಪಡುತ್ತಾರೆ. ಈ ಆಹುತಿಯು ವರುಣನಿಗೆ ಸಲ್ಲಲಿ."

**ಮಂತ್ರ (9):** "ತ್ವಂ ನ್ನೋ ಅಗ್ನೇ ವರುಣಸ್ಯ...." ಎಂಬ ಮಂತ್ರದಿಂದ ವಟುವು ಅಗ್ನಿಯನ್ನು ಪ್ರಾರ್ಥಿಸುತ್ತಾನೆ. "ಸರ್ವಜ್ಞನಾದ ಅಗ್ನಿಯೇ, ನೀನು ವರುಣನ ಕೋಪ ವನ್ನು ಶಮನಮಾಡು. ನೀನು ದೊಡ್ಡ ಯಜಮಾನನೂ ಹಾಗೂ ಹವ್ಯವಾಹನನೂ ದಿವ್ಯಾತ್ಮನೂ ಆಗಿರುವುದರಿಂದ ನಮ್ಮ ಶತ್ರುಗಳನ್ನು ಬಂಧಿಸುವುದಾಗಲೀ, ವಧಿಸುವು ದಾಗಲೀ ಮುಂತಾದ ವಿಚಾರಗಳನ್ನು ನಮ್ಮಿಂದ ದೂರವಿರಿಸು. ಈ ಆಹುತಿಯು ಅಗ್ನಿ ಮತ್ತು ವರುಣನಿಗೆ ಸೇರಲಿ."

**ಮಂತ್ರ (10):** "ಸ ತ್ವಂ ನೋ ಅಗ್ನೇ...." ಎಂಬ ಮಂತ್ರದಿಂದ ಮತ್ತೆ ಅಗ್ನಿ ವರುಣರನ್ನು ವಟುವು ಪ್ರಾರ್ಥಿಸುತ್ತಾನೆ, "ಅಗ್ನಿಯೇ, ನೀನು ಮೇಲೆ ಹೇಳಿದ ಗುಣ ಸಂಪತ್ತಿನಿಂದ ದೇವತೆಗಳಲ್ಲೆಲ್ಲ ಮೊದಲನೆಯವನಾಗಿದ್ದೀಯೆ. ನಮ್ಮನ್ನು ಕಾಪಾಡುತ್ತ ಹತ್ತಿರವೇ ಇರುತ್ತಿರು. ನಮ್ಮಲ್ಲಿರುವ ವರುಣ ಪಾಶಗಳನ್ನು ಹಿಂತಿರುಗುವಂತೆ ವರುಣನಿಗೆ ಹವಿಸ್ಸನ್ನು ಕೊಡು. ನೀನು ನಾವು ಕೊಡುವ ಪುರೋಡಾಶಾದಿಗಳನ್ನು ಸ್ವೀಕರಿಸು. ನಮ್ಮ ಯಜ್ಞಗಳಿಗೆ ದಯಮಾಡಿಸಿ ನಮ್ಮನ್ನು ರಕ್ಷಿಸು. ಈ ಆಹುತಿಯು ಅಗ್ನಿ ವರುಣರಿಗೆ ಸೇರಲಿ."

**ಮಂತ್ರ (11):** "ತ್ವಮಗ್ನೇ ಅಯಾಸ್ಯಯಾ...." ಈ ಮಂತ್ರದಿಂದ ವಟುವು ಅಗ್ನಿಯನ್ನು ಪ್ರಾರ್ಥಿಸುತ್ತಾನೆ. "ಎಲೈ ಅಗ್ನಿಯೇ, ನೀನು ನಮ್ಮಗಳ ಬಳಿ ಬಂದು ಮನಸ್ಸಿಗೆ ಹಿತವಾದವನಾಗಿದ್ದೀಯೆ. ನೀನು ಹವ್ಯವಾಹಕನಾಗಿ ನಮ್ಮಲ್ಲಿಗೆ ಬಂದು ನಮಗೆ ಶ್ರೇಷ್ಠವಾದ (ಸರ್ವ ಸಂಕಟನಿವಾರಕವಾದ) ಔಷಧಿಯನ್ನು ನೀಡು. ಈ ಆಹುತಿಯು ಅಯಸಾಗ್ನಿಗೆ ಸೇರಲಿ." ('ಅಯಃ' ಎಂದರೆ ಶುಭವನ್ನುಂಟುಮಾಡುವ ಕರ್ಮ. ಅಯಸಾಗ್ನಿ ಎಂದರೆ ಅಂತಹ ಶುಭಕರ್ಮಫಲ ಸಂವಾಹಕನಾದ ಅಗ್ನಿ ಎಂದರ್ಥ.)

**॥ ಶ್ರೀರಾಮಚಂದ್ರಾರ್ಪಣಮಸ್ತು ॥**

# ಭಾಗ - 7

# ಉಪನಯನ ಪ್ರಯೋಗಃ

ಅಥ ಉಪನಯನಸ್ಯ ಕರ್ತಾ ಪಿತ್ರಾದಿಃ ಆಚಾರ್ಯಃ ಉಪನಯನಾತ್ಪೂರ್ವೇಷು ದಿನೇಷು ಸ್ವಸ್ಯ ಗಾಯತ್ರ್ಯುಪದೇಶಕರಣಯೋಗ್ಯತಾಸಿದ್ಧಿದ್ವಾರಾ ಗಾಯತ್ರೀಪ್ರದಾನಾರ್ಥಂ ದ್ವಾದಶಸಹಸ್ರಾವೃತ್ತಂ ಗಾಯಿತ್ರೀಮಂತ್ರಜಪಂ ಕರಿಷ್ಯೇ— ಇತಿ ಸಂಕಲ್ಪ್ಯ ಯಥಾವಿಧಿ ಜಪಂ ಕುರ್ಯಾತ್॥

ಅಥೋಪನಯನದಿನಾತ್ಪೂರ್ವೇದ್ಯುಃ ಸಂಭಾರಾನ್ ಉಪವೀತಾಜಿನಮೇಖಲಾ-ವಾಸಸೀ ಕೌಪೀನ ಭಿಕ್ಷಾಪಾತ್ರಾದೀನ್ ಸಂಭೃತ್ಯ। ಗ್ರಹಯಜ್ಞಪಕ್ಷೇ ಪ್ರಾಣಾನಾಯಮ್ಯ — ದೇಶಕಾಲೌ ಸಂಕೀರ್ತ್ಯ ಅಸ್ಯ ಕುಮಾರಸ್ಯ ಶ್ವಃ ಕರಿಷ್ಯಮಾಣಸ್ಯ ಉಪನಯನ-ಕರ್ಮಣಃ ಗ್ರಹಾನುಕೂಲ್ಯಸಿದ್ಧ್ಯರ್ಥಂ ಗ್ರಹಯಜ್ಞಂ ಕರಿಷ್ಯೇ — ಇತಿಸಂಕಲ್ಪ್ಯ ಕುರ್ಯಾತ್। ತತ ಉಪನಯನಾಂಗಂ **ಅಭ್ಯುದಯಂ** ಯಥಾಶಕ್ತಿ ಅನ್ನಾದಿನಾ, ಹಿರಣ್ಯರೂಪೇಣ ವಾ (ಯಥಾಚಾರಂ ನಾಂದ್ಯಾಹ್ವಾನಾದಿ) ಪೂರ್ವವತ್ಕುರ್ಯಾತ್। (ಸಂಪ್ರದಾಯಾನುರೋಧೇನ **ಕುಲದೇವತಾ** ಪೂಜಾದಿಕಂ ಕುರ್ಯಾತ್। ತಸ್ಯಾಂ ರಾತ್ರೌ **ಉದಕಶಾಂತ್ಯಂಕುರಪ್ರತಿಸರಬನ್ಧಾಂಶ್ಚ** ಕುರ್ವಂತಿ) ಉಪನಯನದಿನೇ ಪ್ರಾತಃ ಸಕುಮಾರೌ ದಂಪತೀ ಮಂಗಳಸ್ನಾನಂ ಕೃತ್ವಾ ಪೂರ್ವವತ್ಕುಲದೇವತಾ ಪ್ರಾರ್ಥನಾದಿ **ಗಣಪತಿಪೂಜಾಂತಂ** ಕೃತ್ವಾ ಕೌಪೀನಧರಂ ಶುಚಿವಸ್ತ್ರಂ ತೂಷ್ಣೀಮಾಚಾಂತಂ ಕುಮಾರಂ ದಕ್ಷಿಣತ ಉಪವೇಶ್ಯ ಪೂರ್ವೇದ್ಯುರಕೃತಂ ಚೇದಭ್ಯುದಯಾದಿಕಂ ಯಥಾವತ್ಕುರ್ಯಾತ್। ಕೃತೇಪಿ ಪೂರ್ವೇದ್ಯುರಭ್ಯುದಯೇ ಕರ್ಮಾದೌ ಪುಣ್ಯಾಹವಾಚನಂ ಕುರ್ಯಾತ್ ॥

ತಾಂಬೂಲ ದಕ್ಷಿಣಾದಿ ಗೃಹೀತ್ವಾ ವಟುರುತ್ಥಾಯ **ನಮಸ್ಸದಸೇ** ಇತಿ ಸಭ್ಯಾನ್ನಮಸ್ಕೃತ್ಯ — ಅಶೇಷೇ ಹೇ ಪರಿಷತ್ ಮಯಾ ಸಮರ್ಪಿತಾಮಿಮಾಂ ಸೌವರ್ಣೀಂ ಯತ್ಕಿಂಚಿತ್ ದಕ್ಷಿಣಾಂ ಯಥೋಕ್ತ ದಕ್ಷಿಣಾತ್ವೇನ ಸ್ವೀಕೃತ್ಯ — ನಕ್ಷತ್ರೆ ರಾಶೌ ಜಾತಸ್ಯಾಮುಕಶರ್ಮಣೋ ಮಮ ಜನನಪ್ರಭೃತಿ ಸವರ್ಣಾ ಸವರ್ಣಾ-ನೇಕಜನಸ್ತನ್ಯಪಾನ ವಿಜಾತೀಯಸಹಚರ ಕ್ರೀಡಾಸಲ್ಲಾಪ ಸಹಭೋಜನ ಪರ್ಯುಷಿತೋಚ್ಛಿಷ್ಟಭೋಜನ ತಿಷ್ಠನ್ಮೂತ್ರಪುರೀಷೋತ್ಸರ್ಜನ ತತ್ಕಾಲಶೌಚಾಭಾವ ಜನಿತಾನಾಂ ಕಾಮಚಾರವಾದಭಕ್ಷಪ್ರಭೃತೀನಾಂ ಸರ್ವೇಷಾಂ ಪಾಪನಾಮಪನೋದನದ್ವಾರಾ ಉಪನಯನ ಯೋಗ್ಯತಾ ಸಿದ್ಧಿರಸ್ತ್ವಿತಿ ಮಾಮನುಗೃಹಾಣ। **ಹಿರಣ್ಯಗರ್ಭ ಗರ್ಭಸ್ಥಂ** — ಇದಂ ಪ್ರಾಯಶ್ಚಿತ್ತ ಪ್ರತ್ಯಾಮ್ನಾಯ

ಹಿರಣ್ಯದಾನಂ ಶ್ರೀಮಹಾವಿಷ್ಣುಪ್ರೀತಿಂ ಕಾಮಯಮಾನಃ ತುಭ್ಯಮಹಂ ಸಂಪ್ರದದೇ ನಮಮ । ಉಪನಯನ ಯೋಗ್ಯತಾಸಿದ್ಧಿರಸ್ತು — ಇತಿ ಪ್ರತಿವಚನಮ್ ॥

ಅಥ ಉಪನಯನಕರ್ಮಣಃ **ಪುಣ್ಯಾಹವಾಚನಂ** ಕರಿಷ್ಯೇ ಇತ್ಯಾಚಾರ್ಯೋ ವರುಣಪೂಜಾಂ ಕೃತ್ವಾ ಬ್ರಾಹ್ಮಣಾನನ್ನಾದಿನಾ ತೋಷಯಿತ್ವಾ ಉಪನಯನಕರ್ಮಣಃ ಪುಣ್ಯಾಹಂ ಭವಂತೋ ಬ್ರುವಂತು । ತಥಾ ಕರ್ಮಣೇ ಸ್ವಸ್ತಿ । ಕರ್ಮಣ ಋದ್ಧಿಮಿತಿ ವಾಚಯಿತ್ವಾ — ಪ್ರಜಾಪತಿಃ ಪ್ರೀಯತಾಮಿತ್ಯುಕ್ತ್ವಾ — ಪುಣ್ಯಾಹಜಲೇನ ಯಜ್ಞೋಪವೀತಂ ಕುಮಾರಂ ಚ ಪ್ರೋಕ್ಷ್ಯ ॥

ಮಮ ಕುಮಾರಸ್ಯ ಉಪನಯನಾಂಗ **ರಕ್ಷಾಸೂತ್ರ**ಧಾರಣಂ ಕರಿಷ್ಯೇ। ಇತಿ ಸಂಕಲ್ಪ್ಯ ಪೂಜಾಂ ಕೃತ್ವಾ, **ನಮೋ ಅಸ್ತು ಸರ್ಪೇಭ್ಯಃ** ಇತಿ ಮಂತ್ರೇಣ ಆವಾಹ್ಯ, **ಬೃಹತ್ಸಾಮೇತಿ** ಧಾರಯೇತ್।

ಪ್ರಾಣಾನಾಯಮ್ಯ — ಕುಮಾರಸ್ಯ ಆಚಮನಯೋಗ್ಯತಾ ಸಿದ್ಧ್ಯರ್ಥಂ **ನವತಂತುಧಾರಣಂ** ಕರಿಷ್ಯೇ — ಇತಿ ಸಂಕಲ್ಪ್ಯ ಪೂಜಯಿತ್ವಾ। **ನವೋ ನವೋ ಭವತೀತಿ** ನವತಂತುಂ ಧಾರಯಿತ್ವಾ, ಕುಮಾರಂ ಸ್ವಾಹಾಕಾರವರ್ಜಂ ತೂಷ್ಣೀಂ ಆಚಮಯ್ಯ ಯಜ್ಞೋಪವೀತಂ ಧಾರಯೆಯುಃ॥

ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ನಕ್ಷತ್ರೇ ರಾಶೌ ಜಾತಸ್ಯ ಅಮುಕ-ಶರ್ಮಣಃ (ಮಮ) ಕುಮಾರಸ್ಯ (ದ್ವಿಜತ್ವ ಸಿದ್ಧ್ಯರ್ಥಂ) ಶ್ರೌತಸ್ಮಾರ್ತಕರ್ಮಾನುಷ್ಠಾನ ಯೋಗ್ಯತಾಸಿದ್ಧ್ಯರ್ಥಂ (ಬ್ರಹ್ಮತೇಜೋಭಿವೃದ್ಧ್ಯರ್ಥಂ) ಯಜ್ಞೋಪವೀತಂ ಧಾರಯಿಷ್ಯೇ — ತದರ್ಥಂ ಯಜ್ಞೋಪವೀತಪೂಜಾಂ ಕೃತ್ವಾ ಯಜ್ಞೋಪವೀತಂ ದಾಪಯೆತ್। ಯಜ್ಞೋಪವೀತ ದೇವತಾಭ್ಯೋ ನಮಃ ಧ್ಯಾನಾದಿ ಷೋಡಶೋಪಚಾರ ಪೂಜಾಂ ಸಮರ್ಪಯಾಮಿ। ತತೋ ಯಥಾಶಕ್ತಿ ದಕ್ಷಿಣಾಂ ಯಜ್ಞೋಪವೀತಂ ಗೋಪೀಚಂದನಂ ಸಹೈವ ದಾಪಯಿತ್ವಾ। ಶಿಷ್ಟೈರನುಗ್ರಹಂ ಕಾರಯಿತ್ವಾ ಕುಮಾರಂ ತೂಷ್ಣೀಮಾಚಮಯ್ಯ **ಯಜ್ಞೋಪವಿತಂ ಪರಮಂ ಪವಿತ್ರಂ** ಇತಿ ಮಂತ್ರೇಣ ಕುಮಾರಸ್ಯ ಯಜ್ಞೋಪವೀತಂ ದಕ್ಷಿಣಬಾಹುಂ ಪ್ರವೇಶ್ಯ ಶಿರಸಿ ಪ್ರತಿಮುಂಚೆತ್ — ತತಸ್ತನ್ಮಂತ್ರಂ ವಾಚಯಿತ್ವಾ ಆಚಾಮಯೇತ್॥ ಯಜ್ಞೋಪವೀತಧಾರಣ ಮುಹೂರ್ತಸ್ಸುಮುಹೂರ್ತೋಽಸ್ತ್ವಿತ್ಯನುಗೃಹ್ಣಂತು — ಸುಮುಹೋರ್ತೋಽಸ್ತು॥

ಆಚಾಂತಂ ಕುಮಾರಂ ಮಾತ್ರಾ ಬ್ರಾಹ್ಮಣೈಶ್ಚ ಸಹ ಆಚಾರ್ಯಃ ಸ್ವಯಂ ಮಂತ್ರಮುಕ್ತ್ವಾ ಪ್ರೋಕ್ಷಣ ಪರಿಷೇಚನಾನಿ ಕೃತ್ವಾ — ಆಪೋಶನ ಪ್ರಾಣಾಹುತಿ ಸಹಿತಂ ಕ್ಷಾರಲವಣವರ್ಜಂ ಭೋಜಯೇತ್। ಭೋಜನಾನಂತರಮುತ್ತರಾ-ಪೋಶನಂ ಪ್ರಾಶಯಿತ್ವಾ — ಹಸ್ತಂ ಪಾದೌ ಚ ಪ್ರಕ್ಷಾಲಯಿತ್ವಾ ದ್ವಿರಾಚಾಮಯೇತ್॥

ಅಥ **ಚೌಲವತ್** ನಾಪಿತೇನೋಪ್ತಕೇಶಂ ಸುಸ್ನಾತಂ ಧೃತಕೌಪೀನಂ ಶುದ್ಧ-ವಸ್ತ್ರಾಚ್ಛನ್ನಂ ಧೃತೋರ್ಧ್ವಪುಂಡ್ರಂ ಬದ್ಧಶಿಖಂ ಅಲಂಕೃತಮಾಚಾಂತಂ ಕುಮಾರಂ ಆಚಾರ್ಯೋ ದರ್ಭಾಸನೇ ದಕ್ಷಿಣತ ಉಪವೇಶ್ಯ — ಶ್ರೋತ್ರಿಯಾಗಾರಾದಗ್ನಿ-ಮಾಹೃತ್ಯ ಯತ್ರಕ್ವಚಿತಿ ವಿಧಿನಾಗ್ನೇರುಪಸಮಾಧಾನಾದಿ ಪಾತ್ರಪ್ರಯೋಗಕಾಲೇ ಪರಿಧ್ಯರ್ಥೇ ಶಮ್ಯಾಃ ಸಮಿತ್ಕುಶಾಂಬುಕೂರ್ಚವಸ್ತ್ರಾಶ್ಮದಂಡಾಜಿನಮೇಖಲಾಭಿಕ್ಷಾ-ಪಾತ್ರಂ ಚ ಪಾತ್ರೋತ್ತರತಸ್ಸಕೃತ್ ಪ್ರಯುಂಜ್ಯ ಸಮೌ ಸಾಗ್ರಾವಿತಿ ಪವಿತ್ರ-ಕರಣಾದ್ಯಾಜ್ಯಭಾಗಾಂತೇ॥

ಆಜ್ಯಾಭ್ಯಕ್ತಾಂ ಪಾಲಾಶೀಂ ಸಮಿಧಂ ಕುಮಾರಸ್ಯ ದಕ್ಷಿಣಹಸ್ತೇ ಪ್ರದಾಯ ತಂ ಹಸ್ತೇ ಗೃಹೀತ್ವಾ। **ಆಯುರ್ದಾ ದೇವ ಜರಸಂ ಗೃಣಾನೋ.... ಆಧೇಹಿ।** ಇತಿ ಮಂತ್ರಮಾಚಾರ್ಯಸ್ಸ್ವಯಮುಚ್ಚರನ್ ಮಂತ್ರಾಂತೇ ಆಧೇಹೀತ್ಯುಕ್ತ್ವಾ ಆಧಾಪಯೇತ್॥

**ಆತಿಷ್ಠೇಮಂ** — ಇತಿ ಮಂತ್ರೇಣ ಕುಮಾರಃ ಆಚಾರ್ಯಂ ಪ್ರದಕ್ಷಿಣಮಾಗತ್ಯ ಅಗ್ನೇರುತ್ತರತೋ ದಕ್ಷಿಣೇನ ಪದಾ ಮಂತ್ರಾಂತೇ ಅಶ್ಮಾನಮಾತಿಷ್ಠತಿ। ತತ್ರೈವತಿಷ್ಠತೋ ವಾಸೋ ಮೌಂಜ್ಯಜಿನ ಹಸ್ತಗ್ರಹಣ ಪರಿಧಾನಾನ್ಯುಕ್ತ್ವಾ ಅಥೈನಮುಪನಯತ್ಯಾಚಾರ್ಯಃ॥

**ರೇವತೀಸ್ತ್ವಾವ್ಯಕ್ಷ್ಣನ್**— ಇತಿ ದ್ವಾಭ್ಯಾಮಹತಂ ವಾಸ ಆಚಾರ್ಯೋಽಭಿಮಂತ್ರ್ಯ॥ **ಯಾ ಅಕೃನ್ತನ್ನವಯನ್** ಇತಿ ತ್ರಿಭಿಃ ಕುಮಾರಸ್ಯ ಕಟಿದೇಶೇ ಪ್ರದಕ್ಷಿಣಂ ಪರಿಧಾಪ್ಯ। **ಪರೀದಂ ವಾಸೋ** ಇತಿ ಪರಿಹಿತವಾಸಸಂ ಕುಮಾರಮನುಮಂತ್ರ್ಯ। **ಇಯಂ ದುರುಕ್ತಾತ್** — ಇತಿ ದ್ವಾಭ್ಯಾಂ ಕುಮಾರಸ್ಯ ಕಟಿದೇಶೇ ಮೌಂಜೀಂ ಮೇಖಲಾಂ ಪ್ರದಕ್ಷಿಣಂ ಪರಿವೀಯ, ನಾಭಿದೇಶೇ ಗ್ರಂಥಿಂ ಕೃತ್ವಾ ತೌ ಮಂತ್ರೌ ಕುಮಾರಂ ವಾಚಯೇತ್। **ಮಿತ್ರಸ್ಯ ಚಕ್ಷುಃ** — ಇತಿ ಕೃಷ್ಣಾಜಿನಮುತ್ತರಲೋಮಕಮುತ್ತರೀ-ಯಾರ್ಥೇ ಧಾರಯಿತ್ವಾ ತಂ ವಾಚಯೀತ। **ಆಗನ್ತ್ರಾ ಸಮಗನ್ಮಹಿ** ಇತಿ ಅಗ್ನೇರುತ್ತರತ

ಉತ್ತರಾಗ್ರಾಂದರ್ಭಾನ್ ಸಂಸ್ತೀರ್ಯ ತೇಷು ಕುಮಾರಂ ಪ್ರತ್ಯಙ್ಮುಖಿಮವಸ್ಥಾಪ್ಯ ತಂ ಮಂತ್ರಂ ವಾಚಯಿತ್ವಾ ಸ್ವಯಂ ಪ್ರಾಙ್ಮುಖಿಸ್ತಿಷ್ಠೇತ್। **ಸಮುದ್ರಾದೂರ್ಮಿಃ** ಇತಿ ಪ್ರತ್ಯಙ್ಮುಖಿಸ್ತಿಷ್ಠತಃ ಕುಮಾರಸ್ಯಾಂಜಲಾಲೌ ಉದಕಾಂಜಲಿಂ ನಿನೀಯ, ತೇನ ಜಲೇನ ಕುಮಾರಂ ಸಕೃನ್ಮಂತ್ರೇಣ ತ್ರಿಃ ಪ್ರೋಕ್ಷ್ಯ, ವಾಚಯಿತ್ವಾ॥

**ಅಗ್ನಿಷ್ಟೇ ಹಸ್ತಮಗ್ರಭೀತ್** — ಇತಿ ದಶನಾಂ ಮಂತ್ರಾಣಾಮಂತೇ ಕುಮಾರಸ್ಯ ಅಂಗುಷ್ಠಮುತ್ತಾನಂ ದಕ್ಷಿಣಹಸ್ತಂ ಗೃಹೀತ್ವಾ। **ಅಗ್ನಯೇ ತ್ವಾ ಪರಿದದಾಮಿ** — ಇತ್ಯೇತೈರೇಕಾದಶಭಿಃ ಪ್ರತಿಮಂತ್ರಂ ಶರ್ಮಾಂತೇ ಅಗ್ನ್ಯಾದಿಭ್ಯೋ ದೇವತಾಭ್ಯೋ ರಕ್ಷಣಾರ್ಥಂ ಕಿಂಚಿತ್ಕಿಂಚಿತ್ಪ್ರಸಾರ್ಯ ಹಸ್ತಂ ಪ್ರದರ್ಶ್ಯ ದದ್ಯಾತ್॥

ಅತ್ರ ಸುಮುಹೂರ್ತಂ ನಿರೀಕ್ಷ್ಯ **ಚೂರ್ಣಿಕಾ ಮಂಗಳಾಷ್ಟಕಾನಿ** ಪಠಿತ್ವಾ **ದೇವಸ್ಯ ತ್ವಾ ಸವಿತುಃ ಪ್ರಸವ ಉಪನಯೇ ಯಜ್ಞಶರ್ಮನ್** — ಇತಿ ಕುಮಾರಸ್ಯ ದಕ್ಷಿಣಹಸ್ತಂ ಗೃಹೀತ್ವಾ ಕುಮಾರಂ ಸ್ವಾಂಕೇ ಉಪವೇಶ್ಯ **ಸುಪ್ರಜಾ** — ಇತಿ ಕುಮಾರಸ್ಯ ದಕ್ಷಿಣೇ ಕರ್ಣೇ ಜಪತಿ। **ಬ್ರಹ್ಮಚರ್ಯಮಾಗಾಂ** — ಇತಿ ಕುಮಾರಂ ವಾಚಯಿತ್ವಾ। ಕುಮಾರಂ ದಕ್ಷಿಣೇ ಹಸ್ತೇ ಗೃಹೀತ್ವಾ **ಕೋನಾಮಾಸಿ** — ಇತ್ಯಾಚಾರ್ಯಃ ಪೃಚ್ಛತಿ। **ಯಜ್ಞಶರ್ಮಾನಾಮಾಸ್ಮಿ** ಇತಿಕುಮಾರಃ ಪ್ರತ್ಯಾಹ। **ಕಸ್ಯ ಬ್ರಹ್ಮಚಾರ್ಯಸಿ** ಯಜ್ಞಶರ್ಮನ್ ಇತ್ಯಾಚಾರ್ಯಃ। **ಪ್ರಾಣಸ್ಯ ಬ್ರಹ್ಮಚಾರ್ಯಸ್ಮಿ** ಇತಿ ಕುಮಾರಃ॥ **ಯಜ್ಞಶರ್ಮನ್ನೇಷ ತೇ** — ಇತ್ಯಾಚಾರ್ಯೋ ಜಪಿತ್ವಾ। **ಅಧ್ವನಾಮಧ್ವಪತೇ** ಇತಿ ಯಜುಃ ಕುಮಾರಂ ವಾಚಯೇತ್। ಕುಮಾರಃ ಪ್ರದಕ್ಷಿಣಮಗ್ನಿಂ ಕೃತ್ವಾ, ಆಚಾರ್ಯಸ್ಯ ದಕ್ಷಿಣತ ಉಪವಿಶೇತ್॥

ಅಥಾಚಾರ್ಯೋ **ಯೋಗಾದೀನ್ನವ** ಮಂತ್ರಾನ್ ಕುಮಾರಂ ವಾಚಯನ್ ಹಸ್ತಂ ಗೃಹೀತ್ವಾ, **ಇಮಮಗ್ನ ಆಯುಷೇ** — **ಅಗ್ನಿಷ್ಟ ಆಯುಃ** — ಇತಿ ಮಂತ್ರದ್ವಯಂ ಸ್ವಯಮುಚ್ಚಾರ್ಯ ಮಂತ್ರಾಂತೇ **ಸ್ವಾಹೇತಿ** ಕುಮಾರಮೇವ ವಾಚಯನ್ ಏಕಾದಶಾಜ್ಯಾಹುತೀಃ ಕುಮಾರಂ ಹಾವಯೇತ್॥

ಅಥಾಚಾರ್ಯ ಏವ ಏತತ್ಕರ್ಮ ಸಮೃದ್ಧ್ಯರ್ಥಂ ಸ್ರುವೇಣ ಜಯಾದಿ ಹೋಮಂ ಕರಿಷ್ಯೇ, ಇತಿ ಸಂಕಲ್ಪ್ಯ ತತ್ಕೃತ್ವಾ ಬರ್ಹಿಸ್ಸಮಂಜನವರ್ಜಂ ಶಮ್ಯಾ ಅಪೋಹ್ಯ। ಪ್ರಾಣಾನಾಯಮ್ಯ, ಅಸ್ಮಿನ್ನುಪನಯನಕರ್ಮಣಿ ಯಜುರ್ಭ್ರೇಷ ಪ್ರಾಯಶ್ಚಿತ್ತಂ ಕರಿಷ್ಯೇ — **ಭುವಸ್ಸ್ವಾಹಾ** — ವಾಯವ ಇದಮ್। ಅನಾಜ್ಞಾತ-ಮಿತ್ಯಾದಿ ಪ್ರಣೀತಾಮೋಕ್ಷಣಾಂತೇ॥

ಅಥಾಚಾರ್ಯಃ ಪ್ರಾಣನಾಯಮ್ಯ — ಪ್ರೀತ್ಯರ್ಥಂ ಮಮ ಕುಮಾರಸ್ಯ ಗಾಯತ್ರೀಪ್ರದಾನಕಾಲೇ ನಿರ್ವಿಘ್ನತಾ ಸಿದ್ಧ್ಯರ್ಥಂ **ಗಣಪತಿಪೂಜಾಂ ಸಾವಿತ್ರೀ ಪೂಜಾಂ** ಕರಿಷ್ಯೇ। ಇತಿ ಸಂಕಲ್ಪ್ಯ, ಮಾಣವಕಃ ಅಪರೇಣಾಗ್ನಿಂ ಪಂಚಭಿರ್ದರ್ಭೈಃ ಕೃತಕೂರ್ಚಂ ಉದಗಗ್ರಂ ನಿದಧಾತಿ। ತತ್ರಾಚಾರ್ಯಃ **ರಾಷ್ಟ್ರಭೃದಸೀತಿ** ಯಜುಷೋಪವಿಶತಿ। ಪುರಸ್ತಾತ್ ಪ್ರತ್ಯಙ್ಮುಖಾಸೀನಃ ಕುಮಾರೋ ದಕ್ಷಿಣೇನ ಪಾಣಿನಾ ಗುರೋರ್ದಕ್ಷಿಣಪಾದಮನ್ವಾರಭ್ಯ **ಸಾವಿತ್ರೀಂ ಭೋ ಅನುಬ್ರೂಹೀ**ತ್ಯಾಹ। ಆಚಾರ್ಯಃ ತಸ್ಮೈ **ಅನ್ವೇಹೀ**ತಿ ಪ್ರತಿಬ್ರೂಯಾತ್। ಕುಮಾರಂ ಉದಙ್ಮುಖಂ ಸ್ವಾಂಕೇ ನಿವೇಶ್ಯ **ಸಾವಿತ್ರೀ**ಮುಪದಿಶೇತ್। ಗಾಯತ್ರ್ಯುಪದೇಶಮುಹೂರ್ತಃ ಸುಮುಹೂರ್ತೋಽಸ್ತ್ವಿತ್ಯನುಗೃಹ್ಣಂತು। ಸುಮುಹೂರ್ತೋಽಸ್ತು । **ಅವೃಧಮಸೌ** ಇತಿ ಮಂತ್ರೇಣ ಕುಮಾರಃ ಸ್ವೀಯಮುತ್ತರೋಷ್ಠಮುಪಸ್ಪೃಶ್ಯ ಆಚಾಮೇತ್। **ಬ್ರಹ್ಮಣ ಆಣೀಸ್ಥಃ** ಇತಿ ಹಸ್ತಾಭ್ಯಾಂ ಕರ್ಣೌ ಯುಗಪದುಪಸ್ಪೃಶತಿ॥

**ಸುಶ್ರವಸ್ಸುಶ್ರವಸಂ ಮಾ ಕುರು** — ಇತ್ಯಾದಿ ಮಂತ್ರಾಂತೇ ಪಾಲಾಶಂ ದಂಡಮಾಚಾರ್ಯದತ್ತಂ ವಟುರ್ದಕ್ಷಿಣೇನ ಪಾಣಿನಾಽದತ್ತೇ। **ಸ್ಮೃತಂ ಚ ಮ** ಇತ್ಯೇತಮ್ ಮಂತ್ರಂ ಕುಮಾರಂ ವಾಚಯತಿ। ಗುರೋ ವರಂ ತೇ ದದಾಮಿ ಇತಿ, ಕುಮಾರೋ ಗಾಂ ದದ್ಯಾತ್ — ಅತ್ರಾಚಾರ್ಯಸ್ಸಪ್ತದಶಕೃತ್ವೋಪಾನ್ಯ **ದೇವಸ್ಯ ತ್ವೇತಿ** ಪ್ರತಿಗೃಹ್ಣೀಯಾತ್। ಬ್ರಹ್ಮಣೇವರಂ ದತ್ವಾ। ಅಥಾಚಾರ್ಯಃ ಪ್ರತ್ಯಙ್ಮುಖ-ಮಾಸೀನಂ ಕುಮಾರಂ **ಉದಾಯುಷೇ**ತ್ಯುತ್ಥಾಪ್ಯ ವಾಚಯೇತ್। **ತಚ್ಚಕ್ಷುರ್ದೇವ-ಹಿತಂ** ಇತ್ಯಾಚಾರ್ಯಃ ವಾಚಿತೈರ್ದಶಭಿರ್ಮಂತ್ರೈರ್ವಟುರಾದಿತ್ಯಮುಪತಿಷ್ಠತೇ॥ ಯಸ್ಮಿನ್ಭೂತಂ ಚ — **ಮಹ್ಯಂ ಗೃಹ್ಣಾಮಿ ಯಜ್ಞಶರ್ಮನ್** ಇತಿ ಕುಮಾರಸ್ಯ ಹಸ್ತಂ ಗೃಹ್ಣೀಯಾತ್॥

ಅಥ ಬ್ರಹ್ಮಚಾರಿಣಃ ತ್ರ್ಯಹಮಗ್ನಿಧಾರಣಂ, ಕ್ಷಾರಲವಣವರ್ಜನಂ ಚ ಭವತಿ। ಕುಮಾರಃ ಪ್ರಾಣಾನಾಯಮ್ಯ **ಪ್ರಾತಸ್ಸಮಿದಾಧಾನಂ** ಕರಿಷ್ಯೇ ಇತಿ ಸಂಕಲ್ಪ್ಯ ತತ್ ಕೃತ್ವಾ। ಸ್ವಪ್ರವರಮುಕ್ತ್ವಾ ನಮೇತ್। **ಯಸ್ಯಸ್ಮೃತ್ಯೇ**ತ್ಯಾದಿ ಕರ್ಮ ಸಮಾಪಯೇತ್॥

ತತಃ ಕುಮಾರಮಾಚಾರ್ಯಃ **ಬ್ರಹ್ಮಚಾರ್ಯಸೀ**ತ್ಯಾದೀನ್ ಷಡರ್ಥಾನ್ ಸಂಶಾಸ್ತಿ, ಪ್ರತಿಶಾಸನಂ ಕುಮಾರೋ **ಬಾಢಂ** ಇತಿ, ಪ್ರತಿಬ್ರೂಯಾತ್,

ಅಥಾಸ್ಮಾ ಅರಿಕ್ತಂ ಪಾತ್ರಂ ಪ್ರಯಚ್ಛನ್ನಾಚಾರ್ಯ ಆಹ, **ಮಾತರ ಮೇವಾಗ್ರೇಭಿಕ್ಷಸ್ವ** — ಇತಿ, ಸ ವಟುಃ, **ಭವತಿ ಭಿಕ್ಷಾಂ ದೇಹಿ** ಇತಿ ಮಾತರಮೇವಾಗ್ರೇ ಭಿಕ್ಷೇತ। ತತ್ಸಮಾಹೃತ್ಯೋಪನಿಧಾಯಾಚಾರ್ಯಾಯ ಪ್ರಾಹ, **ಭೈಕ್ಷಮಿದಮಿತಿ। ತತ್ಸುಭೈಕ್ಷಮ್** — ಇತ್ಯಾಚಾರ್ಯಸ್ತತ್ಪ್ರತಿ ಗೃಹ್ಣಾನ್ನಿಯತಃ ಸಂಧ್ಯಾತ್ರಯಮುಪಾಸೀತ। ಶ್ವ ಬ್ರಹ್ಮಯಜ್ಞಮಾರಭೇತ — ವೇದಸ್ಥಾನೇ ಗಾಯತ್ರೀಂ ಪಠೇತ್ ತಥಾ ಮಾಧ್ಯಾಹ್ನಿಕಾನಂತರಂ ನಿತ್ಯಂ ದೇವರ್ಷಿಪಿತೃತರ್ಪಣಂ ಕುರ್ಯಾತ್। ತ್ರೀಣ್ಯಹಾನಿ ಪ್ರತ್ಯಹಮಾಮಭೈಕ್ಷಮಾಚರೇತ್। ತತಃ ಪಕ್ವಾನ್ನಭೈಕ್ಷಮ್। ತ್ರ್ಯಹಂ ಮನ್ತ್ರವತ್ಪರಿಹಿತಿಮೇವ ವಸೀತ॥

ಚತುರ್ಥೇ ಹನ್ಯಾಚಾರ್ಯೋನ್ಯದ್ವಸ್ತ್ರಂ ತೂಷ್ಣೀಂ ಪರಿಧಾಪ್ಯ ಪರಿಹಿ ತೇ ವಾನಸೀ ವಟುನಾ ಗುರೋವಾಸಸ್ತೇ ದದಾಮಿ ಇತಿ ದತ್ತೇ ಗುರುಃ ಸಪ್ತದಶಕೃತ್ವೋಪಾನ್ಯ **ಯಸ್ಯ ತ** ಇತ್ಯನೇನಾದದೀತ। ಅತ್ರ ಯಜ್ಞೋಪವೀತ ಮೇಖಲಾಜಿನ ದಂಡಾಶ್ಚ ಮಂತ್ರೇಣ ಸಂಧಾರ್ಯ ಪುರಾಣಾನ್ ಪಾಲಾಶೇ ಸ್ಥಾಪಯಂತಿ। ಅತ್ರ ಪುಣ್ಯಾಹವಾಚನ ವಸಂತಮಾಧವಪೂಜಾಂಕುರವಿಸರ್ಜನಸ್ತಂಭಪೂಜಾಂ ಚ ಕರ್ತವ್ಯಮ್। ತತೋ ಬ್ರಾಹ್ಮಣಾಶೀರ್ವಚನಂ, ಫಲದಾನಾದಿ, ಭೂರಿದಾನಂ, ಬ್ರಾಹ್ಮಣ ಭೋಜನಂ ಚ॥

**॥ ಇತ್ಯುಪನಯನ ಪ್ರಯೋಗಃ ॥**

# ಸಂಧ್ಯೆಯ ವೈಶಿಷ್ಟ್ಯ

ಬ್ರಹ್ಮೀಭೂತ ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಮಹಾತಪಸ್ವಿ ಶಾರಾದಾಪೀಠದ ಮಾಣಿಕ್ಯ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ಶಿಷ್ಯವರ್ಗಕ್ಕೆ ಸಂಧ್ಯಾ ವೈಶಿಷ್ಟ್ಯದ ಬಗ್ಗೆ ಅನುಗ್ರಹಿಸಿದ ಒಂದು ಹಿತೋಕ್ತಿ ಹೀಗಿದೆ :

**ವಿಪ್ರೋ ವೃಕ್ಷಃ ತಸ್ಯ ಮೂಲಂ ಹಿ ಸಂಧ್ಯಾ**
**ವೇದಾಃ ಶಾಖಾಃ ಸರ್ವಕರ್ಮಾಣಿ ಪತ್ರಂ ।**
**ತಸ್ಮಾನ್ಮೂಲಂ ಸರ್ವಯತ್ನೇನ ರಕ್ಷೇತ್**
**ಮೂಲೇ ನಷ್ಟೇ ನೈವ ಶಾಖಾ ನ ಪತ್ರಮ್ ॥**

''ಬ್ರಾಹ್ಮಣನೆಂಬ ವೃಕ್ಷಕ್ಕೆ ಸಂಧ್ಯಾವಂದನೆಯೇ ಬೇರು; ವೇದಗಳೇ ರೆಂಬೆಗಳು; ಶಾಸ್ತ್ರವಿಹಿತ ಕರ್ಮಗಳೇ ಎಲೆಗಳು; ವೃಕ್ಷವು ಹುಲುಸಾಗಿ ಬೆಳೆದು ಫಲವನ್ನು ಕೊಡಬೇಕಾದರೆ ಅದರ ಬೇರನ್ನು ಯತ್ನದಿಂದ ರಕ್ಷಿಸಿಕೊಳ್ಳಬೇಕು. ಮೂಲವಾದ ಬೇರೇ ನಷ್ಟವಾದರೆ ರೆಂಬೆಗಳೆಲ್ಲಿ, ಎಲೆಗಳೆಲ್ಲಿ, ಮತ್ತೆ ಫಲದ ಆಸೆಯಾದರೂ ಎಲ್ಲಿಯದು?''

ಇಂತಹ ಗುರೂಪದೇಶವನ್ನು ಪಾಲಿಸುವ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನವೇ ಈಗ ತಮ್ಮ ಕೈಯಲ್ಲಿರುವ ಗ್ರಂಥ.

**ಸಂಧ್ಯಾ ಹೀನೋಽಶುಚಿರ್ನಿತ್ಯಂ ಅನರ್ಹಃ ಸರ್ವಕರ್ಮಸು ।**
**ಯದನ್ಯತ್ ಕುರುತೇ ಕರ್ಮ ನ ತಸ್ಯ ಫಲಭಾಗ್ಭವೇತ್ ॥**

2016 ₹ 50/-